# ಕೆಂಧೂಳಿ

ಹೊಸ ಸವಾಲುಗಳ ಕನಸು

ಪ್ರಧಾನ ಸಂಪಾದಕ: ತುರುವನೂರು ಮಂಜುನಾಥ

KENDHOOLI *Kannada Weekly*

kendhooli.com/e-paper/

**ಡಾ.ರಾಜ್ ಗುಣಗಳನ್ನು ಆಹ್ವಾನಿಸಿಕೊಂಡಿದ್ದ ಪುನೀತ್**



ಶಶಿಧರ್ ಭಟ್ ಅವರ ಲೇಖನದಲ್ಲಿ...

ಸಂಪುಟ - 01 | ಸಂಚಿಕೆ - 51 | ಪುಟ - 16 | ರೂ. 16/- | ನವೆಂಬರ್ 04 ರಿಂದ ನವೆಂಬರ್ 10, 2021 MAG(2)Npp/49/2020-21



## ರಾಜ್ ಜೊತೆಯಾದ ರಾಜಕುಮಾರ



# ದೇಹ ದಂಡಿಸುವವರಿಗೆ ಎಚ್ಚರಿಕೆ!


## ಜೆಡಿಎಸ್: ಸೋತ ಪ್ರಯೋಗ

ಎಂ.ಕೆ. ಭಾಸ್ಕರ ರಾವ್ ಅವರ ಅಂಕಣದಲ್ಲಿ...


## ಕಾಣದಂತೆ ಮಾಯವಾದನಾ ಲೋಹಿತ

## ಉಪ ಸಮರದಲ್ಲಿ ತೈಲಬೆಲೆ ಏರಿಕೆಗೆ ನೀಡಿದ ಉತ್ತರ

# ಪುನೀತ್ ಎಂಬ ಬರಿದಾದ ಭರವಸೆಯ ಬೆಳಕು...!




ನಾನು ಭೇಟಿಯಾದ ಅತ್ಯಂತ ಸರಳ ವ್ಯಕ್ತಿ...ಅಷ್ಟು ಎತ್ತರಕ್ಕೆ ಬೆಳದಿದ್ದರೂ ವಿನಯತೆಯೇ ಅವರಲ್ಲಿ ತುಂಬಿ ತುಳುಕುತ್ತಿತ್ತು.. ಚಿತ್ರರಂಗದ ಅಪರೂಪದ ವ್ಯಕ್ತಿ.. ಪುನಿತ್ ದೊಡ್ಡ ನಟನಾದರೂ ಹಮ್ಮ-ಬಿಮ್ಮು ಇರಲಿಲ್ಲ ಸರಳತೆಯ ಮೂರ್ತಿ..ಆ ವ್ಯಕ್ತಿಯ ಸ್ನೇಹಪರತೆ ಚಿತ್ರರಂಗದಲ್ಲಿ ಯಾರಿಗೂ ಬರಲು ಸಾಧ್ಯವಿಲ್ಲ..ಇಂತಹ ನೂರಾರು ಹೃದಯ ತುಂಬಿದ ಮಾತುಗಳು ಕೇವಲ ಕನ್ನಡ ಚಿತ್ರರಂಗವಲ್ಲ, ಕರ್ನಾಟಕ ರಾಜಕಾರಣಿಗಳಷ್ಟೇ ಅಲ್ಲ ದೇಶದ ಹಲವಾರು ರಾಜ್ಯಗಳ ನಟರೂ, ಟಾಲಿವುಡ್,ಬಾಲಿವುಡ್, ಸೇರಿದಂತೆ ತಮಿಳುನಾಡು,ಕೇರಳದ ಜೊತೆಗೆ ಎಲ್ಲಾ ರಾಜ್ಯಗಳ ಚಿತ್ರರಂಗದ ದಿಗ್ಗಜ್ಜರು ರಾಜಕಾರಣಿಗಳು,ಕ್ರಿಕೆಟಿಗರು, ಹೃದಯತುಂಬಿ ಹೇಳಿದ ಮಾತುಗಳಿವು...



"ಬಹುಶಃ ಇಂತದ್ದೊಂದು ಅವಘಡ ಸಂಭವಿಸುತ್ತದೆ ಎಂದೂ ಯಾರೂಊಹಿಸಲಾರದ ಆ ಅಘಾತ ನಿಜಕ್ಕೂ ಇಡೀ ಭಾರತೀಯ ಚಿತ್ರರಂಗದ ಒಂದು ದೊಡ್ಡ ನಕ್ಷತ್ತವನ್ನು ಕಳೆದುಕೊಂಡಂತಾಗಿದೆ ". ಪ್ರತಿಭಾವನ್ವಿತ ನಟ ಹಲವಾರು ಕನಸುಗಳನ್ನು ಹೊತ್ತು ವಿಭಿನ್ನ ಚಿತ್ರಗಳನ್ನು ಮಾಡುತ್ತಲೇ ಚಿತ್ರರಸಿಕರ ಮನಸ್ಸನ್ನು ಗೆದ್ದಿದ್ದ ವಿನಯಮೂರ್ತಿಯ ಆ ಮೌನ ನಿಜಕ್ಕೂ ಭರಿಸಲಾರದ ನೋವು..

ಪುನೀತ್ ಎಂಬ ಬೆಳಕು ನಡು ಹಗಲಲ್ಲೇ ಹೀಗೆ ಆರಿ ಹೋಗುತ್ತದೆ ಎಂದು ಯಾರು ನಿರೀಕ್ಷಿಸಿರಲಿಲ್ಲ..ಆತನ ಮನದಲ್ಲಿ ತುಂಬಿದ ನೂರಾರು ಕನಸುಗಳು, ಹೊಸ ಹೊಸ ಯೋಚನೆಗಳು. ಆದುನಿಕ ಚಿತ್ರೋದ್ಯಮದ ಬಗ್ಗೆ ಕಂಡ ಆಲೋಚನೆಗಳ ಪರಿ ನಿಜಕ್ಕೂ ಅಚ್ಚರಿ. ಅವರು ಈ ಹೊತ್ತಿನ ಚಿತ್ರರಂಗದ ಬೆಳವಣಿಗೆಯ ಬೆಳಕಾಗಿದ್ದರು ..ಅಂತಹ ಬೆಳಕಿನ ದಾರಿಯಲಿ ನಡೆಯುವಾಗ ಯಾರೂ ಊಹಿಸಲಾರದ ಈ ಘಟನೆ ಇದೆಯಲ್ಲ ಇದು ಇಡೀ ಚಿತ್ರರಂಗಕ್ಕಲ್ಲ ಕರ್ನಾಟಕವೇ ಒಬ್ಬ ಯೂತ್ ಐಕಾನ್ ಅನ್ನು ಕಳೆದು ಕೊಂಡಂತಾಗಿದೆ.

ಯಶಸ್ವಿ ಸಿನಿಮಾ ಕಥೆಯ ಆಯ್ಕೆ ಮತ್ತು ಅದಕ್ಕೆ ತಕ್ಕ ನಟನೆಯ ಮೂಲಕ ಒಬ್ಬ ಸ್ಟಾರ್ ಆಗಿ ಬೆಳೆಯುವುದು ಸಿನಿಮಾ ಪ್ರಪಂಚದಲ್ಲಿ ಒಂದು ಸಾಧನೆಯೇ. ಆದರೆ, ತೆರೆಯ ಮೇಲಿನ ನಟನೆಯ ಆಚೆಗೆ ನಿಜ ಬದುಕಿನಲ್ಲಿ ಸ್ಟಾರ್ ಆಗಿ ಬೆಳೆಯುವುದು, ಜಾತಿ, ಧರ್ಮ, ಮತಗಳ ಕೂಪದಲ್ಲಿ ಕೊಳೆಯುತ್ತಿರುವ ಈ ಸಮಾಜದಲ್ಲಿ ಎಲ್ಲವನ್ನೂ ಮೀರಿ ಒಬ್ಬ ಆದರ್ಶ ಐಕಾನ್ ಆಗಿ ಬೆಳೆಯುವುದಿದೆಯಲ್ಲ ಅದು ಯಾವ ವಿವಾಧಗಳಿಲ್ಲದೇ, ಗಾಸಿಪ್ ಗಳಿಲ್ಲದೇ ಎಲ್ಲರ ಮೆಚ್ಚಿನ ಮನೆಮಗನಾಗಿ ಬೆಳೆಯುವುದು ಅಷ್ಟು ಸರಳವಲ್ಲ. ಹಾಗೆ ಬೆಳೆದದ್ದು ಪುನೀತ್ ಹೆಚ್ಚುಗಾರಿಕೆ! ಅದು ಸಾಧನೆಯನ್ನೂ ಮೀರಿದ ಸಾಧನೆ. ತಮ್ಮ ವ್ಯಕ್ತಿತ್ವದ ಘನತೆ ಮತ್ತು ಸರಳತೆಯ ಮೂಲಕ ಪುನೀತ್ ಎಂಬ 'ಬೆಟ್ಟದ ಹೂವು' ಹಾಗೆ ಎಲ್ಲರ ಎದೆಯ ಅನುರಾಗದ ಹೂವಾಗಿ ಅರಳಿತ್ತು. ಎಲ್ಲರ ಮನ ಮನದಲ್ಲೂ ಆ ಸುಗಂಧದ ಪರಿಮಳ ಬೀಸುತ್ತಲೇ ಇತ್ತು.

ಪುನಿತ್ ಎಂಬ ಸೂಜಿಗಲ್ಲಿನ ಈ ಪರಿಮಳದ ಹಿಂದೆ ಇದ್ದದ್ದು ಡಾ.ರಾಜ್ ಎಂಬ ಕನ್ನಡದ ಸಾಂಸ್ಕೃತಕ ವ್ಯಕ್ತಿಯ ಸಂಸ್ಕಾರ.ಆ ಆಲದ ಮರದ ಅಡಿಯಲ್ಲಿ ಬೆಳದ ಈ ರಾಜಕುಮಾರ ನಾಡಿನೆಲ್ಲಡೆ ಡಾ.ರಾಜ್ ಅವರದೇ ಜಾಡು ಹಿಡಿದಿದ್ದು ಜೊತೆಗೆ ಸಮಾಜ ಸೇವೆಯ ಮೂಲಕ ನಡೆದದ್ದು ಮತ್ತಷ್ಟು ಯಶಸ್ಸಿಗೆ ಕಾರಣವಾಯಿತು.

ಕನ್ನಡ ಚಲನಚಿತ್ರರಂಗದಲ್ಲಿ ಒಂದು ಕಡೆ ಹಸಿಬಿಸಿ ಪ್ರಣಯ, ಮಚ್ಚು ಲಾಂಗಿನ ಹೊಡೆದಾಟ, ಶೌರ್ಯ ಪರಾಕ್ರಮದ ಪ್ರದರ್ಶನದ ಸಿನಿಮಾಗಳ ಮೂಲಕ ತಮ್ಮ ಸಮಕಾಲೀನ ನಟರು ವಿಜೃಂಭಿಸುತ್ತಿರುವಾಗಲೂ ಪುನೀತ್‌ಅವರು ಅರಸು, ರಾಜಕುಮಾರ, ಮೈತ್ರಿ, ಪೃಥ್ವಿಯಂತಹ ಸಿನಿಮಾಗಳ ಮೂಲಕ ತಮ್ಮದೇ ಆದ ಭಿನ್ನ ಹಾದಿಯನ್ನು ತುಳಿದಿದ್ದರು. ಆ ಮೂಲಕ ಕಳೆದಹೋಗುತ್ತಿರುವ ಮಾನವೀಯ ಮೌಲ್ಯಗಳ ಮಹತ್ವವನ್ನು ಸಿನಿಮಾದಂತಹ ಜನಪ್ರಿಯ ಮಾಧ್ಯಮದ ಮೂಲಕವೂ ಸಾರುವ ಪ್ರಯತ್ನ ಮಾಡಿದ್ದರು. ಆ ಕಾರಣಕ್ಕೇ ಕಳೆದ ಒಂದು ದಶಕದ ಅವರ ಸಿನಿಮಾ ಯಾನ, ಬಹುತೇಕರನ್ನ ಸೆಳೆಯಲಿಕ್ಕೆ ಸೆಳೆಯಲು ಕಾರಣವಾಯಿತು.ಟಿ.ವಿ.ರಿಯಾಲಿಟಿ ಶೋಗಳಲ್ಲೂ ಅವರು ಆಯ್ಕೆ ಮಾಡಿಕೊಂಡ ರೀತಿಯೇ ಅವರಲ್ಲಿ ಕನ್ನಡಕ್ಕೆ ಮತ್ತೊಬ್ಬ ಅಣ್ಣಾವ್ರನ್ನು ಕಾಣುವಂತಾಯಿತು ಎಂಬ ಮಾತುಗಳು ಕೇಳಿಬರಲು ಸಾಧ್ಯವಾಯಿತು. ದೊಡ್ಡಮನೆಯ ನಿಜವಾದ ವಾರಸುದಾರ ಪುನೀತ್, ತಂದೆಗೆ ತಕ್ಕ ಮಗ ಎಂಬ ಮಾತುಗಳು ಎಲ್ಲೆಲ್ಲೂ ಕೇಳಿಬರಲು ಸಾಧ್ಯವಾಯಿತು.

ತೆರೆಯ ಆಚೆ ಸಾರ್ವಜನಿಕ ಕಾರ್ಯಕ್ರಮಗಳು, ಸಭೆ ಸಮಾರಂಭಗಳು, ಖಾಸಗೀ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಾಗ ಪುನೀತ್ ನಡೆ ನುಡಿ, ಅವರ ವಿನೀತ ಸ್ವಭಾವ, ಯಾವ ಹಮ್ಮುಬಿಮ್ಮು ಇರದ ಸರಳತೆ, ದೊಡ್ಡಮನೆಯ ಮಗನಾಗಿ, ಸೂಪರ್ ಸ್ಟಾರ್ ಮಗನಾಗಿ, ಸ್ವತಃ ಸೂಪರ್ ಸ್ಟಾರ್ ಆಗಿಯೂ ಪುನೀತ್ ಪುಟ್ಟ ಮಗುವಿನೆದರೂ ತಲೆಬಾಗಿ ಮಾತನಾಡುವ ವಿನಯ ನಾಡಿನ ಉದ್ದಗಲಕ್ಕೂ ಅವರನ್ನು ಜನರೆದೆಯ 'ರಾಜಕುಮಾರ'ನನ್ನಾಗಿ ಮಾಡಿದ್ದವು. ಅವರು ನಡೆಸುತ್ತಿದ್ದ ಅನಾಥಾಶ್ರಮಗಳು, ವೃದ್ಧಾಶ್ರಮಗಳು, ಗೋಶಾಲೆಗಳು, ಬಡಮಕ್ಕಳ ಉಚಿತ ಶಿಕ್ಷಣ ಶಾಲೆಗಳು, ಹಲವು ಸಂಕಷ್ಟದ ಹೊತ್ತಲ್ಲಿ ಜನರಿಗೆ ಚಾಚುತ್ತಿದ್ದ ನೆರವಿನ ಹಸ್ತ... ಎಲ್ಲವೂ ಅವರನ್ನು ಸಿನಿಮಾದ ಆಚೆಗೂ ರಿಯಲ್ ಸ್ಟಾರ್ ಆಗಿಸಿದ್ದವು. 'ಯುವರತ್ನ' ಎಂಬ ಮೆಚ್ಚುಗೆಯ ಮಾತಿಗೆ ಪಾತ್ರವಾಗಿಸಿದ್ದವು.

ಡಾ ರಾಜ್ ಕುಮಾರ್ ಅವರಂಥ ಮಹಾ ನಟ ಮತ್ತು ಮೇರು ವ್ಯಕ್ತಿತ್ವದ ನೆರಳಲ್ಲಿ, ಅವರ ಮಗನಾಗಿ ಬೆಳೆದರೂ, ಅವರ ನೆರಳಿಂದ ಆಚೆ ಬಂದು ತಮ್ಮದೇ ಸ್ವಂತ ಪ್ರತಿಭೆ, ಘನತೆಯ ಮೂಲಕ ಒಂದು ಪ್ರತ್ಯೇಕ ವ್ಯಕ್ತಿತ್ವ, ಒಂದು ಸ್ಟಾರ್ ಗಿರಿ ಕಟ್ಟಿಕೊಳ್ಳುವುದು ಸರಳವಾಗಿರಲಿಲ್ಲ. ಆದರೆ, ಪುನೀತ್ ಹೀರೋ ಆಗಿ ನಟನೆ ಆರಂಭಿಸಿದ ಕೆಲವೇ ವರ್ಷಗಳಲ್ಲಿ ಅಂತಹದ್ದೊಂದು ವಿಶಿಷ್ಟ ಸ್ಥಾನವನ್ನು ಸ್ವಂತ ಪರಿಶ್ರಮ ಮತ್ತು ಪ್ರತಿಭೆಯ ಮೂಲಕ ಕಟ್ಟಿಕೊಂಡರು. ದೊಡ್ಡಮನೆಯ ಪ್ರಭಾ ವಲಯದ ಆಚೆಗೆ ಬೆಳೆದು ನಿಂತರು. 'ಪ್ರೇಮದ ಕಾಣಿಕೆ' ಸಿನಿಮಾದಲ್ಲಿ ಆರು ತಿಂಗಳ ಮಗುವಾಗಿದ್ದಾಗಲೇ ಮೊದಲ ಬಾರಿಗೆ ತೆರೆ ಮೇಲೆ ಕಾಣಿಸಿಕೊಂಡ ಅಪ್ಪು, ಇತ್ತೀಚಿನ 'ಯುವರತ್ನ'ದವರೆಗೆ ವಿಸ್ತರಿಸಿರುವ ಅವರ ಸಿನಿ ಪಯಣದ ಉದ್ದಕ್ಕೂ 'ಪವರ್' ಸ್ಟಾರ್ ಆಗಿಯೇ ನಟಿಸಿದ್ದಾರೆ. ತೆರೆಯ ಮೇಲೆ ಅವರಿದ್ದರೆ, ಆ ದೃಶ್ಯಕ್ಕೇ ಒಂದು ಪಾಸಿಟಿವ್ ಎನರ್ಜಿ ಎಂಬಂತೆ ಅವರ ಇರುವಿಕೆ ಇರುತ್ತಿತ್ತು. ಹಾಗಾಗಿಯೇ ಅವರು ಅಭಿಮಾನಿಗಳ ಪಾಲಿಗೆ ಪವರ್ ಸ್ಟಾರ್ ಆಗಿದ್ದರು.

ಮಡದಿ, ಮಕ್ಕಳೊಂದಿಗೆ ಪುನೀತ್ ರಾಜ್ ಕುಮಾರ್ ಒಬ್ಬ ಅಪ್ಪಟ ಕುಟುಂಬಿಯಾಗಿದ್ದರು. ಪುನೀತ್ ನಟನಾಗಿ ಅಷ್ಟೇ ಅಲ್ಲದೆ, ಹಾಡುಗಾರನಾಗಿ, ನಿರ್ಮಾಪಕನಾಗಿಯೂ ಅವರು ಕನ್ನಡ ಸಿನಿಮಾ ರಂಗದಲ್ಲಿ ಎಂದೆಂದೂ ಅಳಿಯದ ಛಾಪು ಮೂಡಿಸಿದರು ಜೊತೆಗೆ ಕೋಟೆ ಕಟ್ಟಿಕೊಂಡ ಕನ್ನಡ ನಟರ ಈಗೋ ದಾಟಿ ಎಲ್ಲರಿಗೂ ಸ್ಪಂದಿಸುವ ಹೊಸಬರಿಗೆ ಪ್ರೋತ್ಸಾಹಿಸುವ ಹೊಸ ಹಾದಿ ತೆರೆದರು.

ಇಂತಹ ಎಲ್ಲಾ ಸಾಧನೆಗಳ ಶಿಖರವೇರುತ್ತಿರುವಾಗಲೇ ದಿಢೀರನೆ ಆದ ಪುನೀತ್ ನ ಈ ನಿರ್ಗಮನವು ನಾಡಿಗೆ ನಾಡೆ ಯಾಕೆ ದೇಶವೆ ಕಣ್ಣೀರು ಮಿಡಿಯುವಂತಾಯಿತು.. ಆಗಲೇ ಎಲ್ಲರ ಬಾಯಿಂದಲೂ ಬಂದದ್ದು " ದೇವರೇ ನೀನೆಷ್ಟು ಕ್ರೂರಿ" ಎನ್ನುವ ಮಾತು. ಬಹುಶಃ ಇಂತಹ ಮಾತುಗಳು ಯಾರು ಅಗಲಿದಾಗಲೂ ಬಂದಿದ್ದಲ್ಲ ಆದರೆ ಪುನಿತ್ ಎನ್ನುವ ವಿನೀತಭಾವದ ಈ ನಗುಮುಖದ ಯೂತ್ ಐಕಾನ್‌ಗೆ ನಿಜವಾದ 'ರಾಜಕುಮಾರನಿಗೆ ಅರ್ಧದಾರಿಯಲ್ಲೇ ವಿದಾಯ ಹೇಳುವ ಸಂಕಟ ಇದೆಯಲ್ಲ ಅದು ಯಾರಿಗೂ ಬರಬಾರದು. ಹಾಗೆ ಬಂದೊದಗಿದ ಈ ದಿಢೀರ್ ಘಟನೆಗೆ ಎಲ್ಲರ ದುಃಖ ಉಮ್ಮಳಿಸಿದೆ. ಆಗಲೇ ಎಲ್ಲರೂ ಹೇಳುತ್ತಿದ್ದರು " ಅಪ್ಪನ ಬಿಟ್ಟು ಇರಲಾರದ ಪುಟ್ಟ ಪುನೀತ ಅಪ್ಪನ ಅಪ್ಪುಗೆಗೆ ಎಷ್ಟು ಬೇಗ ಹೋದರು.. ಅಪ್ಪ-ಅಮ್ಮ ಮಗನನ್ನು ಇಷ್ಟು ಬೇಗ ಕರೆಸಿಕೊಂಡು ಬಿಟ್ಟರಾ..? ಎನ್ನುವ ಮಾತುಗಳು ಪ್ರತಿದ್ವನಿಸುತ್ತಲೇ ಇವೆ. ಹೀಗೆಯೇ ಕನ್ನಡದ ಹಲವಾರು ಭರವಸೆಯ ತಾರೆಗಳು ಈ ನೆಲದಿಂದ ದೂರವಾಗಿದ್ದಾರೆ ನಿಜಕ್ಕೂ ಕನ್ನಡ ಸಿನಿಮಾ ಪ್ರಪಂಚದ ವಿಭನ್ನತೆಗಳಿಗೆ ದೇಸಿಯತೆಯನ್ನು ನೀಡಲೆತ್ನಿಸುತ್ತಿದ್ದ ಒಬ್ಬ ಶಂಕರ್‌ನಾಗ್‌ನಂತವರನ್ನು ಕಿತ್ತುಕೊಂಡ ವಿಧಿ ಆದಾದ ಕೆಲಸವೇ ತಿಂಗಳುಗಳಲ್ಲಿ ಸುನಿಲ್‌ಎನ್ನುವ ಇನ್ನೊಬ್ಬ ಭರವಸೆಯ ನಟನನ್ನು ಕಿತ್ತುಕೊಂಡಿತ್ತು. ಇದೆಲ್ಲದಕ್ಕಿಂತಲೂ ಕನ್ನಡದ ಶಕ್ತಿಯಂತಿದ್ದ ರಾಜ್ ನಂತರದಲ್ಲಿ ಕನ್ನಡದ ಯಜಮಾನ ವಿಷ್ಣುವರ್ಧನ್ ಕೂಡ ಅಕಾಲಿಕವಾಗಿ ಮರಣಹೊಂದಿದಾಗಲೂ ಇಂತದ್ದೆ ಆತಂಕ ಮನೆ ಮಾಡಿತ್ತು. ಭರವಸೆ ಚಿಗುರುಗಳು ಹೀಗೆ ದುರಂತದ ದಾರಿ ಹಿಡಿದರೆ ಸಾಂಸ್ಕೃತಿಕ ವಲಯದ ಗತಿಏನು? "ಹೇ ವಿದಿಯೇ ನಿನೆಷ್ಟು ಕ್ರೂರಿ" ಎನ್ನುವ ಮಾತನ್ನು ಹೇಳಲೇ ಬೇಕಾಗುತ್ತದೆ..


## ಪ್ರಿಯ ಓದುಗರೆ

'ಕೆಂಧೂಳಿ' ಪತ್ರಿಕೆಯನ್ನು ಒಂದು ಒಳ್ಳೆ ಉದ್ದೇಶದಿಂದ ಆರಂಭಿಸಲಾಗಿದೆ, ಗುಣಮಟ್ಟ,ಓದುಗರಿಗೆ ಅಗತ್ಯ ವಿಶ್ಲೇಷಣಾತ್ಮಕ ವರದಿಗಳು ಸೇರಿದಂತೆ ಯಾವುದರಲ್ಲೂ ರಾಜೀಯಾಗದೆ ತನ್ನ ಗುಣಾತ್ಮಕವನ್ನು ಕಾಯ್ದುಕೊಂಡು ನಿಮ್ಮ ಮುಂದೆ ಬರಲಿದೆ. ಹೀಗಾಗಿ ಪತ್ರಿಕೆಗೆ ಓದುಗರೆ ಅಗತ್ಯವಾಗಿರುವುದರಿಂದ ಆದಷ್ಟು ಕೊಂಡು ಓದಿ ಪತ್ರಿಕೆಯನ್ನು ಬೆಳಸಿ ಎನ್ನುವುದು ನಮ್ಮ ಕಳಕಳಿಯ ಮನವಿ. ಅಲ್ಲದೆ ಪತ್ರಿಕೆ ಬೆಳವಣಿಗೆಗೆ ಆರ್ಥಿಕ ಸಹಾಯವೂ ಅಷ್ಟೆ ಅಗತ್ಯವಾಗಿದೆ, ಈ ಕಾರಣಕ್ಕಾಗಿ ತಾವು ಚಂದಾದಾರ ರಾಗುವ ಮೂಲಕ ತಮ್ಮ ಪತ್ರಿಕೆ ಬೆನ್ನೆಲುಬಾಗಿ ನಿಂತುಕೊಳ್ಳಬೇಕು ಎನ್ನುವುದು ತಮ್ಮ ಬೇಡಿಕೆ.

-ಪ್ರಧಾನ ಸಂಪಾದಕ

| | |
|---|---|
| ವಾರ್ಷಿಕ | 1100 |
| ಅರ್ಧವಾರ್ಷಿಕ | 600 |
| ಎರಡು ವರ್ಷ | 2200 |
| ಆರು ವರ್ಷ | 6600 |
| ಪೋಷಕರು | 10,000 |
| ಮಹಾಪೋಷಕರು | 20,000 |

ಬೇಕಾಗಿದ್ದಾರೆ : 'ಕೆಂಧೂಳಿ' ವಾರ ಪತ್ರಿಕೆಗೆ ಜಿಲ್ಲಾ ವರದಿಗಾರರು/ಏಜೆಂಟರು ಬೇಕಾಗಿದ್ದಾರೆ. ಎಲ್ಲಾ ಜಿಲ್ಲೆಗಳಿಂದಲೂ ವರದಿಗಾರರನ್ನು ನೇಮಕ ಮಾಡಲಾಗುತ್ತಿದೆ ಆಸಕ್ತರು ಈ ದೂರವಾಣಿಗೆ ಸಂಪರ್ಕಿಸಬಹುದು. 9900633109






ಪ್ರಧಾನ ಸಂಪಾದಕ
ತುರುವನೂರು ಮಂಜುನಾಥ

ಪುಟ ವಿನ್ಯಾಸ
ಸೂರ್ಯಕುಮಾರ್ ಜೆ.ಎನ್.

ಅನಾವರಣ

# ಸಿಎಂ ಬೊಮ್ಮಾಯಿ ನಿರ್ವಹಿಸಿದ ಜವಾಬ್ದಾರಿ ಮೆಚ್ಚುವಂತದ್ದು

ಸರ್ಕಾರದ ಜವಾಬ್ದಾರಿ ಎಂದರೆ ಇದೆ ಅಲ್ವೆ.. ಯಾವಾಗ ಏನು ಮಾಡಬೇಕು ಯಾವ ಸಮಯದಲ್ಲಿ ಯಾವ ಪೂರ್ವಸಿದ್ದತೆ ತಗೆದುಕೊಳ್ಳಬೇಕು ಎನ್ನುವ ಅರಿವಿದ್ದಾಗ ಎಲ್ಲವೂ ಯಶಸ್ವಿಯಾಗುತ್ತವೆ, ಹೌದು ಪುನೀತ್ ಸಾವು ವಿಷಯ ತಿಳಿಯುತ್ತಿದ್ದಂತೆ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಮಾಡಿದ ತೀರ್ಮಾನ ಮತ್ತು ಅಧಿಕಾರಿಗಳ ಸಭೆ ಆ ಸಭೆಯಲ್ಲಿ ಇರಬೇಕಾದ ಪೂರ್ವಯೋಜಿತ ಸಿದ್ದತೆಗಳನ್ನು ಕುರಿತು ಅಧಿಕಾರಿಗಳಿಗೆ ಸೂಚಿಸಿದ್ದಿದೆಯಲ್ಲ ಅದು ಅವರ ಅಷ್ಟು ಯಶಸ್ವಿಗೆ ಕಾರಣವಾಗಿದೆ.

ಯಾಕೆಂದರೆ ಬಸವರಾಜ್ ಬೊಮ್ಮಾಯಿ ಮುಂದೆ ಈಗಾಗಲೇ ಮೂರು ಸ್ಟಾರ್ ನಟರ ಸಾವು ಮತ್ತು ಆ ಸಾವಿನ ಸನ್ನಿವೇಶಗಳ ಕುರಿತ ಆದ ಘಟನೆಗಳು ಅವರ ಮುಂದಿದ್ದವು ಆ ಘಟನೆಗಳ ಆದ ಅವಘಡಗಳ ಬಗ್ಗೆ ತಿಳಿದುಕೊಂಡಿದ್ದರು ಹಗಾಗಿ ಆ ತಪ್ಪು ಆಗಬಾರದು ಎನ್ನುವ ಕಾರಣಕ್ಕೆ ಅವರು ಮಾಡಿದ ವ್ಯವಸ್ಥೆ ಇತ್ತಲ್ಲ ಬಹುಶಃ ಯಾವ ಮುಖ್ಯಮಂತ್ರಿಗಳೂ ಮಾಡದ ರೀತಿಯಲ್ಲಿ ಮಾಡಿ ಸೈ ಎನಿಸಿಕೊಂಡರು ಹಾಗಾಗಿಯೇ ಶಾಂತಿಯುತವಾಗಿ ನಡೆಯಿತು. ಒಂದು ವೇಳೆ ಇಂತ ಪೂರ್ವಸಿದ್ದತೆಗಳು ತಗೆದುಕೊಳ್ಳದೆ ಹೋಗಿದ್ದರೆ ಆಗುವ ಅವಘಡಗಳಿಗೆ ಬೊಮ್ಮಾಯಿ ಕಾರಣರಾಗುತ್ತಿದ್ದರು.

ಮುಖ್ಯಮಂತ್ರಿಗಳಿಗೆ ಆರಂಭದಲ್ಲಿ ಪುನೀತ್‌ಅಸ್ವಸ್ತರಾಗಿದ್ದಾರೆ ಎನ್ನುವ ಸುದ್ದಿ ತಲುಪಿದಾಗ ಅವರು ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಾರಂಭದಲ್ಲಿದ್ದರು ಆದರೆ ಆ ಸುದ್ದಿ ತಲುಪಿದಾಗಲೂ ಒಂದಿಷ್ಟು ವಿಚಲಿತರಾದರೂ ಯಾರಿಗೂ ಆ ಸುದ್ದಿಯನ್ನು ತಲುಪಿಸದೆ ಅವಸರವಾಗಿ ಆ ಸಭೆಯನ್ನು ಮುಗಿದ ತಕ್ಷಣವೇ ಅವರು ಅಲ್ಲಿಂದ ಅವರು ಆಸ್ಪತ್ರೆಗೆ ತೆರಳಿದರು ..ಅಲ್ಲಿನ ಸ್ಥಿತಿ ನೋಡಿ ಸದ್ಯ ಸಾವಿನ ಸುದ್ದಿಯನ್ನು ಘೋಷಣೆ ಮಡದೆ ಅಲ್ಲಿಯೇ ಡಿಜಿಪಿ ಮತ್ತು ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ಮಾಹಿತಿ ತಲುಪಿಸಿ ಎಲ್ಲಡೆ ಪೊಲೀಸ್ ವ್ಯವಸ್ಥೆ ಮಾಡುವಂತೆ ಸಂದೇಶ ರವಾನಿಸಿದರು. ಆ ನಂತರ ಅವರು ಆಸ್ಪತ್ರೆ ಬಳಿ ಪುನೀತ್ ಇನ್ನಿಲ್ಲ ಎನ್ನುವ ಮಾಹಿತಿಯನ್ನು ತಿಳಿಸಿದರು.

ಆ ನಂತರ ಅವರು ಪೊಲೀಸ್ ಅಧಿಕಾರಿಗಳನ್ನು ಕರೆದು ಪರಿಸ್ಥಿತಿ ನಿಯಂತ್ರಣ ಕುರಿತಂತೆ ಮಾಹಿತಿ ನೀಡಿದರು ಎಲ್ಲಿಯೂ ಅಭಿಮಾನಿಗಳೊಂದಿಗೆ ಒರಟಾಗಿ ವರ್ತಿಸದಂತೆ ಕಟ್ಟುನಿಟ್ಟಾಗಿ ಹೇಳಿದ್ದರು. ಪ್ರತಿಯೊಂದು ಸೂಕ್ಷ್ಮ ವಿಚಾರಗಳನ್ನು ಗಮನಿಸಿ ಮಾರ್ಗದರ್ಶನ ಮಾಡಿದರು.



ಕಂಠೀರವ ಸ್ಟೇಡಿಯಂನಲ್ಲಿ ಪಾರ್ಥೀವ ಶರೀರ ಇರಿಸಿದ ನಂತರ ಮತ್ತೆಮತ್ತೆ ಭೇಟಿ ನೀಡಿದರು. ಮತ್ತೆ ಸಂಯಮದಿಂದಿರುವಂತೆ ಅಭಿಮಾನಿಗಳನ್ನು ಕೋರಿದರು. ಪೊಲೀಸ್ ಸಿಬ್ಬಂದಿಯೂ ಬಂದವರು ಅಂತಿಮ ದರ್ಶನ ದೊರೆಯದೇ ರೊಚ್ಚಿಗೇಳಾದ ಹಾಗೆ ನಿಭಾಯಿಸಿದರು.

ಮೂರು ದಿನಗಳ ಕಾಲ ಅಭಿಮಾನಿಗಳು ಪ್ರವಾಹದ ಹಾಗೆ ಬಂದು ಪುನೀತ್ ಅಂತಿಮ ದರ್ಶನ ಪಡೆದರು. ಎಲ್ಲಿಯೂ ಅಚಾತುರ್ಯಗಳಾಗಲಿಲ್ಲ. ಬೆಳಗ್ಗೆ 10ರ ನಂತರ ಮತ್ತೆ ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಸೇರುತ್ತಾರೆ. ಅಂತಿಮ ಮೆರವಣಿಗೆ ಸಾಗುವಾಗ ಅವರು ಉದ್ವೇಗದಿಂದ ಸಂಯಮ ಕಳೆದುಕೊಳ್ಳಬಹುದು ಎನ್ನುವ ದೃಷ್ಟಿಯಿಂದ ಮುಂಜಾನೆಯೇ ಪಾರ್ಥೀವ ಶರೀರ ಕಂಠೀರತವ ಸ್ಟುಡಿಯೋ ತಲುಪುವಂತೆ ಮಾರ್ಗದರ್ಶನ ಮಾಡಿದರು.

ಜನಮನ್ನಣೆ ಗಳಿಸಿದ ಪುನೀತ್ ಅವರಿಗೆ ಅಂತಿಮ ವಿದಾಯ ಹೇಳುವಾಗ ಗೊಂದಲವಾಗದಂತೆ ಕಂಠೀರವ ಸ್ಟುಡಿಯೋದಲ್ಲಿ ಅಂತ್ಯಕ್ರಿಯೆಗೆ ಸಂಬಂಧಿಸಿದ ಸಿದ್ಧತೆಗಳಲ್ಲಿ ಲೋಪವಾಗದ ಹಾಗೆ ನೋಡಿಕೊಂಡರು. ಹಿಂದಿನ ದಿನವೇ ಸ್ಟುಡಿಯೋಗೆ ತೆರಳಿ ಅಲ್ಲಿನ ಸಿದ್ಧತೆಗಳನ್ನು ವೀಕ್ಷಿಸಿ ಅಗತ್ಯ ಸಲಹೆಗಳನ್ನು ನೀಡಿದ್ದರು.

ಯಾಕೆ ಇಷ್ಟೆಲ್ಲಾ ಸಿದ್ದತೆಗಳನ್ನು ತಗೆದುಕೊಂಡಿದ್ದರು ಎನ್ನುವುದಕ್ಕೆ ಅವರಿಗೆ ರಾಜ್ ಕುಟುಂಬದ ಮೇಲೆ ಇರುವ ಪ್ರೀತಿ ಒಂದು ಕಡೆಯಾದರೆ ಮತ್ತೊಂದು ಕಡೆ ರಾಜ್ ಸಾವನ್ನಪ್ಪಿದಾಗ ಅವಘಡ ಇದೆಯಲ್ಲ ಅದನ್ನು ಇತಿಹಾಸದಲ್ಲಿ ಎಂದೂ ಮರೆಯಲಾಗುವುದಿಲ್ಲ ಲಕ್ಷೋಪಾದಿಯಲ್ಲಿ ಜನ ಹರಿದು ಬಂದು ತಮ್ಮ ಪ್ರೀತಿಯ ಅಣ್ಣನನ್ನು ನೋಡಲು ನೂಕು ನುಗ್ಗಲು ಆದಾಗ ಪರಿಸ್ಥಿತಿಯನ್ನು ಪೊಲೀಸರು ನಿಬಾಯಸಲಾಗದೆ ಕಂಗಾಲಾಗಿದ್ದರು ಯಾವಾಗ ಪರಸ್ಥಿತಿ ಕೈ ಮೀರಿತ್ತೋ ಆಗ ಫೈರ್‌ಕೂಡ ಮಾಡಿದ್ದರು. ರಾಜ್ ನಂತರ ಸಾವನ್ನಪ್ಪಿದ ವಿಷ್ಣುವರ್ಧನ್ ಸಾವು ಕೂಡ ಅಷ್ಟೆ ಘಲಭೆಗೆಕಾರಣವಾಯಿತು ಅಂದೂ ಕೂಡ ಅಭಿಮಾನಿಗಳ ದುಃಖದ ಕಟ್ಟೆ ಹೊಡೆದು

ಪುನೀತ್ ಪಾರ್ಥೀವ ಶರೀರಕ್ಕೆ ಅಂತಿಮ ನಮನ ಸಲ್ಲಿಸುವಾಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ದುಃಖತಪ್ತರಾದರು.. ಅವರ ಕಣ್ಣಾಲಿಗಳಲ್ಲಿ ನೀರು ತುಂಬಿತ್ತು. ಪುನೀತ್ ಮುಖವನ್ನು ಅಂಗೈಗಳಿಂದ ಮೆಲುವಾಗಿ ಸವರಿದರು. ಹಣೆಗೆ ಮುತ್ತಿಟ್ಟರು.

ರಾಜಕುಮಾರ್ ಅವರ ಕುಟುಂಬದೊಂದಿಗೆ ಆಪ್ತತೆ ಹೊಂದಿರುವ ಬೊಮ್ಮಾಯಿ ಅವರು ಪುನೀತ್ ಅವರನ್ನು ಸಣ್ಣಮಗುವಿನಿಂದಲೂ ನೋಡಿದವರು. ಮಾತನಾಡಿಸಿದವರು. ಇವರನ್ನು ಪುನೀತ್ ಆಕ್ಕರೆಯಿಂದ ಮಾಮ ಎಂದೇ ಕರೆಯುತ್ತಿದ್ದರು. ಅವೆಲ್ಲವೂ ನೆನಪಾಗಿ ಸಿಎಂ ಗದ್ಗದಿತರಾಗಿದ್ದರು.

ಇಡೀ ನಾಡಿಗೆ ನಾಡೇ ಪುನೀತ್ ರಾಜಕುಮಾರ್ ಅವರನ್ನು ಶಾಂತಿ ಸಂಯಮದಿಂದ ಬಿಳ್ಕೊಟ್ಟಿತು. ಇದಕ್ಕೆ ಸಂಪುಟದ ಸಚಿವರುಗಳು ಅಧಿಕಾರಿಗಳು ಶ್ರಮಿಸಿದ್ದಾರೆ. ಪುನೀತ್ ಅವರ ಕುಟುಂಬ ಸದಸ್ಯರು ಸಹಕಾರ ನೀಡಿದ್ದಾರೆ. ವರನಟ ರಾಜಕುಮಾರ್ ಅವರ ಸಾವು, ಅಂತ್ಯಕ್ರಿಯೆ ಸಂದರ್ಭದಲ್ಲಿ ಆದ ಕಹಿ ಘಟನೆಗಳು ಮರುಕಳಿಸದಿರಲಿ ಎಂಬುದೇ ಎಲ್ಲರ ಆಶಯವಾಗಿತ್ತು.

ರಾಜಕುಮಾರ್ ಅವರ ಅಂತಿಮ ಯಾತ್ರೆ ಸಂದರ್ಭದಲ್ಲಿ ಆದ ದುರ್ಘಟನೆಗಳು ಮರುಕಳಿಸಿದಂತೆ ಸರಕಾರ ಎಲ್ಲ ರೀತಿಯ ವ್ಯವಸ್ಥೆಗಳನ್ನು ಮಾಡಿತು. ಇದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜವಾಬ್ದಾರಿ ನಿರ್ವಹಿಸಿದ ರೀತಿ ಕಾರಣ .ಇಂತ್ತದ್ದೊಂದು ದೊಡ್ಡ ಜವಾಬ್ದಾರಿಯನ್ನು ಅತ್ಯಂತ ಸೂಕ್ತರೀತಿಯಲ್ಲಿ ನಿರ್ವಹಸಿದ ಬಗೆಯೇ ಎಲ್ಲವೂ ನಿರ್ವಿಘ್ನವಾಗಿ ನಡೆದವು.

ಸಿಎಂ ಸೂಚನೆ ಮೇರೆಗೆ ಪೊಲೀಸರು ನಿರ್ವಹಿಸಿದ ಜವಾಬ್ದಾರಿಯೂ ಕೂಡ ಅಷ್ಟೆ ಶಿಸ್ತಾಗಿ ಮೂಡಿತ್ತು ಬಹುಶಃ ಎಲ್ಲಿಯೂ ಯಾವುದೆ ಅಹಿತಕರ ಘಟನೆಗೆ ಅವಕಾಶವಾಗದಂತೆ ಮಾಡಿದ ಕಾನೂನು ಸುವೈವಸ್ಥೆ ಅಷ್ಟೆ ವ್ಯವಸ್ಥಿತವಾಗಿತ್ತು..ಇನ್ನೂ ಇದೇ ಮೊದಲಬಾರಿಗೆ ಬಿಬಿಎಂಪಿ ತನ್ನ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸಿದೆ ಇದೆಲ್ಲದಕ್ಕೂ ಸಿಎಂ ಅವರ ಕಟ್ಟಾಜ್ಞೆ ಮೇರೆಗೆ ಎಂದು ಬೇರೆ ಹೇಳಬೇಕಿಲ್ಲ

# ಪುನಿತ್ ಸಾವಿಗೂ 17ಕ್ಕೂ ಎಲ್ಲಿಯ ಸಂಬಂಧ..?

ಮೂಢನಂಬಿಕೆಗಳ ಕುರಿತು ಕತೆ ಹೇಳುವ ಟಿವಿಗಳ ಬಿಡಬೇಕು ಜನರಿಗೆ ಈ ಆಧುನಿಕ ಕಾಲದಲ್ಲೂ ಕೂಡ ಇಂತ ಕಟ್ಟುಕತೆಗಳನ್ನು ಜನರಿಗೆ ಹೇಳಲು ಹೋದರೆ ಅದು ಯಾವ ಸಂದೇಶ ರವಾನೆಯಾಗುತ್ತದೆ ಎನ್ನುವುದು ಗೊತ್ತಿದ್ದರೂ ಕೂಡ ಕೇವಲ ಟಿಆರ್‌ಪಿ ನೆಪ ಇಟ್ಟುಕೊಂಡು ಸೃಷ್ಟಿಮಾಡಿ ಪ್ರಸಾರ ಮಾಡುವ ಈ ಕತೆಗಳನ್ನು ನಿಲ್ಲಿಸಬೇಕು.

ಯಾಕೆಂದರೆ ಪುನಿತ್ ಸಾವು ನಂತರ ಅದೇನೋ 17 ರಂದು ಜನಸಿದವರು ಬೇಗ ಮರಣ ಹೊಂದುತ್ತಿದ್ದಾರೆ ಎನ್ನುವ ಒಂದು ತಿಕ್ಕಲುತನದ ಸಂಕೇತದ ಶಾಸ್ತ್ರವನ್ನು ನಂಬಿ ಮೂವರು ನಟರು ಇದೇ ದಿನಾಂಕ ಅವರೆಲ್ಲರೂ ಅಕಾಲಿಕ ಮರಣ ಹೊಂದಿದ್ದಾರೆ ಎನ್ನುವ ಆ ಕಾಕತಾಳಿಯ ಸಾವನ್ನು ಇಂತ ಮೂಢನಂಬಿಕೆಗೆ ತಾಳೆ ಹಾಕಿ ಬಿತ್ತರಿಸುವುದಿದೆಯಲ್ಲ ಅದನ್ನು ಏನನ್ನಬೇಕು ಹೇಳಿ..




ಅದರಲ್ಲೂ ಕೆಲ ಚಾನೆಲ್‌ಗಳು ಅದ್ಯಾರೋ ಬ್ರಹ್ಮಾಂಡ್ ಸ್ವಾಮಿ ಅಂತೆ ಆ ಸ್ವಾಮಿಯನ್ನು ದೂರವಾಣಿ ಮೂಲಕ ಅದನ್ನು ನಂಬಿಸಲು ಯಾವುದೋ ಶಾಸ್ತ್ರವನ್ನು ಇಟ್ಟುಕೊಂಡು ಹೇಳಿದ ಪರಿ ಇದೆಯಲ್ಲ ಅದು ನಿಜಕ್ಕೂ ನಗಲೇಬೇಕು.. ಸಾವು ಆಗಿದೆ..ಹಾಗೆಯೇ ಇತರರ ಸಾವು ಆಗಿದೆ ಆಗಂತ 17 ತಾರೀಖು ಹುಟ್ಟಿದವರೆಲ್ಲರೂ ಬೇಗ ಸಾವನ್ನಪ್ಪುತ್ತಾರೆ ಎನ್ನವು ಭಯ ಉಟ್ಟಿಸುವ ಆ ಸುದ್ದಿ ನಿಜಕ್ಕೂ ಅಪಾಯಕಾರಿ.


ಹೀಗೆ ಜನ್ಮತಾಳಿದವರು ಏನು ಮಾಡಬೇಕು ಯಾವ ಪೂಜೆ ಮಾಡಬೇಕು ಎನ್ನುವ ಮುಂದುವರೆದು ಬ್ರಹ್ಮಾಂಡ ಸ್ವಾಮಿ ಹೇಳಿದ ಕತೆ ಮತ್ತಷ್ಟು ಅಪ್ರಬುದ್ಧವಾಗಿತ್ತು ..ಮೊದಲೇ ಹೇಳಿದ್ದರೆ ನಾನು ಈ ಪೂಜೆ ಮಾಡುತ್ತಿದ್ದೆ ಎನ್ನುವ ಆ ಮುಡಮೋಸ್ತು ಸ್ವಾಮಿಗೆ ನೈಜತೆಯ ಅರಿವೇ ಇದ್ದಂತಿಲ್ಲ ಎನಿಸುತ್ತದೆ.

ಇನ್ನೂ ಪುನಿತ್ ಮಂತ್ರಾಲಯಕ್ಕೆ ಹೋದಾಗ ವೀಣೆ ಬಿತ್ತು ಎನ್ನುವ ಸುದ್ದಿಯನ್ನು ಬಿತ್ತರಿಸಿ ಸಾವನ್ನು ರಾಘವೇಂದ್ರ ಮುನ್ಸೂಚನೆ ನೀಡಿತ್ತು ಎನ್ನುವ ಮೌಡ್ಯತೆಗೆ ಏನೆನ್ನಬೇಕು ಹೇಳಿ.. ಅದಕ್ಕೆ ಮಂತ್ರಾಲಯ ಸ್ವಾಮಿಗಳೇ ಸ್ಪಷ್ಟನೆ ಕೊಟ್ಟಿದ್ದಾರೆ ಅದಕ್ಕೂ ಸಾವಿಗೂ ಸಂಬಂಧ ಇಲ್ಲ ಅಂತ ಇಷ್ಟಾದರೂ ನಿರಂತರವಾಗಿ ಇಂತ ಮೂಢನಂಬಿಕೆ ಇಟ್ಟುಕೊಂಡು ಪುನಿತ್ ಕುರಿತು ಚರ್ಚಿಸಿದ ಸುದ್ದಿಗಳು ಒಂದು ರೀತಿ ಮೌಢ್ಯವನ್ನು ಬಿತ್ತಿ ಟಿಆರ್‌ಪಿ ತರಲು ಹೊರಟಿರುವ ಚಾನೆಲ್‌ಗಳ ನಡೆಗೆ ದಿಕ್ಕಾರಹಾಕಬೇಕು ಕೇವಲ ಟಿಆರ್‌ಪಿ ದೃಷ್ಟಿಯಿಂದ ಜನರ ನಂಬಿಕೆಗಳ ಮೇಲೆಆಟ ಆಡುವ ಈ ನಡೆಯನ್ನು ಖಂಡಿಸದೆ ಹೋದರೆ ನಿಜಕ್ಕೂ ದೊಡ್ಡ ಅಪಾಯವೇ ಕಾದಿದೆ.

# ಮಾನವೀಯ ಮೌಲ್ಯಗಳನ್ನು ರೂಢಿಸಿಕೊಂಡಿದ್ದ ಅಪ್ಪು

● ಅ.ನಾ.ಪ್ರಹ್ಲಾದರಾವ್

ಹಿರಿಯ ನಾಗರಿಕರನ್ನು ಮಕ್ಕಳೇ ವೃದ್ಧಾಶ್ರಮಗಳಿಗೆ ಸೇರಿಸುವ ಪರಿಪಾಠ ಈಗೀಗ ಹೆಚ್ಚುತ್ತಿದೆ.ತಮ್ಮ ಮಕ್ಕಳ ಶ್ರೇಯಸ್ಸಿಗಾಗಿ ಜೀವನವಿಡಿ ಹೋರಾಟದ ಬದುಕನ್ನು ನಡೆಸುವ ವೃದ್ಧರು ತಮ್ಮ ಜೀವನ ಸಂಧ್ಯೆಯಲಿ ಆತ್ಮೀಯರಿಂದ ದೂರಾಗಿ ಬದುಕು ನಡೆಸುವ ಸಂಕಷ್ಟಕ್ಕೆ ಒಳಗಾಗುತ್ತಿರುವ ಮನ ಕರಗುವ ಸನ್ನಿವೇಶಗಳು ಹೆಚ್ಚುತ್ತಿವೆ.ಕನ್ನಡ ಭಾಷೆ ಗೆಗೌರವ, ಸ್ಥಾನಮಾನ ತಂದುಕೊಟ್ಟ ಡಾ.ರಾಜಕುಮಾರ್ ಕುಟುಂಬದ ಯುವಕ ಹಿರಿಯ ನಾಗರಿಕರ ಬದುಕನ್ನು ಉಲ್ಲಾಸಮಯಗೊಳಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡರೆಂದರೆ ಅವರಲ್ಲಿ ಮಾನವೀಯಮೌಲ್ಯಗಳು ಹೇಗೆ ಮನೆಮಾಡಿದ್ದವೆಂಬುದು ಅರಿವಾಗುತ್ತದೆ. ವೃದ್ಧ ಜೀವಗಳನ್ನು ರಕ್ಷಿಸುವ ಅನಾಥಾಶ್ರಮಗಳ ನಿರ್ವಹಣೆ, ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಹೆಣ್ಣು ಮಕ್ಕಳಿಗೆ ಶಿಕ್ಷಣಧಾರೆ, ಗೋಶಾಲೆಗಳ ನಿರ್ವಹಣೆ ಮೂಲಕ ಗೋವುಗಳ ರಕ್ಷಣೆ ಮುಂತಾದ ಮನನೀಯ ಕಾರ್ಯಗಳನ್ನು ಕೈಗೊಂಡು, ತಮ್ಮ ಬಹು ದೊಡ್ಡ ಸೇವೆಗೆ ಕಿಂಚಿತ್ತೂ ಪ್ರಚಾರ ಬಯಸದೆ, ಲಕ್ಷಾಂತರಜನರ ಪ್ರೀತಿಗೆ ಭಾಜನರಾದವರು ಅಗಲಿ ಹೋದ ನಟ ಪುನೀತ್‌ರಾಜಕುಮಾರ್.



## ಹತ್ತನೆ ವಯಸ್ಸಿನಲ್ಲಿ ರಾಷ್ಟ್ರ ಪ್ರಶಸ್ತಿ

ರಂಗಭೂಮಿ ನಟ ಡಾ.ಸಿಂಗಾನಲ್ಲೂರು ಪುಟ್ಟಸ್ವಾಮಯ್ಯಅವರ ಪುತ್ರಕನ್ನಡದ ಮೇರುನಟಡಾ. ರಾಜಕುಮಾರ್ ಹಾಗೂ ಶ್ರೀಮತಿ ಪಾರ್ವತಮ್ಮ ರಾಜಕುಮಾರ್ ಅವರ ಐವರು ಮಕ್ಕಳಲ್ಲಿ ಕೊನೆಯ ಮಗನಾಗಿ 1975ರ ಮೇ 17ರಂದು ಜನಿಸಿದ ಪುನೀತ್‌ಅವರಿಗೆ ಜನಿಸಿದಾಗ ಇರಿಸಿದ ಹೆಸರು ಲೋಹಿತ್.ಒಂದು ವರ್ಷವಯಸ್ಸಾಗಿದ್ದಾಗ 1976ರಲ್ಲಿತ 'ಮ್ಮತಂದೆನಾಯಕನಟರಾಗಿದ್ದ'ಪ್ರೇವ 'ದಕಾಣಿಕೆ''ಚಿತ್ರದಲ್ಲಿಬಾಲನಟರಾಗಿ ಅಭಿನಯಿಸುವ ಮೂಲಕಚಿತ್ರರಂಗ ಪ್ರವೇಶಿಸಿದರು.ಏಳನೆ ವಯಸ್ಸಿನಲ್ಲಿ ಡಾ.ರಾಜಕುಮಾರ್‌ಅವರಜೊತೆ ಅಭಿನಯಿಸಿದ ಚಲಿಸುವ ಮೋಡಗಳು'ಚಿತ್ರದ ಅಭಿನಯಕ್ಕಾಗಿರಾಜ್ಯ ಸರ್ಕಾರಉತ್ತಮ ಬಾಲನಟ ಪ್ರಶಸ್ತಿ ನೀಡಿತು.1983ರಲ್ಲಿ ತಮ್ಮ 8ನೆ ವಯಸ್ಸಿನಲ್ಲಿ ಸಿಂಗೀತಂ ಶ್ರೀನಿವಾಸರಾವ್ ನಿರ್ದೇಶನದ ''ಎರಡು ನಕ್ಷತ್ರಗಳು'' ಚಿತ್ರದಲ್ಲಿ ದ್ವಿಪಾತ್ರದಲ್ಲಿ ಅಭಿನಯಿಸಿದ ಪುನೀತ್ ಮತ್ತೊಂದು ಸಾಧನೆ ಮಾಡಿದರು.ಈ ಚಿತ್ರದಅಭಿನಯಕ್ಕಾಗಿ ಮತ್ತೊಮ್ಮೆ ಅತ್ಯುತ್ತಮ ಬಾಲನಟ ಪ್ರಶಸ್ತಿ ಇವರ ಪಾಲಾಯಿತು.'ಬೆಟ್ಟ ದಹೂವು'ಚಿತ್ರದಲ್ಲಿ ಪ್ರಬುದ್ಧವಾಗಿ ಅಭಿನಯಿಸಿ, ಹತ್ತನೆ ವಯಸ್ಸಿನಲ್ಲಿ ತಮ್ಮಲ್ಲಿದ್ದ ಪ್ರತಿಭೆಯನ್ನು ರಾಷ್ಟ್ರಮಟ್ಟದಲ್ಲಿ ಹೊರ ಹಾಕಿದರು. 1985ರಲ್ಲಿ ಎನ್.ಲಕ್ಷ್ಮಿನಾರಾಯಣ್ ನಿರ್ದೇಶನದ ಈ ಚಿತ್ರದಅಭಿನಯಕ್ಕಾಗಿಕೇಂದ್ರ ಸರ್ಕಾರ ಪುನೀತ್ ಅವರಿಗೆ ರಾಷ್ಟ್ರಮಟ್ಟದಲ್ಲಿಅತ್ಯುತ್ತಮ ಬಾಲನಟ ಪ್ರಶಸ್ತಿನೀಡಿ ಪುರಸ್ಕರಿಸಿತು. ಶರ್ಲಿಎಲ್. ಅರೋರ ಅವರ ಇಂಗ್ಲಿಷ್‌ಕಾದಂಬರಿ 'ವಾಟ್‌ದೇನ್‌ರಾಮನ್' ಆಧರಿಸಿ ತಯಾರಿಸಿದ ಈ ಚಿತ್ರವನ್ನು ಶ್ರೀಮತಿ ಪಾರ್ವತಮ್ಮರಾಜಕುಮಾರ್‌ಅವರೇ ನಿರ್ಮಿಸಿದ್ದರು. ಇದಕ್ಕೂ ಮುನ್ನ 1983ರಲ್ಲಿ ಬಿಡುಗಡೆಯಾದ ಭಕ್ತ ಪ್ರಹ್ಲಾದ ಚಿತ್ರದಲ್ಲಿ ಒಂದು ರೀತಿ ನಾಯಕ ಪಾತ್ರವೇಎನ್ನಬಹುದಾದ ಪ್ರಹ್ಲಾದನ ಪಾತ್ರದಲ್ಲಿ ಪುನೀತ್ ಅಭಿನಯಿಸಿ ಮನೆ ಮಾತಾದರು.ಈ ಚಿತ್ರದಲ್ಲಿರಾಜಕುಮಾರ್‌ಅವರು ಹಿರಣ್ಯಕಶಿಪು ಪಾತ್ರ ನಿರ್ವಹಿಸಿದರು.1989ರಲ್ಲಿ ಬಿಡುಗಡೆಗೊಂಡ ಪರಶುರಾಮ್'ಪುನೀತ್ ಬಾಲನಟರಾಗಿ ಪಾತ್ರ ಮಾಡಿದಕೊನೆಯಚಿತ್ರ.

## ಅಪ್ಪುಚಿತ್ರದ ಮೂಲಕ ನಾಯಕನಟ

ಹದಿಮೂರು ಹದಿಮೂರು ವರ್ಷಗಳಬಿಡುವಿನ ನಂತರ ನಾಯಕನಟರಾಗಿ ಹೊಮ್ಮಿ ಬಂದ ಪುನೀತ್‌ಅವರ ಮೊದಲ ಚಿತ್ರ 2002ರಲ್ಲಿಬಿಡುಗಡೆಯಾದ'ಅಪ್ಪು'. ಗುರುಕಿರಣ್ ಸಂಗೀತ ನಿರ್ದೇಶಿಸಿದ ಚಿತ್ರವನ್ನು ಪೂರಿಜಗನ್ನಾಥ್ ನಿರ್ದೇಶಿಸಿದರು. ಪಾರ್ವತಮ್ಮ ರಾಜ್‌ಕುಮಾರ್ ನಿರ್ಮಾಣ ಮಾಡಿದ 'ಅಪ್ಪು', ನಟಿ ರಕ್ಷಿತಾ ಅಭಿನಯದ ಮೊದಲ ಚಲನಚಿತ್ರವೂಆಗಿತ್ತು. ಕಾಲೇಜು ಹುಡುಗನ ಪಾತ್ರವಿದ್ದ ಮೊದಲ ಚಿತ್ರದಲ್ಲೇ ಅವರ ನೃತ್ಯ ನಿರ್ವಹಣೆ ಜನಮೆಚ್ಚುಗೆಗೆ ಪಾತ್ರವಾಯಿತು.ಈ ಚಿತ್ರದಲ್ಲಿ ಪುನೀತ್ ನಟ ಉಪೇಂದ್ರ ಸಾಹಿತ್ಯದ "ತಾಲಿಬಾನ್‌ಅಲ್ಲಾಅಲ್ಲಾ" ಹಾಡನ್ನು ಹಾಡಿದರು.ಈ ಚಿತ್ರ ತೆಲುಗುನಲ್ಲಿ 'ಈಡಿಯಟ್' ಹಾಗೂ ತಮಿಳಿನಲ್ಲಿ 'ದಮ್' ಹೆಸರುಗಳಿಂದ ರೀಮೇಕ್ ಆಗಿ ಯಶಸ್ವಿಗೊಂಡಿತು. ನಟಿ ರಮ್ಯ ಮೊದಲ ಬಾರಿಗೆ ನಟಿಸಿದ ದಿನೇಶ್‌ಬಾಬು ನಿರ್ದೇಶನದ'ಅಭಿ' (2003) ಪುನೀತ್‌ಅಭಿನಯದ ಎರಡನೆಯ ಚಿತ್ರ. ಈ ಚಿತ್ರವನ್ನೂ ಪಾರ್ವತಮ್ಮರಾಜ್‌ಕುಮಾರ್ ನಿರ್ಮಿಸಿದರು.ಮೆಹರ್‌ರಮೇಶ್ ನಿರ್ದೇಶನದ 'ವೀರಕನ್ನಡಿಗ'' 2004ರಲ್ಲಿ ಬಿಡುಗಡೆಆದಚಿತ್ರ. ಏಕಕಾಲದಲ್ಲಿ ತೆಲುಗಿನಲ್ಲಿಯೂ'ಆಂಧ್ರವಾಲಾ' ಹೆಸರಿನಲ್ಲಿ ನಿರ್ಮಾಣಗೊಂಡ ಚಿತ್ರದ ನಾಯಕರಾಗಿ ಜೂನಿಯರ್‌ಎನ್.ಟಿ.ಆರ್ ಅಭಿನಯಿಸಿದರು.ನಂತರ ಎಸ್. ನಾರಾಯಣ್‌ಅವರ 'ಮೌರ್ಯ''ಕೌಟುಂಬಿಕಚಿತ್ರದಲ್ಲಿ ಪುನೀತ್ ನಟಿಸಿದರು, ಇದು ತಮಿಳು ಚಿತ್ರ 'ಅಮ್ಮಾಯಿ''ರೀಮೇಕ್.ತೆಲುಗು 'ಒಕ್ಕಡು' ಪುನರಾವತರಣಿಕೆಯಾದ 'ಅಜಯ್''2003ರಲ್ಲಿ ಬಿಡುಗಡೆಗೊಂಡಿತು.ಈ ಚಿತ್ರದಿಂದಅವರು 'ಪವರ್ ಸ್ಟಾರ್'ಅಭಿದಾನಕ್ಕೆ ಪಾತ್ರರಾದರು.ನಂತರ ಬಿಡುಗಡೆಗೊಂಡ ಸಾಲು ಸಾಲು ಚಿತ್ರಗಳು ಜನಾದರಣೀಯವಾದವು. ಕುಟುಂಬದಎಲ್ಲರೂ ಒಟ್ಟಾಗಿ ಕುಳಿತು ಸಂಭ್ರಮಿಸಿದಂತಹ 2007ರಲ್ಲಿ ತೆರೆಕಂಡ 'ಅರಸು' ಹಾಗೂ 'ಮಿಲನ' ಪುನೀತ್ ಅವರ ಜನಪ್ರಿಯತೆಯನ್ನು ತಂದೆ ಡಾ.ರಾಜಕುಮಾರ್‌ಅವರಿಗೆ ಸರಿಸಾಟಿಗೊಳಿಸಿತು.ಮಹೇಶ್ ಬಾಬು ನಿರ್ದೇಶಿಸಿದ 'ಅರಸು''ಪುನೀತ್‌ಅವರಿಗೆ ಮೊದಲ ಫಿಲ್ಮ್‌ಫೇರ್‌ಅತ್ಯುತ್ತಮ ನಟ ಪ್ರಶಸ್ತಿ ತಂದುಕೊಟ್ಟಿತು. ಪ್ರಕಾಶ್ ನಿರ್ದೇಶನದ ಹಾಗೂ ಪಾರ್ವತಿ ಮೆನನ್ ನಾಯಕಿಯಾಗಿದ್ದ 'ಮಿಲನ''ಪುನೀತ್‌ಅವರನ್ನುಅತ್ಯುತ್ತಮ ನಟ ರಾಜ್ಯ ಪ್ರಶಸ್ತಿಯ ಗೌರವಕ್ಕೆ ಪಾತ್ರವಾಗಿಸಿತು. ನಂತರ 'ವಂಶಿ' (2008), 'ರಾಜ್ ದಿ ಶೋಮ್ಯಾನ್' (2009), 'ರಾಮ್' (2009) 'ಪೃಥ್ವಿ''ಮತ್ತು'ಜಾಕೀ''(2010), 'ಹುಡುಗರು''ಮತ್ತು 'ಪರಮಾತ್ಮ' (2011), 'ಅಣ್ಣಾ ಬಾಂಡ್' ಮತ್ತು 'ಯಾರೇಕೂಗಾಡಲಿ' (2012), 'ನಿನ್ನಿಂದಲೇ''ಮತ್ತು 'ಪವರ್ ಸ್ಟಾರ್''(2014), 'ಮೈತ್ರಿ''ಮತ್ತು 'ಧೀರರಣ ವಿಕ್ರಮ' (2015), 'ಚಕ್ರವ್ಯೂಹ' ಮತ್ತು 'ದೊಡ್ಡಮನೆ ಹುಡ್ಗ''(2016),'ರಾಜಕುಮಾರ''ಮತ್ತು'ಅಂಜನಿಪುತ್ರ' '(2017),'ನಟಸಾರ್ವಭೌಮ''(2019) 'ಯುವರತ್ನ'' (2021) ಯಶಸ್ವಿ ಚಲನಚಿತ್ರಗಳಲ್ಲಿ ಅಭಿನಯಿಸಿದರು. ಒಟ್ಟಾರೆ 14 ಚಿತ್ರಗಳಲ್ಲಿ ಬಾಲ ಕಲಾವಿದರಾಗಿ ನಟಿಸಿದ ಪುನೀತ್ 29 ಚಿತ್ರಗಳಲ್ಲಿ ನಾಯಕ ನಟರಾಗಿ ಅಭಿನಯಿಸಿದರು.'ಜಾಕಿ'ಚಿತ್ರದಅಭಿನಯಕ್ಕಾಗಿಎರಡನೆ ಯ ಬಾರಿರಾಜ್ಯ ಸರ್ಕಾರದಿಂದಅತ್ಯುತ್ತಮ ನಟ ಪ್ರಶಸ್ತಿ ಪಡೆದುಕೊಂಡರು. ಗಾಯನದಲ್ಲೂ ಆಸಕ್ತಿ ತಮ್ಮ ತಂದೆಯಂತೆ ಪುನೀತ್‌ರಾಜ್‌ಕುಮಾರ್‌ಗಾಯನದತ್ತಲೂ ಆಸಕ್ತಿ ಹರಿಸಿದ್ದರು.




## ಪಿ.ಆರ್.ಕೆ ಪ್ರೊಡಕ್ಷನ್ಸ್




ಆರಂಭದಲ್ಲಿ ಪುನೀತ್‌ರಾಜಕುಮಾರ್ ಚಲನಚಿತ್ರಗಳಲ್ಲಿ ಅಭಿನಯಿಸುವ ಕಲ್ಪನೆಯನ್ನೂ ಮಾಡಿರಲಿಲ್ಲ. ಚಿತ್ರರಂಗಕ್ಕೆ ಬಂದ ನಂತರ ಅಭಿನಯದೊಂದಿಗೆ ತಮ್ಮದೇ ಆದ ಪಿ.ಆರ್.ಕೆ ಪ್ರೊಡಕ್ಷನ್ಸ್ ಆರಂಭಿಸಿ, ಹಲವು ಚಿತ್ರಗಳ ನಿರ್ಮಾಣ ಮಾಡಿದರು. ಹೊಸ ಪ್ರತಿಭೆಗಳಿಗೆ ಅವಕಾಶ ನೀಡುವುದರೊಂದಿಗೆ ಉತ್ತಮ ಕಥೆಗಳನ್ನು ಆಯ್ಕೆ ಮಾಡಿಕೊಂಡರು. 2019ರಲ್ಲಿ ಮೊದಲ ಬಾರಿಗೆ ಪಿಆರ್‌ಕೆಪ್ರೊಡಕ್ಷನ್‌ನಡಿ 'ಕವಲುದಾರಿ' ಚಿತ್ರವನ್ನು ನಿರ್ಮಿಸಿದರು.ನಂತರ 'ಮಾಯಾಬಜಾರ್' 2016, 'ಲಾ', 'ಫ್ರೆಂಚ್ ಬಿರಿಯಾನಿ' ಸಿನಿಮಾಗಳನ್ನು ಪುನೀತ್ ನಿರ್ಮಿಸಿದ್ದರು.ತಮ್ಮ ಸಂಸ್ಥೆಯಡಿ ಡಾ.ರಾಜಕುಮಾರ್ ಬಯೋಪಿಕ್ ನಿರ್ಮಾಣ ಮಾಡುವ ಪುನೀತ್ ಕನಸು ಈಡೇರಲಿಲ್ಲ.

## ನಿರ್ಮಾಣದ ಹಂತದಲ್ಲಿ ಚಿತ್ರಗಳು

ಪುನೀತ್‌ರಾಜಕುಮಾರ್ ಅಭಿನಯಿಸುತ್ತಿದ್ದ ಚೇತನ್‌ಕುಮಾರ್ ನಿರ್ದೇಶನದ 'ಜೇಮ್ಸ್' ಸಿನಿಮಾಶೇ.90ರಷ್ಟು ಭಾಗದಚಿತ್ರೀಕರಣ ಮುಗಿಸಿತ್ತು.ಪವನ್‌ಕುಮಾರ್ ನಿರ್ದೇಶನ ಮಾಡಬೇಕಿದ್ದ 'ದ್ವಿತ್ವ' ಸಿನಿಮಾದಚಿತ್ರೀಕರಣ ಇನ್ನೂ ಆರಂಭವಾಗಿರಲಿಲ್ಲ. 'ಜೇಮ್ಸ್' ಚಿತ್ರಕ್ಕೆ ಸುಮಾರು.8 ಕೋಟಿರೂ.ವೆಚ್ಚ ಮಾಡಲಾಗಿತ್ತು.'ದ್ವಿತ್ವ' ಚಿತ್ರದ ಚಿತ್ರೀಕರಣ ಪೂರ್ವಭಾವಿ ಸಿದ್ಧತೆಗಳಾಗಿದ್ದವು.ಇದಲ್ಲದೆ, 'ಪೈಲ್ವಾನ್' ಚಿತ್ರದ ನಿರ್ದೇಶಕ ಕೃಷ್ಣ ಚಿತ್ರನಿರ್ದೇಶಿಸುವುದಾಗಿ ಪ್ರಕಟಿಸಿದ್ದರು.ದಿನಕರ್‌ತೂಗುದೀಪ ನಿರ್ದೇಶನದ ಚಿತ್ರವೊಂದನ್ನು ಘೋಷಿಸಲಾಗಿತ್ತು.'ಪೃಥ್ವಿ' ನಿರ್ದೇಶಕ ಜೇಕಬ್ ವರ್ಗೀಸ್ ನಿರ್ದೇಶನದಲ್ಲಿ ಚಿತ್ರ ಮಾಡುವುದಾಗಿ ಪುನೀತ್ ಹೇಳಿದ್ದರು. ಪುನೀತ್‌ತಮ್ಮ ನಿರ್ಮಾಣದಲ್ಲಿ 'ಫ್ಯಾಮಿಲಿ ಪ್ಯಾಕ್', 'ಮ್ಯಾನ್‌ಆಫ್ ದಿ ಮ್ಯಾಚ್', 'ಒನ್‌ಕಟ್‌ಟುಕಟ್' ಸಿನಿಮಾಗಳನ್ನು ತಯಾರಿಸಿದ್ದು, ಈ ಮೂರು ಚಿತ್ರಗಳು ಬಿಡುಗಡೆಗೆ ಸಿದ್ಧವಾಗಿದ್ದವು.

## ಅನಾಥಾಶ್ರಮ ಗೋಶಾಲೆ ವೃದ್ಧಾಶ್ರಮ

ಪುನೀತ್ 26 ಅನಾಥಾಶ್ರಮ, 19 ಗೋಶಾಲೆ, 16 ವೃದ್ಧಾಶ್ರಮಗಳನ್ನು ಪೋಷಿಸುತ್ತಿದ್ದರು.ಸುಮಾರು 50 ಶಾಲಾ ಮಕ್ಕಳ ಶಿಕ್ಷಣದ ಜವಾಬ್ದಾರಿ ಹೊತ್ತಿದ್ದರು. 'ರಾಜಕುಮಾರ' 'ಚಲನಚಿತ್ರದ ಗಳಿಕೆಯ ಕೆಲವಂಶವನ್ನು ವೃದ್ಧಾಶ್ರಮಗಳಿಗಾಗಿ ದಾನ ಮಾಡಿದ್ದರು. ಪುನೀತ್‌ತಮ್ಮ ಸಹಾಯ, ಸೇವೆ ಬಗ್ಗೆ ಎಲ್ಲಿಯೂ ಮಾತನಾಡುತ್ತಿರಲಿಲ್ಲ. ಒಂದುಕೈಯ್ಯಲ್ಲಿ ಮಾಡಿದ ಸಹಾಯ ಇನ್ನೊಂದು ಕೈಗೆ ತಿಳಿಯಬಾರದು ಎನ್ನುವಂತಿದ್ದರು.ಸಾವಿರಾರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುತ್ತಿರುವ, 1998ರಲ್ಲಿ ಡಾ.ರಾಜಕುಮಾರ್ ಹಾಗೂ ಪಾರ್ವತಮ್ಮರಾಜಕುಮಾರ್ ಸ್ಥಾಪಿಸಿದ 'ಶಕ್ತಿಧಾಮ' ಸಂಸ್ಥೆಗೆ ಕನ್ನಡದ ಕೋಟ್ಯಾಧಿಪತಿಯ ಮೊದಲ ಸರಣಿಯಲ್ಲಿ ಪುನೀತ್‌ಗೆದ್ದ 18 ಲಕ್ಷರೂ. ಹಣವನ್ನು ನೀಡಿದ್ದರು. ಕಿರುತೆರೆಯಲ್ಲಿ ಪ್ರಸಾರವಾದ ಕನ್ನಡದಕೋಟ್ಯಧಿಪತಿ (ಸೀಸನ್ 1–2 ಮತ್ತು 4) ಹಾಗೂ ಫ್ಯಾಮಿಲಿ ಪವರ್ ಶೋಗಳನ್ನು ನಡೆಸಿಕೊಡುವ ಮೂಲಕ ಮನೆಮಾತಾಗಿದ್ದರು. ಕನ್ನಡದಕೋಟ್ಯಧಿಪತಿ ಮೊದಲ ಸಿಸನ್ ಆರಂಭವಾಗುವ ಮೊದಲು ಹಿಂದಿಯಲ್ಲಿ'ಕೌನ್ ಬನೇಗ ಕೋಟ್ಯಾಧಿಪತಿ' ನಡೆಸಿಕೊಟ್ಟಿದ್ದ ಹಿರಿಯ ನಟಅಮಿತಾ ಬಚ್ಚನ್‌ಅವರನ್ನು ಭೇಟಿಯಾಗಿ ಬಂದಿದ್ದರು. ಅಮಿತ ಆಸೆ ಇರಿಸಿಕೊಂಡು ಬಂದು ಶೋನಲ್ಲಿ ಭಾಗವಹಿಸಿ ಸೋಲುವ ಮೂಲಕ ನಿರಾಶೆಗೊಳ್ಳುತ್ತಿದ್ದ ಎಷ್ಟೋ ಮಂದಿಗೆಪುನೀತ್‌ಅವರೇ ಬಹುಮಾನದಹಣಕೊಡುತ್ತಿದ್ದುದುಉಂಟು.

## ಜನಪರ ಕಾರ್ಯಕ್ರಮಗಳ ಬಗ್ಗೆ ಜಾಗೃತಿ

ಜನಪರವಾದ ಹಲವಾರು ಸರ್ಕಾರಿ ಕಾರ್ಯಕ್ರಮಗಳ ಪ್ರಚಾರ ಕಾರ್ಯಕ್ರಮಗಳನ್ನು ಉಚಿತವಾಗಿ ನಡೆಸಿಕೊಡುತ್ತಿದ್ದ ಔದಾರ್ಯತೋರಿದ್ದರು. ಶಿಕ್ಷಣದ ಹಕ್ಕು, ಸರ್ವಶಿಕ್ಷಾ ಅಭಿಯಾನ, ನಂದಿನಿ ಹಾಲು, ಮತ ಚಲಾಯಿಸುವ ಹಕ್ಕು ಸೇರಿದಂತೆಇತರ ಸರ್ಕಾರಿ ಅಭಿಯಾನಗಳಲ್ಲಿ ಪುನೀತ್ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದ್ದರು. ಕೋವಿಡ್–19 ಮುನ್ನೆಚ್ಚರಿಕೆಗಳು ಮತ್ತು ಲಸಿಕೆಗಳ ಬಗ್ಗೆ ಜಾಗೃತಿ ಮೂಡಿಸುವ ಚಟುವಟಿಕೆಗಳಲ್ಲೂ ಪಾಲ್ಗೊಂಡಿದ್ದರು.

## ಪ್ರೀತಿಸಿ ವಿವಾಹವಾದ ಪುನೀತ್

ಪುನೀತ್‌ರಾಜಕುಮಾರ್ ಅವರು ತಮ್ಮ ಪತ್ನಿ ಅಶ್ವಿನಿ ಅವರನ್ನು ಪ್ರೀತಿಸಿ ಮದುವೆಯಾದರು. ತಂದೆರಾಜಕುಮಾರ್ ಹಾಗೂ ತಾಯಿ ಪಾರ್ವತಮ್ಮ



ಅವರ ಸಮ್ಮತಿ ನಂತರ ಅಶ್ವಿನಿ ಅವರನ್ನು 1999ರಲ್ಲಿ ವರಿಸಿದರು. ಪುನೀತ್‌ರಾಜಕುಮಾರ್‌ಅವರಿಗೆಇಬ್ಬರು ಹೆಣ್ಣು ಮಕ್ಕಳು.ಮೊದಲ ಮಗಳು ಧೃತಿ, ಎರಡನೇ ಮಗಳು ವಂದಿತ.

## ಅಪರೂಪದ ಸಜ್ಜನ


ಕೇವಲ ಕಲಾವಿದನಾಗಿ ಮಾತ್ರ ಗುರುತಿಸಿಕೊಳ್ಳದೆ, ಚಿಕ್ಕ ವಯಸ್ಸಿನಲ್ಲಿಯೇ ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಅಪರೂಪದ ಕಲಾವಿದ ಪುನೀತ್.ದೊಡ್ಡಮನೆಯಚಿಕ್ಕಮಗನಾಗಿ ಜನಿಸಿ, ತಮ್ಮ ತಂದೆ ಡಾ.ರಾಜಕುಮಾರ್‌ಅವರ ವ್ಯಕ್ತಿತ್ವದ ಮೆರಗನ್ನು ದುಪ್ಪಟ್ಟುಗೊಳಿಸುವ ಮೂಲಕ, ತಮ್ಮ ಸಮಾಜಸೇವೆಯನ್ನುಎಲ್ಲಿಯೂ ಬಹಿರಂಗ ಮಾಡದೆ ಅಭಿನಯ, ಚಲನಚಿತ್ರ ನಿರ್ಮಾಣ, ಹೊಸ ಯೋಜನೆಗಳ ಪರಿಕಲ್ಪನೆ, ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಅಪರೂಪದ ಸಜ್ಜನ ಪುನೀತ್‌ರಾಜಕುಮಾರ್. ಬಡವ, ಶ್ರೀಮಂತ ಎಂಬ ಬೇಧ –ಭಾವವಿಲ್ಲದೆ, ಕಲಿತವರು, ಕಲಿಯದವರೆಂಬ ತಾರತಮ್ಯ ಮಾಡದೆಜನರನ್ನು ಪ್ರೀತಿಸಿದ ಅಪೂರ್ವ ವ್ಯಕ್ತಿ. ಬದುಕಿದ್ದು ಕೇವಲ 46 ವರ್ಷಮಾತ್ರ ಆದರೂ, ಹತ್ತಾರು ಜನುಮಗಳಲ್ಲಿ ಮಾಡುವಷ್ಟು ಅಗಾಧ ಕೆಲಸಮಾಡಿ, ಅಂದುಕೊಂಡಿದ್ದರಲ್ಲಿ ಹಲವಷ್ಟುಸಾಧಿಸಿ, ಅದರಲ್ಲಿ ಕೆಲವಷ್ಟನ್ನುಸಮಾಜಕ್ಕೆಮಾದರಿಯಾಗಿ ಬಿಟ್ಟು ಹೋದ ಅಪರೂಪದ ವ್ಯಕ್ತಿ.

ವಿಶ್ವಮಟ್ಟದಲ್ಲಿ ಸುದ್ದಿಯಾದ ಅಕಾಲಮರಣ

ಜಗತ್ತಿನಲ್ಲಿ ಹೆಚ್ಚು ಸಾಧನೆ ಮಾಡಿದ ಬಹಳ ಮಂದಿ ಅಲ್ಪಾಯುಷಿಗಳು ಎಂಬಸತ್ಯನಮ್ಮಮುಂದಿದೆ. ಹಾಗೆಯೇ ಪುನೀತ್‌ರಾಜಕುಮಾರ್ ತಮ್ಮ ಜೀವಮಾನದ 15 ವರ್ಷಗಳಲ್ಲಿ ಮಾಡಿದ ಸಾಧನೆ ಅಗಾಧ. ಬಹಳ ಚಿಕ್ಕವಯಸ್ಸಿನಲ್ಲಿಯೇ ಅವರು ನಿಧನರಾದಾಗ ಲಕ್ಷಾಂತರ ಮಂದಿ ಬಂದುಕಣ್ಣೀರಧಾರೆ ಹರಿಸಿದ್ದು, ಇಡೀ ವಿಶ್ವದಲ್ಲಿ ಅವರ ಸಾವು ಸುದ್ದಿಯಾಗಿದ್ದು, ಅಂತಿಮದರ್ಶನಕ್ಕಾಗಿ ಹೊರ ಭಾಗದಿಂದಗಣ್ಯರು ಆಗಮಿಸಿದ್ದು ಪುನೀತ್‌ರಾಜಕುಮಾರ್ ಬೆಳೆಸಿಕೊಂಡಿದ್ದ ಸಂಬಂಧಗಳು ಹಾಗೂ ಸಮಾಜಕ್ಕೆ ನೀಡಿದ ಕೊಡುಗೆಗಳು ಕಾರಣ ಎಂಬುದನ್ನು ಅಮರವಾಗಿಸಿವೆ.





















# ಡಾ.ರಾಜ್ ಗುಣಗಳನ್ನು ಆಹ್ವಾನಿಸಿಕೊಂಡಿದ್ದ ಪುನೀತ್



● ಶಶಿಧರ್ ಭಟ್

ಅದು ಮಧ್ಯಾನ್ಹದ ಹೊತ್ತು.. ನಾನು ಡಾ. ರಾಜಕುಮಾರ್ ಅವರ ಸಿನಿಮಾ ಒಂದರ ಚಿತ್ರೀಕರಣ ನೋಡಿ ವರದಿ ಮಾಡಲು ಚಾಮುಂಡೇಶ್ವರಿ ಸ್ಟುಡೀಯೋ ಕ್ಕೆ ಹೋಗಿದ್ದೆ. ಚಿತ್ರೀಕರಣ ನೋಡಲು ವ್ಯವಸ್ಥೆ ಮಾಡಿದ್ದು ಸಾ.ರಾ. ಗೋವಿಂದು ಮತ್ತು ಟಿ, ವೆಂಕಟೇಶ್, ನಾನಾಗ ಟಿ.ವೆಂಕಟೇಶ್ ಅವರ ಅಭಿಮಾನಿ ವಾರ ಪತ್ರಿಕೆಯಲ್ಲಿ ಕೆಲಸ ಮಾಡುತ್ತಿದ್ದೆ. ರಾಜಾಜಿನಗರದ ರಾಜ್ ಕುಮಾರ್ ರಸ್ತೆಯ ಕಟ್ಟಡ ಒಂದರ ಮಹಡಿಯಲ್ಲಿ ನಮ್ಮ ಕಚೇರಿ,, ಜಾಣಗೆರೆ ವೆಂಕಟರಾಮಯ್ಯ ಪತ್ರಿಕೆಯ ಸಂಪಾದಕರು, ನಾನು ಅವತ್ತು ಕಚೇರಿಯಲ್ಲಿ ಕುಳಿತಿದ್ದಾಗ ವೆಂಕಟೇಶ್ ರಾಜಕುಮಾರ್ ಅಚರ ಸಿನಿಮಾ ಒಂದರ ಚಿತ್ರೀಕರಣದ ಸ್ಥಳಕ್ಕೆ ಹೋಗಿ ವರದಿ ಮಾಡುವಂತೆ ಸೂಚಿಸಿದರು, ಅವರೇ ವಾಹನ ವ್ಯವಸ್ಥೆಯನ್ನು ಮಾಡಿದ್ದರು.. ಚಿತ್ರೀಕರಣವನ್ನು ಸ್ವಲ್ಪ ಹೊತ್ತು ನೋಡಿ ಡಾ. ರಾಜ್ ಕುಮಾರ್ ಅವರ ಮಿನಿ ಸಂದರ್ಶನ ಮಾಡಿ ಅಲ್ಲಿಂದ ಹೊರಡಬೇಕು.. ಊಟ ಮಾಡಿಯೇ ಹೋಗಬೇಕು ಅಂದರು ಪಾರ್ವತಮ್ಮ ರಾಜಕುಮಾರ್,, ಅದು ಡಾ. ರಾಜಕುಮಾರ್ ಅವರ ಸಂಸ್ಥೆಯ ಸಂಪ್ರದಾಯ. ಮಧ್ಯಾನ್ಹದ ಹೊತ್ತಿಗೆ ಹೋದರೆ ಊಟ ಇಲ್ಲದೇ ಯಾರನ್ನು ಅವರು ಕಳಿಸಲಾರರು.

ಊಟ ಮಾಡಿ ಅಲ್ಲಿಂದ ಹೊರಡುವಾಗ ಪಾರ್ವತಮ್ಮ ಹೇಳಿದರು.. ನೀವು ಹೋಗುವಾಗ ಇವನನ್ನು ರಾಜಾಜಿನಗರದಲ್ಲಿ ವರದಪ್ಪ ಅವರ ಮನೆಯಲ್ಲಿ ಬಿಟ್ಟು ಹೋಗಿ.. ನಾನು ಸರಿ ಅಂದೆ. ಅವರದೇ ಕಾರು..ನಾನು ಡ್ರಾಪ್ ತೆಗೆದುಕೊಳ್ಳುತ್ತಿದ್ದವನು,,,



ಅವನು ಪುನೀತ್ ರಾಜಕುಮಾರ್,, ಆಗ ಆತನಿಗೆ 10 ವರ್ಷ ವಯಸ್ಸು... ಸರಿ ಎಂದು ನಾನು ಡಾ. ರಾಜಕುಮಾರ್ ಅವರ ಪ್ರೊಡಕ್ಷನ್ ಮೆನೇಜರ್ ನೀಡಿದ ಅಂಬಾಸಿಡರ್ ಕಾರು ಹತ್ತಿದೆ. ಜೊತೆಗೆ ಪುನೀತ್...ಅವನ ಕೈಯಲ್ಲಿ ಒಂದು ವಿಎಚ್ ಎಸ್ ಇತ್ತು.. ಅದನ್ನು ತೆಗೆದುಕೊಂಡು ವರದಪ್ಪ ಅಂದರೆ ಚಿಕ್ಕಪ್ಪನ ಮನೆಗೆ ಪುನಿತ್ ಹೊರಟಿದ್ದು. ಇದು ನಾನು ಮೊದಲ ಬಾರಿಗೆ ಪುನೀತ್ ರಾಜಕುಮಾರ್ ಎಂಬ ಅದ್ಭುತ ನಟನನ್ನು ನೋಡಿದ್ದು ಮಾತನಾಡಿದ್ದು,,

ಅದು 1985ನೆಯ ಇಸ್ವಿ,,, ನಾನು ಆಗ ಸಿನಿಮಾ ವರದಿಗಾರನಾಗಿಯೂ ಕೆಲಸ ಮಾಡುತ್ತಿದ್ದೆ,, ಚಾಮುಂಡೇಶ್ವರಿ ಸ್ಟೋಡೀಯೂದಿಂದ ರಾಜಾಜಿನಗರದ ವರದಪ್ಪನವರ ಮನೆಗೆ ಹೋಗುವ ವರೆಗೆ ಈ ಪೋರ ಇಂಗ್ಲೀಷ್ ಸಿನಿಮಾ ಕುರಿತು ಮಾತನಾಡಿದ್ದ. ನನಗೆ ಶಾಕ್.. ಆಗಲೇ ನನಗೆ ಈ ಪ್ರತಿಭಾವಂತ ನಟನ ಪರಿಚಯ ಆಗಿಬಿಟ್ಟಿತ್ತು,

ಪುನೀತ್ ರಾಜಕುಮಾರ್ ಅಭಿನಯದ ಬೆಟ್ಟದ ಹೂವು ಇವತ್ತಿಗೂ ನನಗೆ ಇಷ್ಟವಾದ ಸಿನಿಮಾ. ಆ ಸಿನಿಮಾದಲ್ಲಿ ಪುನೀತ್ ತಾನೆಂಥ ನಟ ಎಂಬುದನ್ನು ತೋರಿಸಿಬಿಟ್ಟಿದ್ದ,, ಹಳ್ಳಿಯ ಹುಡುಗನ ಮುಗ್ದತೆ ಅನಾವರಣ ಮಾಡುವುದರಲ್ಲಿ ಯಶಸ್ವಿಯಾಗಿದ್ದ ಪುನೀತ್ ಈ ಸಿನಿಮಾದ ಅಭಿನಯಕ್ಕಾಗಿ ರಾಷ್ಟ್ರ ಪ್ರಶಸ್ತಿ ಪಡೆದುಬಿಟ್ಟಿದ್ದ.

ಡಾ.ರಾಜಕುಮಾರ್ ಮತ್ತು ಪಾರ್ವತಮ್ಮನವರಿಗೆ ಪುನೀತ್ ಅಂದರೆ ಅಚ್ಚುಮೆಚ್ಚು,, ಸಿನಿಮಾ ಚಿತ್ರೀಕರಣದ ಸಂದರ್ಭದಲ್ಲಿ ಡಾ, ರಾಜ್ ಪುನೀತ್ ನನ್ನು ಆಗಾಗ ಕರೆದೊಯ್ಯುತ್ತಿದ್ದರು. ಪುನೀತ್ ಆ ಸಿನಿಮಾ ವಾತಾವರಣದಲ್ಲೇ ಬೆಳೆದ. ಪುನೀತ್ ಅವರ ಬದುಕನ್ನು ಮೂರು ಹಂತದಲ್ಲಿ ನಾವು ಗುರುತಿಸಬಹುದು.. ಬಾಲ್ಯ ಮೊದಲ ಹಂತ. ಬಾಲ್ಯದಲ್ಲೇ ತಾನು ಅಭಿಜಾತ ಕಲಾವಿದ ಎಂದು ಪುನೀತ್ ತೋರಿಸಿಯಾಗಿತ್ತು...ಡಾ. ರಾಜ್ ಕೂಡ ಪುನೀತ್ ದೊಡ್ಡ ಕಲಾವಿದನಾಗುತ್ತಾನೆ ಎಂದು ನಿರೀಕ್ಷಿಸಿದ್ದರು.. ಈ ಮೊದಲ ಹಂತದ ನಂತರ ಪುನೀತ್ ಸಿನಿಮಾದ ಆಸಕ್ತಿಯನ್ನು ಕಳೆದುಕೊಂಡ, ತಾನು ದೊಡ್ಡ ಬ್ಯುಸಿನೆಸ್ ಮೆನ್ ಆಗಬೇಕು ಎನ್ನುವ ಅಸೆ ಪುನೀತ್ ಅವರದಾಗಿತ್ತು, ಹೀಗಾಗಿ ಬೇರೆ ಬೇರೆ ವ್ಯಾಪಾರ ಒಹಿವಾಟು ಕಡೆ ಲಕ್ಷ್ಯ ಒಹಿಸಿದ ಪುನೀತ್. ಇದಕ್ಕೆ ಡಾ. ರಾಜಕುಮಾರ್ ಅವರಾಗಲೀ ಪಾರ್ವತಮ್ಮ ರಾಜಕುಮಾರ್ ಅವರಾಗಲೀ ವಿರೋಧ ವ್ಯಕ್ತಪಡಿಸಲಿಲ್ಲ.

ಆದರೆ ಪುನೀತ್ ಅವರ ಬಗ್ಗೆ ಡಾ. ರಾಜಕುಮಾರ್ ಮತ್ತು ಪಾರ್ವತಮ್ಮ ರಾಜಕುಮಾರ್ ಅವರಿಗೆ ಸ್ವಲ್ಪ ಆತಂಕ ಉಂಟಾಗಿತ್ತು,, ಜೊತೆಗೆ ಯಾವುದೇ ಆರ್ಥಿಕ ಒಹಿವಾಟು ಅವರ ಕೈಹಿಡಿಯಲಿಲ್ಲ.

ಕೊನೆಗೆ ಪುನೀತ್ ಮತ್ತೆ ಸಿನಿಮಾ ರಂಗದ ಕಡೆಗೆ ತಿರುಗಿ ನೋಡಿದರು.. ತಮ್ಮ ವರ್ತಮಾನ ಭವಿಷ್ಯ ಎಲ್ಲವೂ ಸಿನಿಮಾ ಎಂಬುದು ಅವರಿಗೆ ಅರಿವಾಗಿತ್ತು,,, ಹಾಗೆ ಡಾ. ರಾಜ್ ಮತ್ತು ಪಾರ್ವತಮ್ಮ ಕೂಡ ಚಿತ್ರರಂಗದಲ್ಲೇ ಪುನೀತ್ ಮುಂದುವರಿಯಲಿ ಎಂದು ಬಯಸಿದ್ದರು,, ಅವರಿಗೂ ಪುನೀತ್ ಭವಿಷ್ಯ ಇರುವುದು ಚಿತ್ರರಂಗದಲ್ಲೇ ಎಂದು ಅನ್ನಿಸಿಬಿಟ್ಟಿತ್ತು,,

ಪುನೀತ್ ಪೂರ್ಣ ಪ್ರಮಾಣದ ಹೀರೋ ಆಗಿ ಚಿತ್ರರಂಗದ ಮರು ಪ್ರವೇಶ ಪಡೆದರು.. ಅದು ಅವರ ಬದುಕನ್ನೇ ಬದಲಿಸಿಬಿಟ್ಟಿತ್ತು. ಇದು ಪುನೀತ್ ರಾಜಕುಮಾರ್ ಅವರ ಬದುಕಿನ ಮೂರನೆಯ ಘಟ್ಟ..ಈ ಹೊತ್ತಿಗೆ ಪುನೀತ್ ಸಂಪೂರ್ಣವಾಗಿ ಬದಲಾಗಿದ್ದರು. ಡಾ. ರಾಜಕುಮಾರ್ ಅವರ ಗುಣವನ್ನೆಲ್ಲ ಆಹ್ವಾನಿಸಿಕೊಂಡು ಬಿಟ್ಟಿದ್ದರು,,ಡಾ. ರಾಜ್ ಅವರ ವ್ಯಕ್ತಿತ್ವ ದ ಭಾಗವಾಗಿದ್ದ ಸೌಜನ್ಯ, ಗುರು ಹಿರಿಯರ ಬಗ್ಗೆ ಗೌರವ, ಸದಾ ಮುಖದ ಮೇಲೆ ಮುಗುಳ್ನಗು ಎಲ್ಲವನ್ನೂ ಪುನೀತ್ ತಮ್ಮ ವ್ಯಕ್ತಿತ್ವದಲ್ಲಿ ಅಳವಡಿಸಿಕೊಂಡಿದ್ದರು. ಹೀಗಾಗಿ ಬಹಳ ಸಂದರ್ಭದಲ್ಲಿ ಪುನೀತ್ ಡಾ. ರಾಜ್ ಅವರ ನೆನಪು ಮೂಡುವಂತೆ ಮಾಡುತ್ತಿತ್ತು,,

ನಾನು ಪುನೀತ್ ಅವರನ್ನು ಟೀವಿಗಾಗಿ ಸಂದರ್ಶಿಸುವಾಗ ಇದೇ ಪ್ರಶ್ನೆ ಕೇಳಿದ್ದೆ. ಡಾ. ರಾಜಕುಮಾರ್ ಅವರ ವ್ಯಕ್ತಿತ್ವ ನಿಮ್ಮ ಮೇಲೆ ಯಾವ ರೀತಿಯ ಪರಿಣಾಮ ಬೀರಿದೆ. ?


ನಾನು ಪುನೀತ್ ಅವರ ಕಣ್ಣಿನಲ್ಲಿ ಡಾ. ರಾಜ್ ಅವರನ್ನು ನೋಡಲು ಯತ್ನ ಮಾಡಿದ್ದೆ. ಯಾಕೆಂದರೆ ಡಾ, ರಾಜ್ ಅವರಂತಹ ಮಹಾನ್ ಕಲಾವಿದರ ಮಗನಾಗುವುದು ಸುಲಭ ಅಲ್ಲ.. ಪ್ರತಿ ಹಂತದಲ್ಲೂ ಡಾ. ರಾಜ್ ಅವರ ಜೊತೆ ಪುನೀತ್ ಅವರನ್ನು ಹೋಲಿಕೆ ಮಾಡುವುದು ಕೆಲವೊಮ್ಮೆ ತೀವ್ರ ರೂಪದ ಸಮಸ್ಯೆಯನ್ನು ಒಡ್ಡುತ್ತಿತ್ತು. ಡಾ, ರಾಜ್ ಅವರ ಪ್ರಭಾವಳಿಯಿಂದ ಹೊರಗೆ ಬಂದು ತಮ್ಮದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಪುನೀತ್ ಅವರ ಮುಂದಿದ್ದ ಸವಾಲಾಗಿತ್ತು. ಈ ಸವಾಲನ್ನು ಅದ್ಭುತವಾಗಿ ಸ್ವೀಕರಿಸಿ ನಿರ್ವಹಿಸಿದವರು ಪುನೀತ್.. ಯಾವುದೇ ಹಂತದಲ್ಲೂ ಪುನೀತ್ ತಮ್ಮ ತಂದೆಯವರ ಅನುಕರಣೆ ಮಾಡಲಿಲ್ಲ. ತಂದೆಯವರಿಗಿಂತ ಭಿನ್ನವಾದ ನಟಾನಾ ಶೈಲಿಯನ್ನು ಅವರು ರೂಡಿಸಿಕೊಂಡರು. ಜೊತೆಗೆ ಇವತ್ತಿನ ಪ್ರೇಕ್ಷಕರಿಗೆ ಬೇಕಾದ್ದು ಏನು ಎಂಬುದನ್ನು ಸ್ವಯಂ ಪ್ರಯತ್ನನಿದಿಂದ ಅವರು ಕಂಡುಕೊಂಡರು.ಪುನೀತ್ ಅವರು ನಾಯಕರಾಗಿ ಚಿತ್ರರಂಗ ಪ್ರವೇಶಿಸುವಾಗ ಅವರಿಗೆ ಹಿರಿಯರ ಮಾರ್ಗದರ್ಶನ ಇತ್ತು ಎಂಬುದು ನಿಜ.. ಆದರೆ ಅವರು ಕ್ರಮೇಣ ಇದೆಲ್ಲವುದರಿಂದ ಹೊರಗೆ ಬಂದರು. ಜೊತೆಗೆ ಇವತ್ತಿನ ಸಿನಿಮಾದ ಎಲ್ಲ ಸಾಧ್ಯತೆಗಳನ್ನು ದುಡಿಸಿಕೊಳ್ಳುವ ಮನಸ್ಸು ಅವರದಾಗಿತ್ತು.ಒಟಿಟಿ ಪ್ಲಾ ಚಿತ್ರಟ್ ಫಾರ್ಮ್ ಬಂದಾಗ ಇದರ ಸಾಧ್ಯತೆಗಳ ಬಗ್ಗೆ ತಿಳಿದುಕೊಂಡ ಪುನೀತ್ ಚಿತ್ರಗಳ ನಿರ್ಮಾಣಕ್ಕೂ ಕೈ ಹಾಕಿದರು,,,ಇನ್ನೂ ಕೆಲವು ಸಿನಿಮಾಗಳ ನಿರ್ಮಾಣ ಯೋಜನೆಗಳೂ ಅವರಲ್ಲಿ ಇದ್ದವು,,

ಸಿನಿಮಾ ರಂಗದಲ್ಲಿ ತಮ್ಮದೇ ಆದ ಸ್ಥಾನವನ್ನು ನಿರ್ಮಿಸಿಕೊಂಡಿದ್ದ ಪುನೀತ್ ಟೀವಿಗಳಲ್ಲೂ ಕಾಣಿಸಿಕೊಳ್ಳತೊಡಗಿದರು..

● 16ನೇ ಪುಟಕ್ಕೆ...

# ಕಾಣದಂತೆ ಮಾಯವಾದನಾ ಲೋಹಿತ
# ಆತನ ಸ್ನೇಹದ ಪುನೀತತೆಯೇ ಅಂಥಾದ್ದು!







ಗಣೇಶ್
ಕಾಸರಗೋಡು

1980–81ರ ಸುಮಾರಿಗೆ ವೃತ್ತಿಬದುಕಿಗಾಗಿ ಬೆಂಗಳೂರು ಸೇರಿಕೊಂಡಾಗ ನನಗಿದ್ದ ಎರಡೇ ಎರಡು ಕೌತುಕವೆಂದರೆ : 1.ವಿಧಾನಸೌಧ 2.ರಾಜಕುಮಾರ್! ವಿಧಾನಸೌಧ ನೋಡಿದ್ದಾಯಿತು, ಇನ್ನು ರಾಜಕುಮಾರ್ ಅವರನ್ನು ನೋಡುವುದು ಹೇಗೆ? ಒಂದೇ ಒಂದು ಆಯ್ಕೆಯೆಂದರೆ ಕುಂಬಳಗೋಡಿನ ಫಾರ್ಮ್ ಹೌಸ್. ರಾಜಕುಮಾರ್ ಅಲ್ಲಿರುತ್ತಾರೆ ಎಂದು ಯಾರೋ ಹೇಳಿರುವ ಮಾತು ಕೇಳಿ ಸೈಕಲ್ ಹತ್ತಿ ಹೊರಟೇ ಬಿಟ್ಟೆ ಕುಂಬಳಗೋಡಿಗೆ! ಅಲ್ಲಿತ್ತು 'ಲೋಹಿತ್ ಫಾರಂ'. ರಸ್ತೆಗೆ ಅಭಿಮುಖವಾಗಿ ಹಾಕಿಸಿರುವ ಬೋರ್ಡನ್ನು ಕಂಡು ಸಾಕ್ಷಾತ್ ರಾಜಕುಮಾರ್ ಅವರನ್ನೇ ಕಂಡಷ್ಟು ಖುಷಿಯಾಯಿತು! ಆದರೆ ಆ ರಾಕ್ಷಸ ಗೇಟು ದಾಟಿ ಒಳ ಹೋಗುವುದು ಹೇಗೆ? ಸೈಕಲ್ಲನ್ನು ಗೋಡೆಗೊರಗಿಸಿ ಗೇಟು ಹಾರಲು ಪ್ರಯತ್ನಿಸಿದೆ. ಯಾರೋ ಗದರಿದಂತಾಯಿತು! ಗೇಟಿನ ಕಬ್ಬಿಣದ ರಾಡ್ ಬಿಟ್ಟು ಜರ್ರನೆ ಇಳಿದು ಬಿಟ್ಟೆ...ಅಲ್ಲಿಗೆ ರಾಜಕುಮಾರ್ ಅವರನ್ನು ಭೇಟಿ ಮಾಡುವ ಪ್ರೋಗ್ರಾಮನ್ನು ಕ್ಯಾನ್ಸಲ್ ಮಾಡಿ ನಾನು ತಂದಿದ್ದ ಕ್ಲಿಕ್–3 ಕ್ಯಾಮೆರಾದಲ್ಲಿ 'ಲೋಹಿತ್ ಫಾರಂ' ಬೋರ್ಡಿನ ಫೋಟೋ ಕ್ಲಿಕ್ಕಿಸಿಕೊಂಡೆ! ಅದು ನನ್ನ ಮತ್ತು 'ಲೋಹಿತ'ನ ಮೊಟ್ಟ ಮೊದಲ ಭೇಟಿ! ಈ ಹುಡುಗ ಇರುವುದೇ ಹಾಗೆ...

40 ವರ್ಷಗಳ ಹಿಂದೆ ರಾಜಕುಮಾರ್ ಕೊನೇ ಪುತ್ರನಿಗೆ 'ಲೋಹಿತ್' ಎಂಬ ಹೆಸರಿತ್ತು. ಆಗ ಆತನ ವಯಸ್ಸು 6 ವರ್ಷ! ಆಮೇಲೆ ಸಂಖ್ಯಾಶಾಸ್ತ್ರದ ಪ್ರಕಾರ 'ಪುನೀತ್ ರಾಜಕುಮಾರ್' ಎಂಬ ಹೆಸರನ್ನಿಡಲಾಯಿತು! ಈ ಘಟನೆಯ ವಿವರವನ್ನು ಒಮ್ಮೆ ಮಾತನಾಡುತ್ತಾ ಪುನೀತ್ ಬಳಿ ಹೇಳಿಕೊಂಡಾಗ ಜೋರಾಗಿ ನಕ್ಕು, ಭಕ್ತಿಯಿಂದ ಪಾದ ಮುಟ್ಟಿ ನಮಸ್ಕರಿಸಿದ್ದ ಪುನೀತ್! ಈ ಹುಡುಗ ಇರುವುದೇ ಹಾಗೆ...

ಈಗ ಹೇಳಲಿರುವ ಘಟನೆ ನಡೆದದ್ದು ಕಂಠೀರವಾ ಸ್ಟುಡಿಯೋದಲ್ಲಿ. ಅಂದು ಪುನೀತ್ ಅವರ 'ಮಾಯಾಬಜಾರ್' ಸಿನಿಮಾದ ಮುಹೂರ್ತ ಸಮಾರಂಭ. ನನ್ನ ಹಿರಿಯ ಮಗ ಅಭಿಷೇಕ್ ಅದಕ್ಕೆ ಕ್ಯಾಮರಾಮನ್. ಹೀಗಾಗಿ ನಾನು ಸಕುಟುಂಬ ಪರಿವಾರ ಸಮೇತ ಹೋಗಿದ್ದೆ. ನನ್ನ ಪತ್ನಿ ಗಾಯತ್ರಿ ದೂರದಲ್ಲೆಲ್ಲೋ ನಿಂತಿದ್ದಳು. ನಾನು ವಿಶ್ ಮಾಡಲೆಂದು ಪುನೀತ್ ಬಳಿ ಹೋದೆ. 'ಒಬ್ಬರೇ ಬಂದ್ರಾ?' – ಪುನೀತ್ ಕೇಳಿದ್ದಕ್ಕೆ 'ಪತ್ನಿ ಜತೆ ಬಂದಿದ್ದೇನೆ' ಅಂದೆ. 'ಅವ್ರು ಎಲ್ಲಿದ್ದಾರೆ? ಯಾಕೆ ಬಿಟ್ಟು ಬಂದ್ರಿ? ಕರೀರಿ ಅವ್ರನ್ನು...' – ಎಂದು ಹೇಳುತ್ತಾ ತಾವೇ ಖುದ್ದಾಗಿ ಗಾಯತ್ರಿ ಬಳಿ ಹೋಗಿ 'ಯಾಕೆ ಇಲ್ಲೇ ನಿಂತು ಬಿಟ್ರಿ? ಬನ್ನಿ, ನಿಮ್ಮ ಮಗನ ಸಿನಿಮಾ ಇದು...' – ಎಂದು ಹೇಳಿದ್ದಲ್ಲದೇ ಪಾದ ಮುಟ್ಟಿ ನಮಸ್ಕರಿಸಿ ಕೈ ಹಿಡಿದು ಮುಹೂರ್ತದ ಸ್ಪಾಟ್'ಗೆ ಕರೆದೊಯ್ದ ದೃಶ್ಯ ಇನ್ನೂ ಕಣ್ಣಲ್ಲಿದೆ! ಈ ಹುಡುಗ ಇರುವುದೇ ಹಾಗೆ...

2007ರ ಅದೊಂದು ದಿನ ಪ್ರೆಸ್'ಮೀಟ್'ವೊಂದರಲ್ಲಿ ಪಾರ್ವತಮ್ಮ ರಾಜಕುಮಾರ್ ಅವರು ನನಗೆ ಈ ಆಫರ್ ಕೊಟ್ಟಿದ್ದರು! ನಂಬಿದ್ರೆ ನಂಬಿ ಬಿಟ್ರೆ ಬಿಡಿ ಇದು ನಿಜ! ಅಂದು ಅವರು ಹೇಳಿದ್ದು : 'ನಮ್ಮ ಪುನೀತ್'ಗೆ ನೀವಂದ್ರೆ ತುಂಬಾ ಇಷ್ಟ. ನಿಮ್ಮನ್ನು ನೋಡಿದಾಗಲೆಲ್ಲಾ ಅವ್ರ ಕೈಲಿ ಒಂದು ಒಳ್ಳೆಯ ಪಾತ್ರ ಮಾಡಿಸ ಬೇಕಮ್ಮಾ ಅಂತಿದ್ದ. ನೀವು ಅವ್ನ ಫಿಲಂನಲ್ಲಿ ಆಕ್ಟ್ ಮಾಡ್ತೀರಾ?' – ಇದೆಂಥಾ ಆಹ್ವಾನ? ಒಪ್ಪದಿರುವುದುಂಟೆ? ಆ ಕ್ಷಣವೇ ಒಪ್ಪಿಗೆ ಕೊಟ್ಟಿದ್ದೆ. ಇದಾಗಿ 14 ವರ್ಷಗಳೇ ಕಳೆದರೂ ಪುನೀತ್ ಜೊತೆ ನಟಿಸುವ ಯೋಗ ಕೂಡಿ ಬಂದಿರಲಿಲ್ಲ. ಈ ನಡುವೆ ಪ್ರೆಸ್ ಮೀಟ್'ಗಳಲ್ಲಿ ಸಿಕ್ಕಾಗ ಪುನೀತ್ ಹೇಳುವುದಿತ್ತು : 'ಅಣ್ಣಾ, ನಿಮಗೆ ಅಂತಿಂಥಾ ಪುಟ್ಟ ಪಾತ್ರ ಕೊಟ್ಟರೆ ಸರಿ ಹೋಗೋದಿಲ್ಲ. ಒಂದೊಳ್ಳೆಯ ಪಾತ್ರ ಸಿಕ್ಕಾಗ ಖಂಡಿತಾ ನಾವಿಬ್ಬರೂ ಜೊತೆ ಸೇರ್ತೀವಿ...' – ಎಂದು ಹೇಳಿ ಪಾದ ಮುಟ್ಟಿ ನಮಸ್ಕರಿಸಿದ್ದ. ಇನ್ನೆಲ್ಲಿಯ ಯೋಗ? ಈ ಹುಡುಗ ಇರುವುದೇ ಹಾಗೆ...

ನಾನು ಸುದ್ದಿಟಿವಿಯಲ್ಲಿರುವಾಗ ಪುನೀತ್ ರಾಜಕುಮಾರ್ ಅವರನ್ನು ಆಹ್ವಾನಿಸಿದ ಘಟನೆ ನೆನಪಾಗುತ್ತದೆ. ಅದು ಶಾಂತಿನಗರದ ಬಿಎಂಟಿಸಿ ಒಂದು ಭಾಗ. ಅಚ್ಚುಕಟ್ಟಾದ ಸ್ಟುಡಿಯೋ. ಶಶಿಧರ ಭಟ್ ಸಪೋರ್ಟ್ ಇತ್ತು. ಅಲ್ಲಿಗೆ ನಾನು ಆಹ್ವಾನಿಸದ ಸ್ಟಾರ್, ಸೂಪರ್ ಸ್ಟಾರ್'ಗಳಿಲ್ಲ! ಹಾಗೆಯೇ ಪುನೀತ್ ಕೂಡಾ. ನನ್ನ ಪ್ರೀತಿಯ ಅಪ್ಪು ಸ್ಟುಡಿಯೋ ಒಳ ಪ್ರವೇಶಿಸುತ್ತಿರುವಂತೆಯೇ ಮಹಿಳಾ ಸಿಬ್ಬಂದಿಗಳಿಂದ ಆರತಿ ಎತ್ತಿ ಸ್ವಾಗತ. ಈ ಅನಿರೀಕ್ಷಿತವನ್ನು ಕಂಡು ಪುನೀತ್ ಕೊಂಚ ಗಲಿಬಿಲಿಗೊಂಡದ್ದನ್ನು ನಾನು ಗಮನಿಸಿದೆ. ನಂತರ ಸುಧಾರಿಸಿಕೊಂಡ ಪುನೀತ್ ಶೂ ಕಳಚಿಟ್ಟು ಸ್ಟುಡಿಯೋ ಪ್ರವೇಶಿಸಿದರು. ಶಶಿಧರ ಭಟ್ ಸ್ವಾಗತ ಕೋರಿ ತಮ್ಮ ಚೇಂಬರಿಗೆ ಕರೆದುಕೊಂಡು ಹೋದರು. ನಂತರ ಸ್ಟುಡಿಯೋ ಪರಿಚಯ. ಸ್ಟಾಫ್ ಪರಿಚಯ. ಅಪ್ಪು ಅಚ್ಚರಿಯಿಂದ ಸ್ಟುಡಿಯೋ ವೀಕ್ಷಿಸಿದರು. ತಕ್ಷಣವೇ ಶಶಿಧರ ಭಟ್ ಅವರಿಂದ ಸಂದರ್ಶನಕ್ಕೆ ಬೇಡಿಕೆ. ಯಾವ ಪೂರ್ವ ತಯಾರಿ ಇಲ್ಲದಿದ್ದರೂ ಅಪ್ಪು ಒಪ್ಪಿಯೇ ಬಿಟ್ಟರು! ಭರ್ತಿ 2 ಗಂಟೆಗಳ ಲೈವ್ ಸಂದರ್ಶನ. ಸಂದರ್ಶನ ಮುಗಿಸಿ ಹೊರಟು ನಿಂತ ಪುನೀತ್ ನನ್ನನ್ನು ಬಿಗಿದಪ್ಪಿಕೊಂಡು ಬೀಳ್ಕೊಟ್ಟದ್ದು ಇನ್ನೂ ಕಣ್ಣಲ್ಲಿದೆ. ಈ ಹುಡುಗ ಇರುವುದೇ ಹಾಗೆ...

ಇನ್ನು ಒಂದೇ ಒಂದು ದಿನ, ನವೆಂಬರ್ 1. ಕನ್ನಡ ರಾಜ್ಯೋತ್ಸವ. ಮೂರು ವರ್ಷಗಳ ಹಿಂದೆ ನಾನು ಸದಾಶಿವನಗರದ ಪುನೀತ್ ಮನೆಯಲ್ಲಿದ್ದೆ. ಅಂದು ಅವರಿಗೊಂದು ಗಿಫ್ಟ್ ಕೊಡುವುದಿತ್ತು. ಸಿವಿಲ್ ಎಂಜಿನೀರ್ ಆಗಿರುವ ನನ್ನ ಕಿರಿಯ ಮಗ ಅಲೋಕ್ ಚಿತ್ರಕಲಾವಿದನೂ ಹೌದು! ಅದರಲ್ಲೂ ಡ್ಯುಡಲ್ ಕಲೆಯಲ್ಲಿ ಪಳಗಿದ್ದಾನೆ. ರಾಜ್ಯೋತ್ಸವ ದಿನದ ವಿಶೇಷವಾಗಿ 'ಕನ್ನಡ' ಅಕ್ಷರವನ್ನು ಪೋಣಿಸಿದ ಡ್ಯುಡಲ್ ಕೃತಿಯನ್ನು ತಯಾರು ಮಾಡಿಕೊಂಡಿದ್ದ ಅಲೋಕ್. ಅದನ್ನು ಅಪ್ಪುವಿಗೆ ಗಿಫ್ಟಾಗಿ ಕೊಡುವುದು ಉದ್ದೇಶ. ಇದೊಂದು ಅನಿರೀಕ್ಷಿತ ಭೇಟಿ. ಫ್ರೇಮ್ ಹಾಕಿಸಿದ್ದ ಆಕರ್ಷಕ ಡ್ಯುಡಲ್ ಕೃತಿಯನ್ನು ಅಪ್ಪು ಕೈಗಿಟ್ಟಾಗ ಕುತೂಹಲದಿಂದ ವೀಕ್ಷಿಸಿದರು. 'ನನ್ನ ಮಗಳೂ ಡ್ಯುಡಲ್ ಆರ್ಟ್'ನಲ್ಲಿ ಪಳಗಿದ್ದಾಳೆ' ಎಂದು ಹೇಳುತ್ತಾ 'ಅಶ್ವಿನೀ' ಅಂತ ಹೆಂಡತಿಯನ್ನು ಕರೆದು ಅಲೋಕನನ್ನು ಪರಿಚಯಿಸಿದರು. ನಂತರ ತಮ್ಮ ಒಡೆತನದ ಕಆಖಿ ಸಂಸ್ಥೆಯ ಡ್ಯುಡಲ್ ಲೋಗೋ ಮಾಡಿಕೊಡುವಂತೆ 'ಆರ್ಡರ್' ಕೊಡಿಸಿದರು! ಈ ಹುಡುಗ ಇರುವುದೇ ಹಾಗೆ...

ನನ್ನ ನೇತೃತ್ವದ ಸಿನಿಮಾವೊಂದನ್ನು ಸೆನ್ಸಾರ್ ಬೋರ್ಡ್ ಸದಸ್ಯೆಯಾಗಿರುವ ಮೀರಾ ಅನುರಾಧಾ ಪಡಿಯಾರ್ ನಿರ್ಮಿಸುವುದಿತ್ತು. ಅದರ ಲೊಕೇಶನ್ ಚಾಮರಾಜನಗರ. ಹೀಗಾಗಿ ಅಲ್ಲಿ ನಡೆಯುವ ಮುಹೂರ್ತ ಸಮಾರಂಭಕ್ಕೆ ಪುನೀತ್ ರಾಜಕುಮಾರ್ ಅವರನ್ನು ಆಹ್ವಾನಿಸುವ ಯೋಚನೆಯಿತ್ತು. ಏಕೆಂದರೆ ಪುನೀತ್ ಅಲ್ಲಿನ ಮಣ್ಣಿನಮಗ! ಆದರೇನಾಯಿತು ನೋಡಿ. ಮುಂದೊಮ್ಮೆ ಸಿನಿಮಾ ಮುಹೂರ್ತ ನಡೆಯ ಬಹುದು. ಆದರೆ ಅಪ್ಪು ಎಲ್ಲಿದ್ದಾನೆ? ಈ ಹುಡುಗ ಇರುವುದೇ ಹಾಗೆ...

ಜರಗನಹಳ್ಳಿಯ ನಮ್ಮ 'ಅಮ್ಮನ ಮನೆ'ಗೆ ಪುನೀತ್ ಅವರನ್ನು ಆಹ್ವಾನಿಸಿದ್ದೆ. 'ಏನು ಕೊಡಿಸ್ತೀರಿ ಅಣ್ಣಾ?' – ಎಂದು ಅಪ್ಪು ಕೇಳಿದ್ದರು. 'ಚಿಕನ್ ಸುಕ್ಕಾ, ನೀರುದೋಸೆ' ಅಂದಿದ್ದೆ. ಬಾಯಲ್ಲಿ ನೀರು ತಂದು ಚಪ್ಪರಿಸುತ್ತಾ ಅಪ್ಪು ಹೇಳಿದ್ದರು : 'ಖಂಡಿತಾ ಬರ್ತೇನೆ ಅಣ್ಣಾ. ನಿಮ್ಮ ಊರಿನ ತಿಂಡಿ ನನಗಿಷ್ಟ'...ಎಲ್ಲಿದ್ದಾನೆ ಅಪ್ಪು? ಈ ಹುಡುಗ ಇರುವುದೇ ಹಾಗೆ... ಅಲೋಕ್ ಮದ್ವೆ ಹತ್ತಿರ ಬರ್ತಿದೆ. 2022ರ ಜನವರಿ 27ಕ್ಕೆ ಮಂಗಳೂರಿನಲ್ಲಿ ಮದುವೆ. ಮದುವೆಯ ನಂತರ ಬೆಂಗ್ಳೂರಿನಲ್ಲೊಂದು ಖಡಕ್ ರಿಸೆಪ್ಷನ್ ವ್ಯವಸ್ಥೆಗೊಳಿಸುತ್ತಿದ್ದೇನೆ. ನನ್ನನ್ನು 40 ವರ್ಷಗಳ ಕಾಲ ಸಾಕಿ ಸಲಹಿದ ಕನ್ನಡ ಚಿತ್ರರಂಗದ ಸಮಸ್ತರೂ ಅಂದು ಅಲ್ಲಿ ಹಾಜರಿರಬೇಕೆನ್ನುವುದು ನನ್ನ ಆಸೆ. ರಿಸೆಪ್ಷನ್ ನಡೆಯಲೂ ಬಹುದು. ಆದರೆ ಅಪ್ಪು ಎಲ್ಲಿದ್ದಾನೆ? ಈ ಹುಡುಗ ಇರುವುದೇ ಹಾಗೆ...ಶ್ಯೋ...

# ಡಾ.ರಾಜ್ ಗುಣಗಳನ್ನು ಅಹ್ವಾನಿಸಿಕೊಂಡಿದ್ದ ಪುನೀತ್


● 5ನೇ ಪುಟದಿಂದ...

ಕನ್ನಡ ಕೋಟ್ಯಾಧಿಪತಿ ಟೀವಿಯಲ್ಲಿನ ಯಶಸ್ವಿ ಕಾರ್ಯಕ್ರಮಗಳಲ್ಲಿ ಒಂದಾಗಿತ್ತು, ಟೀವಿಗಳಲ್ಲಿ ಹೊಸ ಹೊಸ ರೀತಿಯ ಕಾರ್ಯಕ್ರಮಗಳನ್ನು ನೀಡುವ ವಿಚಾರದಲ್ಲಿ ಅವರು ತೆರೆದ ಮನಸ್ಸಿನವರಾಗಿದ್ದರು, ಸಾಮಾಜಿಕ ಕಾರ್ಯಕ್ರಮಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ಪುನೀತ್ ದಾನ ಧರ್ಮ ಮಾಡುವುದರಲ್ಲಿಯೂ ಎತ್ತಿದ ಕೈ. ವಿದ್ಯಾರ್ಥಿಗಳ ಶಿಕ್ಷಣಕ್ಕೆ ಹೆಚ್ಚಿನ ಸಹಾಯ ಮಾಡುತ್ತಿದ್ದ ಪುನೀತ್ ನೀವು ಯಾರಿಗೆ ಸಹಾಯ ಮಾಡುತ್ತೀರೋ ಅದನ್ನು ಬಹಿರಂಗ ಪಡಿಸಬಾರದು, ಅದನ್ನು ಪ್ರಚಾರಕ್ಕೆ ಬಳಸಿಕೊಳ್ಳಬಾರದು ಎಂಬ ಮಾತಿನಲ್ಲಿ ನಂಬಿಕೆ ಇಟ್ಟವರಾಗಿದ್ದರು. ಪುನೀತ್ ಮನುಷ್ಯ ಸಂಬಂಧಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿದ್ದರು.. ವಾಟ್ಸಾಪ್ ನಲ್ಲಿ ಸಕ್ರಿಯವಾಗಿರುತ್ತಿದ್ದ ಅವರು ಎಂತಹ ಬಿಸಿಯಲ್ಲಿದ್ದರೂ ಸಂದೇಶಗಳಿಗೆ ಉತ್ತರ ನೀಡುತ್ತಿದ್ದರು.. ತಾನೊಬ್ಬ ದೊಡ್ಡ ನಟ,,ನಾನ್ಯಾಕೆ ಇವರ ಸಂದೇಶಗಳಿಗೆ ಉತ್ತರ ನೀಡಬೇಕು ಎಂಬ ಭಾವನೆ ಅವರಲ್ಲಿ ಇರಲೇ ಇಲ್ಲ...ಹೀಗಾಗಿ ಅವರ ಸ್ನೇಹವನ್ನು ಕಳೆದುಕೊಳ್ಳುವುದು ಸಾಧ್ಯವೇ ಇರಲಿಲ್ಲ. ಚಿತ್ರೀಕರಣದ ಸಂದರ್ಭದಲ್ಲಿ ಅದ್‌ಉ ಸಿನಿಮಾ ಇರಲಿ, ಕನ್ನಡದ ಕೋಟ್ಯಾಧಿಪತಿ ಅಂತಹ ಟೀವಿ ಕಾರ್ಯಕ್ರಮ ಇರಲಿ ಎಲ್ಲರ ಜೊತೆ ನಗು ನಗುತ್ತ ಬೆರೆಯುತ್ತಿದ್ದ ಪುನೀತ್ ಗೆ ಸಿಟ್ಟು ಬರುತ್ತಿದ್ದುದು ಕಡಿಮೆ,, ತಮ್ಮ ಬದುಕಿನ ಎರಡನೆಯ ಹಂತದಲ್ಲಿ ಅಂದರೆ ಬ್ಯುಸಿನೆಸ್ ಮಾಡಲು ಹೊರಟ ಸಂದರ್ಭದಲ್ಲಿ ಕೆಲವೊಮ್ಮೆ ಸಿಟ್ಟು ಮಾಡಿಕೊಂಡ ಉದಾಹರಣೆ ಇದೆ.. ಆದರೆ ಚಿತ್ರರಂಗದ ನಾಯಕ ನಟನಾದ ಮೇಲೆ ನಾಯಕನಂತೆ ಇದ್ದವರು ಪುನೀತ್. ಹಾಗೆ ತಮ್ಮ ದಿನಚರಿಯಲ್ಲಿ ಶಿಸ್ತನ್ನು ಅಳವಡಿಸಿಕೊಂಡವರು. ಬೆಳಿಗ್ಗೆ ಎದ್ದ ಮೇಲೆ ವಾಕಿಂಗ್ ನಂತರ ಜಿಮ್ ಯಾವುದನ್ನು ತಪ್ಪಿಸಿದವರಲ್ಲ. ಡಾ. ರಾಜ್ ಕುಮಾರ್ ಅವರಂತೆ ಶಿಸ್ತಿನ ಸಿಫಾಯಿ ಆಗಿದ್ದವರು.. ದೇಹವನ್ನು ಮಣಿಸುವುದು ಕುಣಿಸುವುದು ಅವರಿಗೆ ಇಷ್ಟ,, ಕೆಲವೊಮ್ಮೆ ಅನಿಸುತ್ತದೆ, ಶಿಸ್ತಿನ ವ್ಯಕ್ತಿಗಳು ಕೆಲವೊಮ್ಮೆ ಅಶಿಸ್ತಿನಿಂದ ಇರುವುದನ್ನು ಕಲಿಯಬೇಕು ಅಂತ. ಜೊತೆಗೆ ತಮ್ಮ ದೇಹದ ಜೊತೆ ಮಾತನಾಡುವುದನ್ನು ಕಲಿಯಬೇಕು. ದೇಹದ ಮಾತು ಕೇಳಿಸಿಕೊಳ್ಳಬೇಕು. ಪುನೀತ್ ಅಸು ನೀಗಿದ ಮೇಲೆ ನಾನು ಈಗ ನೀಡಿದ ಸಲಹೆಯ ಮಾಧರಿಯಲ್ಲಿ ಎಲ್ಲರೂ ಸಲಹೆ ನೀಡುತ್ತಿದ್ದಾರೆ,,ಎಲ್ಲರೂ ವೈದ್ಯರಾಗಿ ಬಿಟ್ಟಿದ್ದಾರೆ,, ಬೇರೆ ಬೇರೆ ಸುದ್ದಿ ವಾಹಿನಿಗಳ ಯಾಂಕರುಗಳು ವೈದ್ಯಕೀಯ ಸಲಹೆ ನೀಡುವುದರಲ್ಲಿ ನಿರತರಾಗಿದ್ದಾರೆ,

ನಲವತ್ತಾರು ಸಾಯುವ ವಯಸ್ಸಲ್ಲ ಎಂದು ಎಲ್ಲರೂ ಹೇಳುತ್ತಾರೆ, ಅದು ನಿಜ. ಆದರೆ ಸಾಯುವುದಕ್ಕೆ ವಯಸ್ಸು ಎಂಬುದು ಇರುವುದಿಲ್ಲ...ಯಾವ ಕ್ಷಣದಲ್ಲಿ ಬೇಕಾದರೂ ಸಾವು ಬರಬಹುದು,,ಒಬ್ಬ ವ್ಯಕ್ತಿ ಅಸು ನೀಗಿದಾಗ ನಾವೆಲ್ಲ ಅವನು ಬದುಕಿದ ಸಮಯವನ್ನು ನೆನಪು ಮಾಡಿಕೊಳ್ಳುತ್ತ ಆ ವ್ಯಕ್ತಿ ಹೇಗೆ ಬದುಕಿದ್ದ ಎಂಬುದನ್ನು ಮೆಲಕು ಹಾಕುತ್ತೇವೆ, ಈಗಲೂ ಪುನೀತ್ ರಾಜಕುಮಾರ್ ಅವರ ನೆನಪು ಮಾಡಿಕೊಳ್ಳುತ್ತಿದ್ದೇವೆ. ಡಾ. ರಾಜ ನಿಧನರಾದಾಗಲೂ ನೆನಪು ಮಾದಿಕೊಂಡಿದ್ದೆವು,. ಕೊನೆಯದಾಗಿ ನಾವು ಹೇಳುವುದು ಪುನೀತ್ ಇನ್ನೂ ಕೆಲಕಾಲ ನಮ್ಮ ನಡುವೆ ಇರಬೇಕಿತ್ತು ಎಂದು,,











**ಪಶ್ಚಿಮ ಬಂಗಾಳದಲ್ಲಿ ಪ್ರಾದೇಶಿಕ ಪಕ್ಷ ತೃಣಮೂಲ ಕಾಂಗ್ರೆಸ್‌ನೊಂದಿಗೆ ಕೈಜೋಡಿಸಿರುವ ಮುಸ್ಲಿಂ ಸಮುದಾಯ ಕರ್ನಾಟಕದಲ್ಲಿ ಜೆಡಿಎಸ್ ಜೊತೆ ನಿಂತೀತೆಂಬ ಮಾಜಿ ಸಿಎಂ ಕುಮಾರಸ್ವಾಮಿಯವರ ಲೆಕ್ಕಾಚಾರ ಸಿಂದಗಿ, ಹಾನಗಲ್ ಉಪ ಚುನಾವಣೆಯಲ್ಲಿ ತಲೆಕೆಳಗಾಗಿದೆ. ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ಸಿಗರನ್ನೂ, ಕಮ್ಯೂನಿಸ್ಟರನ್ನೂ ಅಪ್ರಸ್ತುತರನ್ನಾಗಿಸಿರುವ ಮಮತಾ ಬ್ಯಾನರ್ಜಿ, ಬಂಡೆಗಲ್ಲಿನಂತೆ ನಿಶ್ಚಲರಾಗಿದ್ದಾರೆ. ಇಲ್ಲಿ ಆ ಪ್ರಯೋಗ ಅಷ್ಟೆಲ್ಲ ಸುಲಭದ ಕಾರ್ಯವಲ್ಲ.**

# ಜೆಡಿಎಸ್: ಸೋತ ಪ್ರಯೋಗ

ರಾಜಸೂತ್ರ
ಎಂ.ಕೆ. ಭಾಸ್ಕರ ರಾವ್
ಹಿರಿಯ ಪತ್ರಕರ್ತರು



ಕಲಿಯುವ ಮನಸ್ಸುಳ್ಳವರಿಗೆ ಕಲಿಯಬಹುದಾದ ಪಾಠ, ಸಿಂದಗಿ ಮತ್ತು ಹಾನಗಲ್ ಉಪಚುನಾವಣಾ ಫಲಿತಾಂಶದಲ್ಲಿದೆ. ಈ ಎರಡು ಕ್ಷೇತ್ರದ ಜಯವಾಗಲೀ ಅಪಜಯವಾಗಲೀ ರಾಜ್ಯ ರಾಜಕೀಯದಲ್ಲಿ ಬಹಳ ದೊಡ್ಡ ಪರಿಣಾಮ ಬೀರುವುದಾಗಿರಲಿಲ್ಲ, ಆಡಳಿತ ಪಕ್ಷಕ್ಕೂ ವಿರೋಧ ಪಕ್ಷಕ್ಕೂ ಗೊತ್ತಿರುವ ಸತ್ಯ ಇದಾಗಿತ್ತು. ಹಾಗಂತ ಉದಾಸೀನ ಮಾಡುವಂತೆಯೂ ಇರಲಿಲ್ಲ. ಉದಾಸೀನ ಮಾಡಬಾರದೆಂಬ ಕಾರಣಕ್ಕೇ ಜಿದ್ದಾಜಿದ್ದಿನ ಕುಸ್ತಿಗೆ ಸಿಂದಗಿ, ಹಾನಗಲ್ ರಣಕಣವಾದವು.



ಹಾನಗಲ್‌ನಲ್ಲಿ ಆಡಳಿತ ಪಕ್ಷದ ಶಾಸಕ ಸಿ.ಎಂ. ಉದಾಸಿ, ಸಿಂದಗಿಯಲ್ಲಿ ಜೆಡಿಎಸ್ ಶಾಸಕ ಎಂ.ಸಿ. ಮನಗೂಳಿ ನಿಧನ ಉಪ ಚುನಾವಣೆ ನಡೆಯುವುದಕ್ಕೆ ಕಾರಣ. ತನ್ನದಾಗಿರದಿದ್ದ ಕ್ಷೇತ್ರ ಸಿಂದಗಿಯನ್ನು ಆಡಳಿತಾರೂಢ ಬಿಜೆಪಿ ತನ್ನ ತೆಕ್ಕೆಗೆ ಹಾಕಿಕೊಂಡಿದೆ. ತನ್ನ ಕೈಯಲ್ಲಿದ್ದ ಹಾನಗಲ್ ಕ್ಷೇತ್ರವನ್ನು ಹೀನಾಯ ಎನ್ನಬಹುದಾದ ರೀತಿಯಲ್ಲಿ ಅದು ಸೋತಿದೆ. ಕಾಂಗ್ರೆಸ್ ಹಾನಗಲ್‌ನಲ್ಲಿ ಗೆಲುವಿನ ನಗೆಯನ್ನು ಚೆಲ್ಲಿದೆ. ಕೈಲಿದ್ದ ಸಿಂದಗಿಯನ್ನೂ, ಆಸೆಗಣ್ಣಿನಿಂದ ಕಣಕ್ಕೆ ಇಳಿದಿದ್ದ ಹಾನಗಲ್ ಕ್ಷೇತ್ರವನ್ನೂ ಜಾತ್ಯತೀತ ಜನತಾ ದಳ ಸೋತಿದೆ. ಸಿಂದಗಿಯಲ್ಲಿ ಮೂರನೇ ಸ್ಥಾನಕ್ಕೆ ಹೋಗಿರುವ ಆ ಪಕ್ಷವನ್ನು ಹಾನಗಲ್ ಮತದಾರರು ನಾಲ್ಕನೇ ಸ್ಥಾನಕ್ಕೆ ತಳ್ಳಿದ್ದಾರೆ.

ಹಾನಗಲ್ ಬಿಜೆಪಿ ಪಾಲಿಗೆ ಹೇಗೆ ಹೀನಾಯ ಸೋಲಿಗೆ ಕ್ಷೇತ್ರವಾಯಿತು ಎನ್ನುವುದನ್ನು ಮೊದಲಿಗೆ ನೋಡಬೇಕು. ಅಲ್ಲಿ ಶಾಸಕರಾಗಿದ್ದ ಸಿ.ಎಂ. ಉದಾಸಿ, ಎಂಭತ್ತರ ದಶಕದಿಂದಲೂ ಪ್ರಭಾವಿ ರಾಜಕಾರಣಿ. ಸೋಲು ಗೆಲುವುಗಳನ್ನು ಕಾಲಕಾಲಕ್ಕೆ ಕಂಡಿದ್ದರೂ ಕ್ಷೇತ್ರದಲ್ಲಿ ಗೌರವಾನ್ವಿತ ಹೆಸರಾಗಿ ಬಾಳಿದವರು ಉದಾಸಿ. ಅವರ ಮಗ ಶಿವಕುಮಾರ ಉದಾಸಿ, ಹಾವೇರಿ ಲೋಕಸಭಾ ಕ್ಷೇತ್ರಕ್ಕೆ ಎರಡನೇ ಅವಧಿಗೆ ಸದಸ್ಯ. ಕೇಂದ್ರ ಸಚಿವ ಸಂಪುಟವನ್ನು ಪ್ರಧಾನಿ ನರೇಂದ್ರ ಮೋದಿ ಇತ್ತೀಚೆಗೆ ಪುನರ್‌ರಚಿಸಿದಾಗ ಸಂಭಾವ್ಯ ಸಚಿವರ ಪಟ್ಟಿಯಲ್ಲಿ ಇವರ ಹೆಸರೂ ಇತ್ತು. ಬಿ.ಎಸ್. ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಕ್ಕಿಳಿಸಲು ಬಿಜೆಪಿ ಹೈಕಮಾಂಡ್ ಯತ್ನ ನಡೆಸಿದ್ದ ಸಂದರ್ಭದಲ್ಲಿ ಆ ಸ್ಥಾನಕ್ಕೆ ಕೇಳಿಬಂದ ಕೆಲವು ಹೆಸರುಗಳಲ್ಲಿ ಶಿವಕುಮಾರ ಉದಾಸಿ ಅವರದೂ ಒಂದಾಗಿತ್ತು. ಹಾವೇರಿ ಕ್ಷೇತ್ರದ ಭಾಗವಾಗಿರುವ ಹಾನಗಲ್ ವಿಧಾನ ಸಭಾ ಕ್ಷೇತ್ರ, ಅವರ ರಾಜಕೀಯ ಭವಿಷ್ಯದ ದೃಷ್ಟಿಯಿಂದ ಮತ್ತು ಆ ಕುಟುಂಬದ ರಾಜಕೀಯವನ್ನು ರಾಜ್ಯದಲ್ಲಿ ಸಕ್ರಿಯವಾಗಿ ಮುಂದುವರಿಸುವುದಕ್ಕೆ ಬಿಜೆಪಿ ಅಭ್ಯರ್ಥಿಯ ಗೆಲುವು ಅವರಿಗೆ ಬೇಕಾಗಿತ್ತು. ಆ ಯೋಚನೆಯ ಭಾಗವಾಗಿ ತಮ್ಮ ಪತ್ನಿಗೆ ಪಕ್ಷದ ಟಿಕೆಟ್ ಕೊಡಿಸುವುದಕ್ಕೆ ಹರಸಾಹಸವನ್ನೇನೋ ಅವರು ಮಾಡಿದರು. ಬಯಸಿದ ವರ ಸಿಗಲಿಲ್ಲ. ಕಣಕ್ಕೆ ಪಕ್ಷ ಇಳಿಸಿದ ಅಭ್ಯರ್ಥಿ ಶಿವಾಜಿ ಸಜ್ಜನರ್ ಗೆಲುವನ್ನು ತರಲಿಲ್ಲ.



ಇದು ಸೋಲಿನ ಒಂದು ಪಾರ್ಶ್ವದ ನೋಟವಾಯಿತು. ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ ಮಾನೆ ಬಹಳ ಅಂತರದಿಂದೇನೂ ಗೆಲ್ಲಲಿಲ್ಲ. ಅವರ ಮತ್ತು ಶಿವಾಜಿ ಸಜ್ಜನರ್ ನಡುವಣ ಗೆಲುವಿನ ಅಂತರ ಕೇವಲ 7426 ಮತಗಳು ಮಾತ್ರ. ಸಾಮಾನ್ಯವಾಗಿ ವಿಧಾನ ಸಭಾ ಚುನಾವಣೆಯಲ್ಲಿ ಗೆಲುವಿನ ಅಂತರ ವಿಶೇಷ ಪ್ರಕರಣ ಹೊರತುಪಡಿಸಿದರೆ ಈ ಸಂಖ್ಯೆಯ ಆಜೂಬಾಜಿನಲ್ಲೇ ಇರುತ್ತದೆ. ಆ ದೃಷ್ಟಿಯಿಂದ ನೋಡಿದರೆ ಗೆದ್ದ ಪಕ್ಷಕ್ಕೆ ಭಾರೀ ಜಯವಲ್ಲ, ಸೋತ ಪಕ್ಷಕ್ಕೆ ಭಾರೀ ಸೋಲಲ್ಲ. ಆದರೂ ಆಡಳಿತ ಪಕ್ಷಕ್ಕೆ ಇದೊಂದು ಹೀನಾಯ ಹಿನ್ನಡೆ ಎನ್ನುವುದಕ್ಕೆ ಕಾರಣ ಹಾನಗಲ್ ಮತ ಕ್ಷೇತ್ರ ಇರುವುದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ತವರು ಜಿಲ್ಲೆ ಹಾವೇರಿಯಲ್ಲಿ. ಬೊಮ್ಮಾಯಿ ಅವರ ಮತ ಕ್ಷೇತ್ರ ಶಿಗ್ಗಾಂವಿ. ಹಾನಗಲ್ ಮತ್ತು ಶಿಗ್ಗಾಂವಿಯನ್ನು ಭೌಗೋಳಿಕವಾಗಿ ರಸ್ತೆಯೊಂದು ಗೆರೆಯಂತೆ ಕೊರೆಯುತ್ತದೆ.ಮಾತ್ರವಲ್ಲ, ಮುಖ್ಯಮಂತ್ರಿಯಾದ ನಂತರದಲ್ಲಿ ಮೊದಲಿಗೆ ಅವರು ಎದುರಿಸಿದ ಅಗ್ನಿ ಪರೀಕ್ಷೆ ಅವರ ತೌರು ಜಿಲ್ಲೆಯಲ್ಲಿ ನಡೆದ ಈ ಚುನಾವಣೆ.



ಸ್ವತಃ ಮುಖ್ಯಮಂತ್ರಿ ಸೇರಿದಂತೆ ಅವರ ಸಂಪುಟದ ಡಜನ್‌ಗೂ ಹೆಚ್ಚು ಸಚಿವರು ವಾರಗಟ್ಟಳೆ ಹಾನಗಲ್ ಮತ ಕ್ಷೇತ್ರದಲ್ಲಿ ಠಿಕಾಣಿ ಹೂಡಿ ಹಗಲೂ ರಾತ್ರಿ ಪ್ರಚಾರ ನಡೆಸಿದರು. ಸಿಂದಗಿ ಕ್ಷೇತ್ರದಲ್ಲೂ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಮತ್ತು ಮಾಜಿ ಡಿಸಿಎಂ ಲಕ್ಷ್ಮಣ ಸವದಿ ಸಾರಥ್ಯದಲ್ಲಿ ಒಂದು ಡಜನ್ ಸಚಿವರು ಪ್ರಚಾರ ಸತ್ರವನ್ನೇ ನಡೆಸಿದರು. ಒಂದೊಂದೂ ಬೂತ್‌ಗೆ ಮೂವತ್ತರಂತೆ ಕಾರ್ಯಕರ್ತರನ್ನು ಬಿಟ್ಟು ತಳಮಟ್ಟದಲ್ಲೇ ಪಕ್ಷದ ಅಭ್ಯರ್ಥಿಯ ಗೆಲುವನ್ನು ಖಚಿತ ಪಡಿಸಿಕೊಳ್ಳುವ ಬಿಜೆಪಿ ನಾಯಕತ್ವ ರೂಪಿತ ಕಾರ್ಯತಂತ್ರ ಸಿಂದಗಿಯಲ್ಲಿ ಕೈ ಹಿಡಿಯಿತು; ಹಾನಗಲ್‌ನಲ್ಲಿ ಕೈ ಕೊಟ್ಟಿತು. ಇಷ್ಟೆಲ್ಲ ಮಾಡಿದರೂ ಹೇಗೆ ಸೋತಿದ್ದು...? ಯಡವಟ್ಟಾಯಿತೆಲ್ಲಿ...? ಸೋಲಿನಲ್ಲಿ ಯಾರ್ಯಾರ ಪಾತ್ರ ಎಷ್ಟೆಷ್ಟು ಎನ್ನುವುದನ್ನು ತಿಳಿಯುವುದಕ್ಕೆ ಸತ್ಯಶೋಧಕ ಸಮಿತಿ ರಚನೆಯಾಗುತ್ತದೆ. ಕಾಂಗ್ರೆಸ್‌ನಲ್ಲೂ ಇಂಥ ಸಮಿತಿ ಸಿಂದಗಿ ಸೋಲಿನ ಸಂಬಂಧದಲ್ಲಿ ರಚನೆಯಾಗಲಿದೆ. ಏನೇ ಮಾಡಿದರೂ, ಎಷ್ಟೇ ತಿಪ್ಪರಲಾಗ ಹೊಡೆದರೂ ಸೋಲು ಸೋಲೇ. ಇಂಥ ಸಮಿತಿಗಳ ಫಲಶ್ರುತಿ ತೌಡನ್ನು ಕುಟ್ಟಿದಂತೆ.

ಹಾನಗಲ್‌ನಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತೋರಿಕೆಗಾದರೂ ಒಟ್ಟಿಗೆ ಕೆಲಸ ಮಾಡಿದ್ದು ಗೆಲುವಿನ ಕಾರಣವೆಂದು ಆ ಪಕ್ಷ ಹೇಳಿಕೊಳ್ಳುತ್ತಿದೆ. ವಾಸ್ತವ ಅದಲ್ಲ. ಗೆಲುವಿನ ರೂವಾರಿ ಸ್ವತಃ ಶ್ರೀನಿವಾಸ ಮಾನೆ. 2018ರ ಚುನಾವಣೆಯಲ್ಲಿ ಉದಾಸಿ ವಿರುದ್ಧ ಅವರು ಸೋತಿದ್ದರು. ಅವರ ಆಗಿನ ಸೋಲಿನಲ್ಲಿ ಟಿಕೆಟ್ ಆಕಾಂಕ್ಷಿಯಾಗಿದ್ದ ಇನ್ನು ಕೆಲವು ಕಾಂಗ್ರೆಸ್ಸಿಗರ ಪಾತ್ರವೂ ಇತ್ತೆಂಬ ಆರೋಪವಿದೆ. ಮಾನೆ, ಸೋಲಿನ ದುಃಖದಲ್ಲಿ ಕೊರಗುತ್ತ ಕೂರಲಿಲ್ಲ. ಉಳಿದವರಿಗೆ ಹೇಗೋ ಏನೋ ಮಾನೆ ಪಾಲಿಗೆ ಕೊರೋನಾ ವರರೂಪದಲ್ಲಿ ವಕ್ಕರಿಸಿತು. ನಾನು ಸೋತಿದ್ದೇನೆ, ಗೆದ್ದವರು ನೋಡಿಕೊಳ್ಳಲಿ ಎಂದು ಕೈಚೆಲ್ಲಿ ಮೂಲೆ ಹಿಡಿಯಲಿಲ್ಲ. ಬದಲಿಗೆ ಹಾನಗಲ್ ಕ್ಷೇತ್ರ ವ್ಯಾಪ್ತಿಯ ಹಳ್ಳಿಹಳ್ಳಿಗಳಲ್ಲಿ ಕೊರೋನಾ ಸೋಂಕಿನ ವಿರುದ್ಧ ಹೋರಾಟವನ್ನೂ ಜನ ಜಾಗೃತಿ ಅಭಿಯಾನವನ್ನೂ, ವ್ಯಾಕ್ಸಿನೇಷನ್ ಆಂದೋಲನವನ್ನೂ ಕೈಗೆತ್ತಿಕೊಂಡರು. ಕಷ್ಟದಲ್ಲಿ ಇದ್ದವರಿಗೆ ಅಸಹಾಯಕ ಸ್ಥಿತಿಯಲ್ಲಿರುವವರಿಗೆ ನೆರವಾದರು. ಆ ಸಮಯದಲ್ಲಿ ಉಪ ಚುನಾವಣೆ ಬರುತ್ತದೆಂಬುದರ ಸಣ್ಣ ಕಲ್ಪನೆಯೂ ಅವರಲ್ಲಿರಲಿಲ್ಲ. ಐದು ವರ್ಷದ ನಂತರ ಬರಬೇಕಿದ್ದ ಚುನಾವಣೆಗೆ ಅವರು ಪೂರ್ವ ತಯಾರಿ ನಡೆಸಿದ್ದು ಸುಳ್ಳಾಗಿರಲಿಲ್ಲ.



ಕೊರೋನಾ ತೀವ್ರ ಸ್ವರೂಪದಲ್ಲಿ ಅಟ್ಟಾಡಿಸುತ್ತಿದ್ದ ಸಮಯದಲ್ಲಿ ಶಾಸಕ ಉದಾಸಿ ಅಸ್ವಸ್ಥರಾಗಿ ಹಾಸಿಗೆ ಹಿಡಿದರು. ಅವರನ್ನು ಬೆಂಗಳೂರಿನಲ್ಲಿ ಆಸ್ಪತ್ರೆಗೆ ಸೇರಿಸಲಾಯಿತು. ಆ ಅವಧಿಯಲ್ಲಿ ಅಧಿಕೃತ ಶಾಸಕರಿಲ್ಲದ ಕೊರತೆಯನ್ನು ಮಾನೆ ತುಂಬಿದರು. ಅವರ ಸೇವಾವ್ರತ ಎಷ್ಟು ಒಳ್ಳೆಯ ಪರಿಣಾಮ ಬೀರಿತೆಂದರೆ "ಮನೆಮನೆಗೆ ಮಾನೆ" ಎಂಬ ಸ್ಲೋಗನ್ ಹುಟ್ಟಿಕೊಂಡಿತು. ಉದಾಸಿ ನಿಧನರಾದಾಗ ಉಪ ಚುನಾವಣೆ ನಡೆಯುವುದು ಪಕ್ಕಾ ಆಯಿತಲ್ಲ. ಜನಮೆಚ್ಚಿದ ಮಗನನ್ನೇ ಕಾಂಗ್ರೆಸ್ಸು ಶಾಸಕ ಅಭ್ಯರ್ಥಿಯನ್ನಾಗಿ ಕಣಕ್ಕೆ ಇಳಿಸಿತು. ಅದು ಲಾಟರಿ ಹೊಡೆಯಿತು.

ಹಾನಗಲ್‌ನಲ್ಲಿ ಕಾಂಗ್ರೆಸ್ ಮಾಡಿದ ತಂತ್ರ ಸಿಂದಗಿಯಲ್ಲಿ ಗೆಲುವಿನ ಹಾದಿಯನ್ನು ತೋರಿಸಿತೇ ವಿನಾ ಗೆಲುವನ್ನು ತಂದುಕೊಡಲಿಲ್ಲ. ಜೆಡಿಎಸ್‌ನ ಶಾಸಕರಾಗಿದ್ದ ಎಂ.ಸಿ. ಮನಗೂಳಿ ಅವರ ಮಗ ಅಶೋಕ ಮನಗೂಳಿ ಅವರನ್ನು ಪಕ್ಷಕ್ಕೆ ಎಳೆದುಕೊಂಡ ಅದು ಕಾಂಗ್ರೆಸ್‌ನಲ್ಲಿ ಸಮರ್ಥ ಅಭ್ಯರ್ಥಿ ಇರಲಿಲ್ಲ ಹಾಗಾಗಿ ಜೆಡಿಎಸ್ ಮುಖಂಡರೊಬ್ಬರನ್ನು ಹೈಜಾಕ್ ಮಾಡಿತೆಂಬ ಅಪಪ್ರಚಾರಕ್ಕೆ ತಾನೇ ಕಾರಣವಾಯಿತು. ಸಿದ್ದರಾಮಯ್ಯ ಒಪ್ಪಿಕೊಂಡಿರುವಂತೆ ಅಲ್ಲಿ ಮನಗೂಳಿ ಜೊತೆ ಕಾಂಗ್ರೆಸ್‌ಗೆ ಬಂದ ಕ್ಷೇತ್ರದ ಜೆಡಿಎಸ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಹೊಂದಾಣಿಕೆ ಆಗಲೇ ಇಲ್ಲ. ಆದರೆ 2018ರ ಚುನಾವಣೆಯಲ್ಲಿ ಮೂರನೇ ಸ್ಥಾನಕ್ಕೆ ಹೋಗಿದ್ದ ಆ ಪಕ್ಷ ಈ ಸಲ ಎರಡನೇ ಸ್ಥಾನಕ್ಕೆ ಬಂತೆನ್ನುವುದು ಅದರ ಪಾಲಿಗೆ ಸಿಕ್ಕ ಸಮಾಧಾನಕರ ಬಹುಮಾನ. ಈ ಕ್ಷೇತ್ರದಲ್ಲಿ ಬಿಜೆಪಿ ಗೆಲುವು ಸಾಮಾನ್ಯವಾದುದಲ್ಲ. ಅದರ ಅಭ್ಯರ್ಥಿ ರಮೇಶ ಸಜ್ಜನರ್ ಅವರ ಗೆಲುವಿನ ಅಂತರ 31,185 ಮತಗಳು ಎನ್ನುವುದು ಯಾರೂ ಹೆಮ್ಮೆ ಪಡಬಹುದಾದ ಗೆಲುವು. ಹಾನಗಲ್‌ನಲ್ಲಿ ಮಾತ್ರ ಬಿಜೆಪಿ ಅತಿಯಾದ ಆತ್ಮವಿಶ್ವಾಸದಲ್ಲಿ ತನ್ನ ಕಾಲ ಕೆಳಗಿನ ನೆಲ ಅದುರುತ್ತಿರುವುದನ್ನು ಅರ್ಥ ಮಾಡಿಕೊಳ್ಳದೆ ಹೋಯಿತು. ಸಿಎಂ ತೌರು ಜಿಲ್ಲೆಯ ಕ್ಷೇತ್ರದ ಜನ ಸಿಎಂ ಮುಖ ನೋಡಿ ಓಟು ಹಾಕಿಬಿಡುತ್ತಾರೆಂಬ ಅದರ ಧೋರಣೆ ತಂದ ಉಡುಗೊರೆ ಸೋಲು.



ಇನ್ನು ಎರಡೂ ಕ್ಷೇತ್ರಗಳ ಮೂಲಕ ಉತ್ತರ ಕರ್ನಾಟಕದಲ್ಲಿ ತನ್ನ ಕಾಲನ್ನು ಸುಭದ್ರ ಮಾಡಿಕೊಳ್ಳುವ ಆಸೆಯಲ್ಲಿ ಚುನಾವಣಾ ಕಣಕ್ಕೆ ಧುಮುಕಿದ ಜಾತ್ಯತೀತ ಜನತಾ ದಳದ ಸಮಾಚಾರ. ಸಿಂದಗಿ ಅವರದೇ ಕ್ಷೇತ್ರ. ಎಂ.ಸಿ. ಮನಗೂಳಿಯವರು ಕಾಂಗ್ರೆಸ್ ಬೆಂಬಲಿತ ಜೆಡಿಎಸ್ ಸರ್ಕಾರದಲ್ಲಿ ಸಚಿವರೂ ಆಗಿದ್ದರು. ಅವರ ನಿಧನ ಉಪ ಚುನಾವಣೆಗೆ ಕಾರಣ. ಅವರು ನಿಧನರಾದಾಗ ಅವರ ಮಗ ಅಶೋಕ ಮನಗೂಳಿ ಅವರೇ ಜೆಡಿಎಸ್ ಅಭ್ಯರ್ಥಿ ಎಂಬ ಮಾತು ಹರಡಿತ್ತು. ಆದರೆ ಅಶೋಕರನ್ನು "ಈ ಬಾರಿ ಗೆಲ್ಲುವುದು ನಾವೇ" ಎಂದ ಕಾಂಗ್ರೆಸ್ಸು ಹೈಜಾಕ್ ಮಾಡಿತು. ಮಾತಿನಂತೆ ಟಿಕೆಟ್ ಕೊಟ್ಟು ದೊಡ್ಡ ಹೋರಾಟವನ್ನೇ ನಡೆಸಿತಾದರೂ ಸೋಲಿನಿಂದ ಪಾರಾಗುವುದು ಸಾಧ್ಯವಾಗಲಿಲ್ಲ. ತನ್ನ ಸಂಭಾವ್ಯ ಅಭ್ಯರ್ಥಿಯನ್ನು ಕಳೆದುಕೊಂಡ ಜೆಡಿಎಸ್ ಕಾಂಗ್ರೆಸ್‌ಗೆ ಪಾಠ ಕಲಿಸುವ ತೀರ್ಮಾನಕ್ಕೆ ಬಂದು ಹಾನಗಲ್ ಮತ್ತು ಸಿಂದಗಿಯಲ್ಲಿ ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಯುವಂತೆ ಮಾಡಿತು.ಮುಸ್ಲಿಂ ಸಮುದಾಯ ಬಿಜೆಪಿಗೆ ಎಂದೂ ಓಟು ಹಾಕುವುದಿಲ್ಲ. ಒಂದಿಷ್ಟು ಓಟು ಕಾಂಗ್ರೆಸ್‌ಗೆ ಮತ್ತೊಂದಿಷ್ಟು ಜೆಡಿಎಸ್‌ಗೆ ಹೋಗುವುದು ನಡೆದುಕೊಂಡು ಬಂದಿರುವ ರೀತಿ. ಮುಸ್ಲಿಂರನ್ನೇ ಕಣಕ್ಕೆ ಇಳಿಸಿದರೆ ಹೋಲ್‌ಸೇಲಾಗಿ ಆ ಸಮುದಾಯದ ಮತ ತನಗೆ ದಕ್ಕೀತೆಂಬ ಜೆಡಿಎಸ್ ನಿರೀಕ್ಷೆಯೂ ಮಣ್ಣುಗೂಡಿತು. ಸಿಂದಗಿಯಲ್ಲಿ ಮೂರನೇ ಸ್ಥಾನಕ್ಕೆ ಹಾನಗಲ್‌ನಲ್ಲಿ ನಾಲ್ಕನೇ ಸ್ಥಾನಕ್ಕೆ ಹೋಗಿರುವ ಪಕ್ಷ ಎರಡೂ ಕ್ಷೇತ್ರಗಳಲ್ಲಿ ಠೇವಣಿ ಕಳೆದುಕೊಂಡಿದೆ. ಎರಡೂ ಕಡೆ ಜೆಡಿಎಸ್ ಗೆಲ್ಲಲಿಕ್ಕಿಲ್ಲ ಎಂಬ ಭಾವನೆ ರಾಜಕೀಯ ವಲಯದಲ್ಲಿ ವ್ಯಾಪಕವಾಗಿತ್ತಾದರೂ ಠೇವಣಿ ಕಳೆದುಕೊಳ್ಳುವಷ್ಟು ಘನಘೋರ ಸೋಲಿಗೆ ಈಡಾಗುತ್ತದೆಂದು ಯಾರೂ ಭಾವಿಸಿರಲಿಲ್ಲ.


ಚುನಾವಣೆ ದಿನಾಂಕವನ್ನು ಚುನಾವಣಾ ಆಯೋಗ ಪ್ರಕಟಿಸಿದ ಕೆಲವೇ ದಿನಗಳಲ್ಲಿ ನಡೆದ ಜೆಡಿಎಸ್ ಸಭೆಯಲ್ಲಿ 2013ರ ವಿಧಾನ ಸಭಾ ಚುನಾವಣೆಯಲ್ಲಿ 123 ಸೀಟನ್ನು ಗೆಲ್ಲುವ ಠರಾವನ್ನು ಅಂಗೀಕರಿಸಲಾಯಿತು. ಪರಸ್ಪರ ಮುನಿಸಿಕೊಂಡಿದ್ದ ಪಕ್ಷದ ಯುವ ನಾಯಕ ಮುಖಗಳಾದ ನಿಖಿಲ್ ಕುಮಾರಸ್ವಾಮಿ ಮತ್ತು ಪ್ರಜ್ವಲ್ ರೇವಣ್ಣನವರನ್ನು ಉತ್ತರ ಕರ್ನಾಟಕದ ದಿಗ್ವಿಜಯಕ್ಕೆ ಅಶ್ವಮೇಧದ ಕುದುರೆ ರೀತಿ ಕಳಿಸುವ ನಿರ್ಧಾರವನ್ನೂ ಪ್ರಕಟಿಸಲಾಯಿತು. ಅವರಿಬ್ಬರ ನಡುವಿನ ವೈಮನಸ್ಸು ತಿಳಿಯಾಗಿದ್ದು ಅವರ ಯಾತ್ರೆ ಕಾರಣವಾಗಿ ಪಕ್ಷದ ಪುನಃಶ್ಚೇತನ ಸುಲಭದಲ್ಲಿ ಆಗಲಿದೆ ಎಂದು ಕಾರ್ಯಕರ್ತರನ್ನು ನಂಬಿಸುವ ಯತ್ನ ಮಾಡಲಾಯಿತು. ಸಿಂದಗಿಯಲ್ಲಿ ಸ್ವತಃ ಎಚ್.ಡಿ. ದೇವೇಗೌಡರೇ ಮೊಕ್ಕಾಂ ಹೂಡಿ ಚುನಾವಣಾ ಕಾರ್ಯತಂತ್ರವನ್ನು ತಮ್ಮ ಸುಧೀರ್ಘ ರಾಜಕೀಯ ಅನುಭವದ ಹಿನ್ನೆಲೆಯಲ್ಲಿ ಹೆಣೆದರು. ಎಚ್.ಡಿ. ಕುಮಾರಸ್ವಾಮಿ, ಎಚ್.ಡಿ. ರೇವಣ್ಣ ಸೇರಿದಂತೆ ಪಕ್ಷದ ನೇತಾರರೆಲ್ಲರೂ ತಂಡೋಪತಂಡವಾಗಿ ಸಿಂದಗಿ, ಹಾನಗಲ್ ಮತ ಕ್ಷೇತ್ರಗಳ ಉದ್ದಗಲಕ್ಕೆ ಪ್ರಚಾರ ಪ್ರವಾಸ ಮಾಡಿದರು. ತಮ್ಮ ಶಿಷ್ಯನ ಮಗನನ್ನು ಹೈಜಾಕ್ ಮಾಡಿದ ಕಾಂಗ್ರೆಸ್‌ಗೆ ಪಾಠ ಕಲಿಸುವ ಶಪಥದಂಥ ಮಾತನ್ನು ಸ್ವತಃ ಮಾಜಿ ಪ್ರಧಾನಿ ಆಡಿದರು.

ಗೆಲುವಿಗೆ ಇಷ್ಟೇ ಸಾಕಾಗದೆಂದು ತಿಳಿದ ಕುಮಾರಸ್ವಾಮಿಯವರು ಆರ್‌ಎಸ್‌ಎಸ್‌ನಿಂದ ದೇಶಕ್ಕೆ ಬಹಳ ದೊಡ್ಡ ಗಂಡಾಂತರವಿದೆಯೆಂದು ಸತ್ಯವನ್ನು ಹೊಸದಾಗಿ ಕಂಡವರಂತೆ ಘೋಷಿಸಿ ಅದರ ವಿರುದ್ಧ ಸಂಘಟಿತ ಹೋರಾಟಕ್ಕೆ ಮನವಿಯನ್ನು ಮಾಡಿದರು. ಚುನಾವಣಾ ಪ್ರಚಾರ ಸಭೆಗಳಲ್ಲಿ, ಹೋದಲ್ಲಿ ಬಂದಲ್ಲಿ ನಡೆಸಿದ ಮಾಧ್ಯಮ ಗೋಷ್ಠಿಗಳಲ್ಲಿ ಅವರ ಪ್ರಹಾರ ಸತತ ಎಂಬಂತೆ ಆರ್‌ಎಸ್‌ಎಸ್ ವಿರುದ್ಧ ನಡೆಯಿತು. ಇತ್ತ ಬಿಜೆಪಿ ನಾಯಕರು ಸುಮ್ಮನೆ ಕೂರಲಿಲ್ಲ. ಆರ್‌ಎಸ್‌ಎಸ್‌ನ ಸಮರ್ಥನೆಗೆ ಅವರೆಲ್ಲರೂ ಟೊಂಕಕಟ್ಟಿ ನಿಂತರು. ಇದೇ ಆರ್‌ಎಸ್‌ಎಸ್‌ನ ರಾಜಕೀಯ ಟಿಸಿಲಾಗಿರುವ ಬಿಜೆಪಿ ಸಖ್ಯದಲ್ಲಿ ತಾವು ಮೊದಲಬಾರಿಗೆ ಸಿಎಂ ಆಗಿದ್ದನ್ನು ಅವರು ಜಾಣ ಮರೆವಿನ ಖಜಾನೆಗೆ ತಳ್ಳಿದರು. ಆರ್‌ಎಸ್‌ಎಸ್ ಅನ್ನು ಬೈದರೆ ಮುಸ್ಲಿಂ ಮತಗಳು ಬರಬಹುದೆಂಬ ಅವರ ಲೆಕ್ಕಾಚಾರ ಫಲಿತಾಂಶ ಪ್ರಕಟಗೊಳ್ಳುವುದರೊಂದಿಗೆ ಹುಸಿಯಾಗಿ ಹೋಗಿದೆ.

ಈ ಸೋಲನ್ನು ಕುಮಾರಸ್ವಾಮಿ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸುವ ಯತ್ನ ನಡೆಸಿದ್ದಾರೆ. ತಮ ಗುರಿ ಏನಿದ್ದರೂ 2023ರಲ್ಲಿ ನಡೆಯಬೇಕಿರುವ ವಿಧಾನ ಸಭಾ ಚುನಾವಣೆಯೇ ಹೊರತೂ ಈ ಎರಡು ಕ್ಷೇತ್ರಗಳ ಉಪ ಚುನಾವಣೆ ಆಗಿರಲಿಲ್ಲ ಎಂದಿದ್ದಾರೆ. ಮುಖಡಿಯಾಗಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನುವುದು ಸುಳ್ಳು ಗಾದೆ ಅಲ್ಲ.

ನವೆಂಬರ್ 04 ರಿಂದ ನವೆಂಬರ್ 10, 2021 ಕೆಂಡಧೂಳಿ 9

ಕನ್ನಡ ಚಿತ್ರರಂಗದ ಗುಣವಂತ, ಹೃದಯವಂತ ಮಾನವೀಯ ಅಂತಃಕರಣ ಹೊಂದಿದ್ದ ನಟ ಪುನೀತ್ ರಾಜಕುಮಾರ್ ಸಾವು ಇಡೀ ಕನ್ನಡ ಜನತೆಯ ಮನಸ್ಸನ್ನು ಕಲಕಿ ಹಾಕಿದೆ. ಮಕ್ಕಳಿಂದ ಮುದುಕರ ವರೆಗೂ ಎಲ್ಲಾ ವಯೋಮಾನದವರೂ ಜಾತಿ ಬೇಧ, ಮತಬೇಧವಿಲ್ಲದೆ ರಾಜಕೀಯ ಪಕ್ಷ ಸಿದ್ದಾಂತದ ಹಂಗು ತೊರೆದು ಪುನೀತ್ ರಾಜಕುಮಾರ್ ಕುಟುಂಬದ ದುಃಖದ ಜೊತೆಗೆ ನಿಂತಿದ್ದಾರೆ. ಇಡೀ ವಿಶ್ವದ ಎಲ್ಲಾ ಮಾಧ್ಯಮಗಳೂ ತಮ್ಮ ಕ್ಯಾಮರಾ ಕಣ್ಣುಗಳನ್ನು ಕರ್ನಾಟಕದ ಕಡೆಗೆ ನೆಟ್ಟು, ಮೂಕಸ್ಮಿತರಾಗಿ, ಗದ್ಗದಿತರಾಗಿ ನಿಂತಿದ್ದರು! ಬರಹಗಾರರು ಅಂತರ್ಜಾಲದಲ್ಲಿ ಪುನೀತ್ ರಾಜಕುಮಾರ್ ರನ್ನು ಹಾಡಿ ಹೊಗಳಲು ಅಕ್ಷರಗಳಿಗಾಗಿ ಹುಡುಕಾಡಿ ತಬ್ಬಿಬ್ಬಾದರೂ, ಈ ದೇಶದ ಇತಿಹಾಸದಲ್ಲೇ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಪಾರ್ಥಿವ ಶರೀರವನ್ನು ಬಿಟ್ಟರೇ 25 ಲಕ್ಷಜನರು ವೀಕ್ಷಣೆ ಮಾಡಿದ ವ್ಯಕ್ತಿ ಈ ನಮ್ಮ ಕನ್ನಡಿಗ ಅಪ್ಪು ಎಂದರೇ ಯಾರಿಗೆ ನೋವಾಗದಿರುತ್ತದೀ ಸಾವು? ಕನ್ನಡ ಚಿತ್ರರಂಗಕ್ಕೆ ದಾರಿದೀಪವಾಗಲು ಹೊರಟಿದ್ದ, ಹಲವಾರು ಬಡ ವಿದ್ಯಾರ್ಥಿಗಳ ಬಾಳಿಗೆ ಬೆಳಕಾಗಿದ್ದ, ವೃದ್ಧರೂ, ಅನಾಥರಿಗೆ, ಅಬಲೆ ಮಹಿಳೆಯರಿಗೆ ಆಸರೆಯಾಗಿದ್ದ ಪುನೀತ್ ರಾಜಕುಮಾರ್ ರ ಸಾವನ್ನು ನೆನೆದು ಇಡೀ ದಕ್ಷಿಣ ಭಾರತದ ಚಲನಚಿತ್ರ ರಂಗವೇ ಕಂಬನಿ ಮಿಡಿದಿದ್ದಾರೆ.



# ರಾಜ್ ಜೊತೆಯಾದ ರಾಜಕುಮಾರ

# ದೇಹ ದಂಡಿಸುವವರಿಗೆ ಎಚ್ಚರಿಕೆ!



● ಪರಶಿವ ಧನಗೂರು

ಈಗ ಎಲ್ಲಾ ಕಡೆ ಹೃದಯಾಘಾತ! ಹಾರ್ಟ್ ಅಟ್ಯಾಕ್, ಹಾರ್ಟ್ ಫೇಲ್ಯೂರ್ , ಕಾರ್ಡಿಯಾಕ್ ಅರೆಸ್ಟ್ ನದೇ ಸುದ್ಧಿ–ಚರ್ಚೆ. ಚಿತ್ರನಟರು, ಗ್ಲಾಮರ್ ಜಗತ್ತಿನ ಫ್ಯಾಷನ್ ಪ್ರಿಯರು, ಕ್ರೀಡಾಪಟುಗಳು, ದಿನನಿತ್ಯ ಜಿಮ್, ವರ್ಕ್ ಔಟ್ ಮಾಡುತ್ತಿದ್ದವರು ವಿಪರೀತ ಗೊಂದಲದಲ್ಲಿದ್ದಾರೆ. ಗಾಬರಿಯಾಗಿದ್ದಾರೆ. ಪುನೀತ್ ರಾಜಕುಮಾರ್ ಹಠಾತ್ ಹ್ರದಯ ಸ್ಥಂಭನದಿಂದ ಸಾವನ್ನಪ್ಪಿದ್ದರಿಂದ ಈ ಮೀಡಿಯಾಗಹು, ಸೋಷಿಯಲ್ ಮೀಡಿಯಾ ಗಳು ಬಿತ್ತರಿಸುತ್ತಿರುವ ಆರೋಗ್ಯ ಸಂಬಂಧಿ ವರದಿಗಳಿಂದ ಬೆದರಿ ಸಾರ್ವಜನಿಕರು ಆಸ್ಪತ್ರೆಗಳ ಮುಂದೆ ತಮ್ಮ ದೇಹ ತಪಾಸಣೆ ಮಾಡಿಸಿಕೊಳ್ಳಲು, ಅದರಲ್ಲೂ ಹೃದಯವನ್ನು ಪರೀಕ್ಷೆ ಮಾಡಿಸಿ ಆರೋಗ್ಯ ಖಾತ್ರಿ ಪಡಿಸಿಕೊಳ್ಳಲು ಕ್ಯೂನಲ್ಲಿ ನಿಂತಿದ್ದಾರಂತೆ! ಜಯದೇವ ಹ್ರದ್ರೋಗ ಆಸ್ಪತ್ರೆಯಲ್ಲಿ ಪ್ರತಿನಿತ್ಯ ಈಗ ಸಾವಿರಾರು ಜನರು ಹ್ರದಯ ತಪಾಸಣೆಗಾಗಿ ದಾಖಲಾಗುತ್ತಿದ್ದಾರಂತೆ. ಫುಲ್ ಟೈಮ್ ಫಿಟ್ ಅಂಡ್ ಫೈನ್ ಹೆಲ್ತೀ ಸ್ಥಿತಿಯಲ್ಲೇ ಇದ್ದ ಯೂತ್ ಐಕಾನ್ ಅಪ್ಪುರವರು ಜಿಮ್ ವರ್ಕ್ ಔಟ್ ಮಾಡಿದ ಕೆಲವೇ ಗಂಟೆಗಳಲ್ಲಿ ಹೃದಯಾಘಾತ ದಿಂದ ನಿಧನರಾಗಿರುವುದರಿಂದ ಈಗ ರಾಜ್ಯದ ನಾನಾ ಜಿಮ್ ಗಳಿಗೆ ಹೋಗುವುದನ್ನೇ ಕಡಿಮೆ ಮಾಡಿದ್ದಾರಂತೆ!

## ಸಾವು ತಂದ ಬದಲಾವಣೆ!

ಮುಂಜಾನೆ ಯೇ ಎದ್ದು ತಮ್ಮ ಶುಗರ್, ಬಿಪಿ, ಕಂಟ್ರೋಲ್ ಮಾಡಿಕೊಳ್ಳಲು ಥ್ರೆಡ್ ವೀಲ್ ಮೇಲೆ ಓಡುತ್ತಿದ್ದವರು, ಬೊಜ್ಜು ಕರಗಿಸಲೆಂದು ನಾನಾ ಬಗೆಯಲ್ಲಿ ಜಿಮ್ ವರ್ಕ್ ಔಟ್ ಗಳನ್ನು ಪ್ರಾಕ್ಟೀಸ್ ಮಾಡುತ್ತಿದ್ದ ಬಾಡೀ ಬಿಲ್ಡರ್ ಗಳೂ ಕೂಡ, ಜಿಮ್ ಕಡೆ ತಲೆ ಹಾಕದೆ ನಾರ್ಮಲ್ ವಾಕಿಂಗ್, ಜಾಗಿಂಗ್ ಮಾಡಿಕೊಂಡು ಯೋಗಕೇಂದ್ರಗಳ ಅಡ್ರೆಸ್ ಹುಡುಕುತ್ತಿದ್ದಾರಂತೆ! ಇದೇನಿದೂ ಒಂದು ಸಾವು ದಿಡೀರ್ ಎಂದು ಇಷ್ಟೊಂದು ಬದಲಾವಣೆ ತಂದುಬಿಟ್ಟಿತೇ ಎನ್ನುತ್ತೀರಾ? ಹೌದು ನಿಜಾ. ಇತ್ತೀಚೆಗೆ ಯುವಕರೇ ಭಾರತದಲ್ಲಿ ಹ್ರದಯಾಘಾತಕ್ಕೇ ತುತ್ತಾಗುತ್ತಿರುವುದು ಅದರಲ್ಲೂ ಈ ಆಧುನಿಕ ಜಿಮ್ ವರ್ಕ್ ಔಟ್









ಹೆಸರಿನಲ್ಲಿ ಮಧ್ಯವಯಸ್ಕ ಸೆಲೆಬ್ರಿಟಿಗಳು, ಕ್ರೀಡಾ ಪಟುಗಳು, ಬಾಡೀ ಬಿಲ್ಡರ್ ಗಳು ಅತಿ ಹೆಚ್ಚು ದೇಹದಂಡನೆ ನಡೆಸಿ ಹ್ರದಯಸ್ಥಂಭನ ಗಳಿಂದ ಪ್ರಾಣ ಕಳೆದುಕೊಳ್ಳುತ್ತಿರುವುದು ಎಲ್ಲಾ ಕಡೆ ಕಂಡುಬರುತ್ತಿದೆ. ಸಾವು ಪ್ರಕ್ರತಿ ಸಹಜವಾದದ್ದು ಎಲ್ಲರೂ ಒಂದು ದಿನ ಈ ಭೂಮಿ ತೊರೆದು ಭೌತಿಕವಾಗಿ ಇಲ್ಲವಾಗುತ್ತೇವೆನ್ನುವ ಸತ್ಯದ ಅರಿವಿದ್ದರೂ ಕೆಲವು ಸಾವುಗಳು ಮಾನವರನ್ನು ಕಾಡುತ್ತ ಕಲಕಿಬಿಡುವುದರಿಂದ ಜನರು ಈ ಸಾವಿನ ಭಯದಿಂದ ತಮ್ಮ ಬದುಕಿನ ಶೈಲಿಯನ್ನು ಬದಲಿಸಿಕೊಳ್ಳಲೂಬಹುದು. ಈಗ ಅಪ್ಪುವಿನ ಸಾವಿನಿಂದ ಅಂತಹದ್ದೊಂದು ಮಹತ್ತರ ಬದಲಾವಣೆ ಪ್ರಾರಂಭವಾಗುವ ಎಲ್ಲಾ ಲಕ್ಷಣಗಳೂ ಗೋಚರಿಸುತ್ತಿವೆ. ನೂರಕ್ಕೆ ನೂರರಷ್ಟು ಪುನೀತ್ ರಾಜಕುಮಾರ್ ಸಾವು ಈ ಜಿಮ್ ವರ್ಕ್ ಔಟ್ ಪ್ರಮಾದದಿಂದಲೇ ಸಂಬಂವಿಸಿದೆ ಎಂಬುದು ಎಲ್ಲಾ ವೈದ್ಯರಿಗೂ ಮನವರಿಕೆ ಯಾಗಿದ್ದರೂ, ಧೈರ್ಯ ವಾಗಿ ಸತ್ಯ ಸಂಗತಿ ಹೇಳಲು ಮುಂದಾಗುತ್ತಿಲ್ಲ. ವಯಸ್ಸು 46ಆದರೂ ಇದುವರೆಗೂ ಯಾವತರದ ಮಧ್ಯಪಾನ, ದೂಮಪಾನಗಳಂತಹ ದುಶ್ಚಟಗಳಿಗೆ ದಾಸರಾಗದೇ ಆರೋಗ್ಯವನ್ನು ಫಿಟ್ ಅಂಡ್ ಫೈನ್ ಸ್ಥಿತಿಯಲ್ಲಿ ಕಾಪಾಡಿಕೊಂಡು ಬಂದಿದ್ದ, ಸಾಯುವ ಹತ್ತು ನಿಮಿಷಗಳ ಹಿಂದೆಯೂ ಬಿಪಿ ಶುಗರ್ ನಾರ್ಮಲ್ ಹೊಂದಿದ್ದ ಅಪ್ಪು ಎಂಬ ಮಿಸ್ಟರ್ ಪರ್ಫೆಕ್ಟ್ ಪವರ್ ಸ್ಟಾರ್ ಗೆ ಪ್ರತಿದಿನ ಮಾರ್ನಿಂಗ್ ಮಾಡುತಿದ್ದ ಎರಡು ಗಂಟೆಗೂ ಹೆಚ್ಚುಕಾಲಗಳ ಅವಧಿಯ ಜಿಮ್ ವರ್ಕ್ ಔಟ್ ತ್ರೆಡ್ ವೀಲ್ ಸ್ಪೀಡ್ ವಾಕ್ (ಕಾರ್ಡಿಯೋ) ವೇಯ್ಟ್ ಲಿಫ್ಟಿಂಗ್, ಹೆವೀ ಕಿಕ್ ಬಾಕ್ಸಿಂಗ್ ಪ್ರಾಕ್ಟೀಸ್, ಬ್ಯಾಕ್ ಡ್ರೈವ್ ಗಳ ಕಸರತ್ತು, ಈ ಸಿನಿಮಾ ನಿರ್ಮಾಪಕರ ಹೊಟ್ಟೆ ತುಂಬಿಷಲು ದೇಹ ಉರಿಗೊಳಿಸುವ ಹೀರೋ ಮಾಡೆಲಿಂಗ್ ಔಟ್ ಪುಟ್ ಅನಿವಾರ್ಯತೆ ಅಪ್ಪುರನ್ನು ಸಾವಿನ ದವಡೆಗೆ ನೂಕಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ. ಯಾರು ಏನೇ ಹೇಳಿದರೂ ಕೆಲವು ನಿಗೂಢಗಳು ಅಪ್ಪು ಸಾವಿನಲ್ಲಿ ತಳುಕುಹಾಕಿಕೊಂಡಿದ್ದರೂ, ಅವರ ಫ್ಯಾಮಿಲಿ ಡಾಕ್ಟರ್ ರಮಣ ರಾವ್ ಅವರೇ ಹೇಳುವಂತೆ ಈ ಹಿಂದೆ ಎಂದೂ ಅಪ್ಪುಗೆ ಎದೆ ನೋವು ಬಂದಿಲ್ಲ. ಸಾಯುವ ದಿನವೂ ಎದೆ ನೋವು ಕಾಣಿಸಿಕೊಂಡಿಲ್ಲ. ಮೊದಲೇ ಹ್ರದಯಾಘಾತದ ಮೂನ್ಸೂಚನೆಯೂ ಆಗಿಲ್ಲ. ಆದರೆ ಅಂದು ಮಾತ್ರ ಡಾಕ್ಟರ್ ರಮಣ ರಾವ್ ಅವರ ಎದುರು ಪುನೀತ್ ರಾಜಕುಮಾರ್ ಹೇಳಿರುವಂತೆ ಅಪ್ಪು ಬೆಳಿಗ್ಗೆ ಸದಾಶಿವ ನಗರದ ಪಾರ್ಕಿನಲ್ಲಿ ವಾಕಿಂಗ್








ಮಾಡಿದ ನಂತರ ಎರಡು ಗಂಟೆ ಹೋಂ ಜಿಮ್ ನಲ್ಲೇ ಎಲ್ಲಾ ರೀತಿಯ ವರ್ಕ್ ಔಟ್ ಮಾಡಿದ್ದಾರೆ. ಅವರ ಹೇರ್ ಸ್ಟೈಲ್ ನೋಡಿಕೊಳ್ಳುವ ಕಾರ್ತಿಕ್ ಗೆ ಪುನೀತ್ ರಾಜಕುಮಾರ್ ತಮ್ಮ ಮನೆ ಒಳಗಿರುವ ಮೇಲ್ಮಹಡಿಯ ಪರ್ಸನಲ್ ಜಿಮ್ ನಲ್ಲಿದ್ದಾಗ ತಾನೂ ವರ್ಕ್ ಔಟ್ ಮುಗಿಸಿ ಸ್ಟೀಮ್ ಬಾತ್ (ದೇಹಕ್ಕೆ ಬಿಸಿಹಭೆ) ತೆಗೆದುಕೊಳ್ಳುವುದಾಗಿ ಹೇಳಿಹೋಗಿದ್ದಾರೆ. ಅಂದರೆ ಆ ದಿನ ಪುನೀತ್ ರಾತ್ರಿಯ ಗುರುಕಿರಣ್ ಬರ್ತ್ ಡೇ ಲೇಟ್ ನೈಟ್ ಪಾರ್ಟಿಮುಗಿಸಿ ಪತ್ನಿಯೊಂದಿಗೆ ಮಧ್ಯರಾತ್ರಿಗೆ ಮನೆಗೆ ಬಂದು ಮಲಗಿದ್ದರೂ, ಬೆಳಿಗ್ಗೆ ಬೇಗನೆ ಎದ್ದು ಅನಗತ್ಯವಾಗಿ ಗಂಟೆಗಟ್ಟಲೇ ಹೋಂ ಜಿಮ್ ನಲ್ಲೇ ವರ್ಕ್ ಔಟ್ ಮಾಡೀ ದೇಹಕ್ಕೆ ಅನಾವಶ್ಯಕ ಒತ್ತಡ ನೀಡಿ ತಮಗೇ ಗೊತ್ತಿಲ್ಲದಂತೆ ಪಾಪ ತಮ್ಮ ಸಾವನ್ನು ತಾವೆ ತಂದುಕೊಂಡಿದ್ದಾರೆ. ಇದಕ್ಕೆಲ್ಲ ಕಾರಣ ಈ ಆಧುನಿಕ ಜಿಮ್ ವರ್ಕ್ ಔಟ್ ಎಂಬ ಸೆಲೆಬ್ರಿಟಿ ಟ್ರೇನರ್ ಮಾರ್ಕೆಟಿಂಗ್ ಮಾಫಿಯಾ! ಯಾವುದೇ ವೈಜ್ಞಾನಿಕ , ವೈದ್ಯಕೀಯ ಪರಿಜ್ಞಾನ ಕೂಡ ಇಲ್ಲದ, ಸರ್ಟಿಫೈಡ್ ಜಿಮ್ ಟ್ರೈನರ್ ಗಳಲ್ಲದ ಕೆಲವು ಜಿಮ್ ಟ್ರೈನರ್ ಗಳು ಈಗ ಎಲ್ಲಾ ಕಡೆ ಹಾದಿ ಬೀದಿಗೊಬ್ಬರು ಅಂಗಡಿ ತೆರೆದು ಅಡ್ವಾನ್ಸ್ಡ! ಸೈಂಟಿಫಿಕ್! ಜಿಮ್ ವರ್ಕ್ ಔಟ್ ಸೆಂಟರ್ ಹೆಸರಿನಲ್ಲಿ ಯುವಜನತೆಯನ್ನು ದಾರಿತಪ್ಪಿಸಿ, ಕನ್ಫ್ಯೂಸ್ ಮಾಡುತ್ತಾ ಕಾಸಿನ ಕಮಾಯಿ ಮಾಡುತ್ತಿದ್ದಾರೆ.

## ಜಿಮ್ ಮಾಡುವವರಿಗೊಂದು ಎಚ್ಚರ!

ಯಾವುದೇ ರೀತಿಯ ಮೆಡಿಕಲ್ ಡಯಟೇಷನ್ ಅರಿಯದ ಈ ಔಟ್ ಲುಕ್ ಬಾಡಿ ಬಿಲ್ಡಿಂಗ್ ಟ್ರೇನರ್ ಗಳು ವರ್ಕ್ ಔಟ್ ಜಿಮ್ ಮಾಡುವ ವ್ಯಕ್ತಿ ಗಳ ಲೈಫ್ ಹೆಲ್ತ್ ಹಿಸ್ಟರಿ ತೆಗೆದು ಕೊಳ್ಳದೇ, ಅವರ ಬ್ಲಡ್ ರಿಪೋರ್ಟ್ ಮಾಹಿತಿಯನ್ನು ಸರಿಯಾಗಿ ತಿಳಿದು ಕೊಳ್ಳದೇ ಕೇವಲ ಹಣದಾಸೆಗೆ ಸಿಕ್ಕ ಸಿಕ್ಕ ಹಾರ್ಡ್ ವರ್ಕ್ ಔಟ್ ಗಳನ್ನು ಮಾಡಿಸಿ ದೇಹದ ಸ್ನಾಯುಗಳು ಅನಾವಶ್ಯಕವಾಗಿ ಒತ್ತಡಕ್ಕೆ ಒಳಗಾಗುವಂತೆ ಮಾಡಿ ಹ್ರದಯವು ತನ್ನ ವೇಗಕ್ಕಿಂತ ಅತಿ ಹೆಚ್ಚು ವೇಗವಾಗಿ ಬಡಿದು ಕೊಳ್ಳುವಂತೆ ಮಾಡಿ ಹಠಾತ್ ಹ್ರದಯ ಸ್ಥಂಭನವಾಗುವಂತೆ (ಕಾರ್ಡಿಯಾಕ್ ಅರೆಸ್ಟ್) ವಿಚಿತ್ರ ವಾದ ಆಧುನಿಕ ಜಿಮ್ ವರ್ಕ್ ಔಟ್ ತಂತ್ರಗಳನ್ನು ಕೇವಲ ದೇಹದಾರ್ಢ್ಯಕ್ಕಾಗಿ ಮಾಡಿಸಿ ಇಂದಿನ ಯುವಜನಾಂಗವನ್ನು ಕೊಲ್ಲುತ್ತಿರುವುದೆಷ್ಟು ಸರಿ ಎಂಬುದನ್ನು ನಾವು ಯೋಚಿಸಬೇಕಾಗಿದೆ. ಏಕೆಂದರೆ ಪುನೀತ್ ರಾಜಕುಮಾರ್ ತಮ್ಮ ಚಲನ ಚಿತ್ರಗಳಲ್ಲಿ ಯುವಕರಂತೆ ಕಾಣಿಸಿಕೊಳ್ಳಲು ಸಿಕ್ಸ್ ಪ್ಯಾಕ್! ಅದೂ ಇದೂ ಮಾಡಿಕೊಂಡು, ಜನರನ್ನು ರಂಜಿಸಲು ಜಿಮ್ ನಲ್ಲಿ ಅದಿನ್ಯಾವ ಕಸರತ್ತು ವರ್ಕ್ ಔಟ್ ಗಳನ್ನು ಮಾಡಿ ದಣಿಯುತಿದ್ದರೋ ಗೊತ್ತಿಲ್ಲ. ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಯಾವುದೇ ದುಶ್ಚಟಗಳಿಲ್ಲದ ಅಪ್ಪುಗೇ ಕೇವಲ ಉತ್ತಮ ಆಹಾರ ಪದ್ಧತಿ, ಯೋಗ, ವಾಕಿಂಗ್, ಜಾಗಿಂಗ್ ಅಷ್ಟೇ ಸಾಕಿದ್ದವೇನೋ. ಆದರೆ ಅತಿಯಾದ ಫ್ಲೇಕ್ಸಬಲ್ ಬಾಡೀ ಪಿಟ್ ನೆಸ್ ಕಾಳಜಿಯಿಂದ, 98ದಿನಗಳಲ್ಲಿ ಸಿಕ್ಸ್ ಪ್ಯಾಕ್ ಮಾಡಿಕೊಡುತ್ತೇವೆಂದು ಬೋರ್ಡ್ ಹಾಕಿ ಜಾಹಿರಾತು ನೀಡುತ್ತಿರುವ ಕೆಲವು ಅಜ್ಞಾನಿ ಜಿಮ್ ಟ್ರೈನರ್ ಗಳಿಂದ ಈ ಸಿನಿಮಾ ಮಂದಿ ತಮ್ಮ ಬದುಕನ್ನು ಕೊನೆಗೊಳಿಸಿ ಕೊಳ್ಳುತ್ತಿರುವುದು ದುರಂತವೇ ಸರಿ.

ಈ ಹಿಂದೆಯೂ ಸಿನಿಮಾ ರಂಗದಲ್ಲಿ ಮಹಿಳೆಯರು ಪುರುಷರೆನ್ನದೇ ಹಲವಾರು ಜನರ ಸಾವುಗಳು ಈ ಬಾಡೀ ಫಿಟ್ನೆಸ್ ಕಾಯ್ದುಕೊಳ್ಳುವ ಕಾರಣಕ್ಕೆ ಆಗಿವೆ. ಕೆಲವು ಹೀರೋಯಿನ್ ಗಳ, ಕೆಲವು ಹೀರೋಗಳು, ಸಿನಿಮಾದ ವಿಲನ್ ಪಾತ್ರಧಾರಿಗಳು ತಮ್ಮ ಪಾತ್ರಗಳಿಗಾಗಿ ದೇಹ ಸಣ್ಣ ಮಾಡಿ ಕೊಳ್ಳಲು, ದೇಹ ದಪ್ಪ ಮಾಡಿಕೊಳ್ಳಲು, ಸಿನಿಮಾ ಫೀಲ್ಡ್ ನಲ್ಲಿ ಮಾರ್ಕೆಟ್ ಉಳಿಸಿಕೊಳ್ಳಲು ಅಜ್ಞಾನಿ–ಕಳಪೆ ಜಿಮ್ ಟ್ರೈನರ್ ಗಳ ಸಹವಾಸ ದೋಷದಿಂದ, ಅವರು ಕೊಡುವ ಎಂತದ್ದೋ ಅವೈಜ್ಞಾನಿಕ ಔಷಧಿ, ಪ್ರೋಟೀನ್ ಪೌಡರ್ ಗಳು, ಚಿತ್ರ ವಿಚಿತ್ರವಾದ ವಿಟಮಿನ್ ಮಾತ್ರೆಗಳ ಪರಿಣಾಮದಿಂದ, ವಿಪರೀತ ಸಣ್ಣವರಾಗಿ ಕೆಲವರು ಸತ್ತೇ ಹೋಗಿದ್ದಾರೆ. ಕೇವಲ ಹಾಸ್ಯ ನಟ ಬುಲೆಟ್ ಪ್ರಕಾಶ್ ಅಲ್ಲದೆ ಬೇರೆ ಬೇರೆ ಭಾಷೆಯ ಸಿನಿಮಾ ರಂಗದ ಇನ್ನೂ ಹಲವರು ಇದೇ ಬೊಜ್ಜು ಕರಗಿಸುವ ಆಧುನಿಕ ಜಿಮ್ ವರ್ಕ್ ಔಟ್ ನೆಪದಲ್ಲಿ ಹ್ರದಯಾಘಾತ ವಾಗಿ ದಿಢೀರನೆ ಪ್ರಾಣ ಕಳೆದುಕೊಂಡಿದ್ದಾರೆ. ಹಿಂದಿ ಸಿನಿಮಾದ ಮಧ್ಯವಯಸ್ಕ ನಟ ಸಿದ್ದಾರ್ಥ್ ಶುಕ್ಲಾ, ಕನ್ನಡದ ಚಿರಂಜೀವಿ ಸರ್ಜಾ, ಇವರಿಗೆಲ್ಲಾ ಎಷ್ಟು ವಯಸ್ಸು ಹೇಳೀ? ಟೈಗರ್ ಪ್ರಭಾಕರ್ ಮಗ ವಿನೋದ್ ಪ್ರಭಾಕರ್ ಹೊಟ್ಟೆ ಕರಗಿಸಿ ಏಯ್ಟ್ ಪ್ಯಾಕ್ ಮಾಡಲು ಹೋಗಿ ಆಸ್ಪತ್ರೆಗೆ ಸೇರಿ ಸಾವಿನ ದವಡೆಯಿಂದ ಪಾರಾಗಿ ಬಂದದ್ದೇ ನೋವಾಗುವಂತೆ! ಸೆಲೆಬ್ರಿಟಿ ಗಳೂ, ಕ್ರೀಡಾ ಪಟುಗಳು ಎಲ್ಲಾ ಕಡೆಯೂ ಹೀಗೆಯೇ. ನೋಡು ಮಧ್ಯ ವಯಸ್ಸಿನ ಈ ಹೆವೀ ವರ್ಕ್ ಔಟ್ ಜಿಮ್ ನ ಕಾರಣದಿಂದ ಪ್ರಾಣ ಕಳೆದು ಕೊಳ್ಳುತ್ತಲೇ ಇದ್ದಾರೆ. ದೇಶಾದ್ಯಂತ ಇತ್ತೀಚಿನ ಸರ್ವೇ ರಿಪೋರ್ಟ್ ಗಳು ಅದನ್ನೇ ಹೇಳುತ್ತಿದೆ. ಆದರೂ ಕೂಡ ನಮ್ಮ ಸರ್ಕಾರ ಬೇರೆ ರಾಜ್ಯಗಳಂತೆ ಯುವಕರ ಆರೋಗ್ಯದ ಬಗ್ಗೆ ಕಾಳಜಿ ತೋರದೆ, ಈ ಆಧುನಿಕ ಜಿಮ್ ವರ್ಕ್ ಔಟ್ ಗಳ, ಸ್ಟಿರಾಯ್ಡ್ ಇಂಜೆಕ್ಷನ್, ವಿಟಮಿನ್ ಮಾತ್ರೆಗಳು, ಪ್ರೋಟೀನ್ ಪೌಡರ್ ಗಳ ಬಗ್ಗೆ ಒಂದು ನೀತಿ ನಿಯಮ ನಿಬಂಧನೆಗಳನ್ನು ರೂಪಿಸದೇ ಬೀದಿ ಬೀದಿಗಳಲ್ಲಿ ನಕಲಿ ಜಿಮ್ ಟ್ರೈನರ್ ಗಳು ನಾಯಿ ಕೊಡೆಗಳಂತೆ ಅಂಗಡಿ ತೆರೆದಿದ್ದಾರೆ. ಯಾವುದೇ ಸರಿಯಾದ ಟ್ರೈನಿಂಗ್ ಇಲ್ಲದ ಕೆಲ ಕೋಚರ್ ಗಳು ಸ್ಟಿರಾಯ್ಡ್ ಮಾಫಿಯಾ ಜೊತೆಗೆ ಕೈ ಜೋಡಿಸಿ ಭಾರತದ ಯುವಕರ ಬದುಕನ್ನು ಬಲಿಪಶು ಮಾಡುತ್ತಿದ್ದಾರೆ.


## ಇಂಜಕ್ಷನ್‌ಗಳು ಅಪಾಯಕಾರಿ

ಸಿನಿಮಾ ಹೀರೋ ಗಳನ್ನು ನೋಡಿ ಯುವಜನರು ಅವರಂತೆ ದೇಹ ಹುರಿಗೊಳಿಸಿ ಬಾಡಿ ಬಿಲ್ಡ್ ಮಾಡಲು ಜಿಮ್ ಸೇರುತ್ತಾರೆ. ಸರಿಯಾದ ವೈಜ್ಞಾನಿಕ ಜಿಮ್ ಟ್ರೈನರ್ ಸಿಗದೇ ತೋಳುಗಳಿಗೆ, ತೊಡೆಗಳಿಗೆ ಸ್ಟಿರಾಯ್ಡ್ ಇಂಜೆಕ್ಷನ್ ಚುಚ್ಚಿಸಿಕೊಂಡು ದೇಹದ ಮಾಂಸ ಖಂಡಗಳನ್ನು ಕಡುಬಿನಂತೆ ಊದಿಸಿಕೊಂಡು ಅದನ್ನೇ ಬಾಡೀ ಬಿಲ್ಡ್ ಎಂದು ಬೀಗುತ್ತಾ ಟೈಟ್ ಟೀ ಶರ್ಟ್ ಧರಿಸಿಕೊಂಡು ಶೋ ಕೊಡುತ್ತಾ ಗ್ಯಾಂಗ್ ಕಟ್ಟಿಕೊಂಡು ಒಡಾಡುತ್ತಾರೆ. ಪಾಪ ದೇಹಕ್ಕೆ ಇಷ್ಟಿಷ್ಟೇ ಸ್ಟಿರಾಯ್ಡ್ ಇಂಜೆಕ್ಷನ್ ಚುಚ್ಚಿ ಸೇರಿಕೊಂಡು ಗಂಟೆಗಟ್ಟಲೆ ದೇಹದ ಸ್ನಾಯುಗಳನ್ನು ದಂಡಿಸುತ್ತಾ ಹ್ರದಯಕ್ಕೆ ಅತಿಯಾದ ರಕ್ತಸರಬರಾಜಿನ ರಿಸ್ಕ್ ನೀಡುವ ಜಿಮ್ ವರ್ಕ್ ಔಟ್ ಪ್ರಿಯರಿಗೆ ತಮ್ಮ ಮುಂದಿನ ಕರಾಳ ಭವಿಷ್ಯ ಕಾಣುವುದೇ ಇಲ್ಲಾ.

ಉದಾರೀಕರಣದ ಪ್ರಭಾವದಿಂದ ಎಲ್ಲಾ ವ್ಯಾಪಾರೀಕರಣದ ಮನಸ್ಥಿತಿಗೆ ಇಳಿ ಮಾಡುತ್ತಿದ್ದಂತೆ ಮಾನವನ ಹುರಿಗಟ್ಟಿದ ದೇಹವನ್ನು ವ್ಯಾಪಾರಕ್ಕೆ ಆಗಬಹುದೆಂಬ, ಅದರಿಂದಲೂ ದುಡ್ಡು ಮಾಡಬಹುದೆಂಬ ಕಮರ್ಷಿಯಲ್ ಕಾರಣದಿಂದಲೇ ಈ ಸಿಕ್ಸ್ ಪ್ಯಾಕ್, ಏಯ್ಟ್ ಪ್ಯಾಕ್ ವ್ಯಾಪಾರ, ಬಾಡಿ ಬಿಲ್ಡಿಂಗ್ ಕಾಂಪಿಟೇಶನ್ ಹೆಸರಲ್ಲಿ ವಿಟಮಿನ್ ಮಾತ್ರೆಗಳ, ಸ್ಟಿರಾಯ್ಡ್ ಇಂಜೆಕ್ಷನ್, ಪ್ರೋಟೀನ್ ಪೌಡರ್ ಗಳ ಮೆಡಿಕಲ್ ಮಾಫಿಯಾ ತಲೆ ಎತ್ತಿತು! ಬಾಡಿಗಾರ್ಡ್ ಗಳೆಂಬ ಟೈಟ್ ಸೋಲ್ಡರ್ ಟೀ ಶರ್ಟ್ನ ಅಜಾನುಬಾಹು ಕಟ್ಟುಮಸ್ತಾದ ಕಪ್ಪು ಡ್ರೆಸ್ಸಿನ ಕಾವಲುಗಾರರು ಹುಟ್ಟಿಕೊಂಡರು! ಆಧುನಿಕ ಜಿಮ್ ಎಂಬುದು ವರ್ಕ್ ಔಟ್ ಎಂಬುದು ಸ್ಟಿರಾಯ್ಡ್ ಔಷದಿ ಮಾಫಿಯಾ ಜಾಲವಾಗಿ ಭಾರತದೊಳಗೆ ನಿಗೂಢವಾಗಿ ತನ್ನ ಸಾಮ್ರಾಜ್ಯವನ್ನು ವಿಸ್ತರಣೆ ಮಾಡಿಕೊಂಡು ಬೆಳೆಯುತ್ತಿದೆಯೆಂದು ಹೇಳುವವರು ಇದ್ದಾರೆ. ಹೊಟ್ಟೆಗೆ ಅನ್ನ–ಹಿಟ್ಟಿನ ಬದಲು ಪ್ರೋಟೀನ್ ಪೌಡರ್ ಡಯಟ್ಟು! ಕಾರ್ಬೋಹೈಡ್ರೇಟ್, ಡ್ರೈ ಪ್ರೂಟ್ಸ್, ಚಿಕನ್ ಲೆಗ್ ಪೀಸುಗಳು, ಕಾಲುಸೂಪು, ಕೈಮಾ, ಮೊಟ್ಟೆಯ ಬಿಳಿ ಲೋಳೆಗೆ ಈಗ ಎಲ್ಲಿಲ್ಲದ ಬೇಡಿಕೆ! ಕೆಂಮಣ್ಣಿನ ಮಟ್ಟಿಕುಸ್ತಿಯ ಗರಡಿ ಮನೆಯಲ್ಲಿ ಬೆವರು ಬಸಿದು, ಹೊಟ್ಟೆ ತುಂಬಾ ಹಾಲು ಮೊಸರು ತುಪ್ಪದ ಊಟ ಮಾಡಿ ಕಟ್ಟುಮಸ್ತಾದ ಮೈಕೈ ತುಂಬಿಕೊಂಡು ಸಾಧನೆ ಮಾಡುತ್ತಿದ್ದ ಪರಂಪರೆಯ ನಾಟೀ ಪೈಲ್ವಾನರ ಮುಂದೆ ಈ ಜಿಮ್ ಬಾಯ್ ಗಳು ಬ್ಯಾಯ್ಲರ್– ಫಾರಂ ಕೋಳಿಗಳಂತಾದರು! ಈವತ್ತಿದ್ದೋನು ನಾಳೆಗಿಲ್ಲ! ಆಹಾರ ಪದ್ಧತಿ, ದೇಹದಂಡನೆ, ಲೈಫ್ ಸ್ಟೈಲ್ ನೋಡಿಕೊಳ್ಳುವ ಜವಾಬ್ದಾರಿ ನಮ್ದೇ ಎಲ್ಲಾ. ಈಗ ನಮ್ಮ ಅಪ್ಪು ಅವರನ್ನೇ ತೆಗೆದುಕೊಳ್ಳಿ ಅವರ ವೃತ್ತಿಯ ಅವಶ್ಯಕತೆಯ ಅನಿವಾರ್ಯ ಒತ್ತಡದಿಂದಲೋ, ಅತಿಯಾದ ಫಿಟ್ ನೆಸ್ ಕಾಳಜಿಯಿಂದ ಲೋ 40ನೇ ವಯಸ್ಸು ದಾಟಿದವರಿಗೆ ವಾರಕ್ಕೆ ಐದು ಬಾರಿ ಕೇವಲ 30ನಿಮಿಷದ ನಾರ್ಮಲ್ ವಾಕಿಂಗ್ ಸಾಕಾಗಿದ್ದರೂ, ಯೋಗವೇ ದೇಹದ ಸುಮಾರು ಎಲ್ಲಾ ಜಾಯಿಂಟ್ಸ್ ಗಳಿಗೆ ವ್ಯಾಯಾಮ ನೀಡಿ ದೇಹಾರೋಗ್ಯ ಉತ್ತಮ ವಾಗಿಡುತ್ತದೆಂಬ ಅರಿವಿದ್ದರೂ ಅನಾವಶ್ಯಕವಾಗಿ ಹೃದಯಕ್ಕೆ ಒತ್ತಡ ನೀಡುವ ಟ್ರೆಡ್ ವೀಲ್ (ಕಾರ್ಡಿಯೋ)ಎಂಬ ವೇಗವಾಗಿ ಓಡುವ, (ಚಿಕ್ಕವಯಸ್ಸಿನವರು) ಹ್ರದಯಕ್ಕಾಗೇ ಮಾಡುವ ವ್ಯಾಯಾಮವನ್ನು ಮಾಡುತ್ತಿದ್ದರಂತೆ! ನಿದ್ರೆ, ವಿಶ್ರಾಂತಿ, ಆಹಾರದ ಸರಪಳಿಯಲ್ಲಿ ಸಮತೋಲನ ವಿಲ್ಲದಿರುವಾಗ ಅತಿಯಾಗಿ ದೇಹವನ್ನು ದಂಡಿಸಿದರೇ ಹೃದಯವನ್ನು ಸುಮ್ಮನೆ ಒತ್ತಡಕ್ಕೆ ಸಿಲುಕಿಸಿದಂತಾಗುತ್ತದೆ ಎಂಬ ಅರಿವಿದ್ದರೂ ತಮ್ಮ ಫಿಟ್ ಅಂಡ್ ಫೈನ್ ಫ್ಲೆಕ್ಸಿಬಲ್ ದೇಹದ ಮೇಲಿನ ಓವರ್ ಕಾನ್ಫಿಡೆನ್ಸ್ ನಿಂದ ಎದೆಯಲ್ಲಿ ಹ್ರದಯಾಘಾತಕ್ಕೆ ಸಂಬಂಧಿಸಿದ ಕೆಲವು ಲಕ್ಷಣಗಳು ಕಾಣಿಸಿಕೊಂಡಿದ್ದರೂ, ಅಪ್ಪು ಸಾಯುವ ದಿನ ಸದಾಶಿವ ನಗರದ ಪಾರ್ಕಿನಲ್ಲಿ ಎದೆಮೇಲೆ ಕೈ ಇಟ್ಟು ಕೊಂಡು ಉಜ್ಜುತ್ತಾ, ವಾಕಿಂಗ್ ಮಾಡುತ್ತಾ, ಮಸ್ಕಲರ್ ಪೇಯ್ನ್ , ಗ್ಯಾಸ್ಟ್ರಿಕ್ ಟ್ರಬಲ್ ಸಮಸ್ಯೆ ಇರಬಹುದೆಂದು ತಮಗೆ ತಾವೇ ಊಹಿಸಿಕೊಂಡು ತಮ್ಮ ಆರೋಗ್ಯದ ತಾವೇ ಬಗ್ಗೆ ಕಾಳಜಿ ತೋರದೆ ವಾಕಿಂಗ್ ಮುಂದುವರಿಸಿದ್ದಾರೆ! ಅರ್ಧಂಬರ್ಧ ನಿದ್ರೆ ಮಾಡಿದ್ದ ದೇಹಕ್ಕೆ ಎರಡು ಗಂಟೆ ಭರ್ತಿ ವರ್ಕ್ ಔಟ್ ಮತ್ತು ಬಿಸಿ ಬಿಸಿ ಹಬೆ(ಸ್ಟೀಮ್ ಬಾತ್) ಯನ್ನು ಇಡೀ ದೇಹಕ್ಕೆ ತೆಗೆದುಕೊಂಡು ದೇಹದ ಸ್ನಾಯುಗಳ ಜೊತೆಗೆ ಹ್ರದಯವನ್ನು ಒತ್ತಡಕ್ಕೆ ದೂಡುವುದು ಯಾವ ಓವರ್ ಕಾನ್ಫಿಡೆನ್ಸ್? ಕನ್ನಡದ ಜನತೆ ತನ್ನನು ಎಷ್ಟು ಪ್ರೀತಿಸುತ್ತಾರೆ ಎಂಬುದನ್ನು ಮರೆತೇ ಬಿಟ್ಟರಲ್ಲಾ ಅಪ್ಪು. ಇಸಿಜಿ ನೀಡಿದ ಕುಟುಂಬದ ವೈದ್ಯರಾದ ರಮಣ ರಾವ್ ರವರು ತಮ್ಮ ಕ್ಲಿನಿಕ್ ನಲ್ಲಿ ಐಸಿಯು ಘಟಕವಿದ್ದು ಅಲ್ಲೇ ತುರ್ತು ಚಿಕಿತ್ಸೆಯನ್ನಾಗಲೀ, ಶ್ವಾಸಕೋಶಕ್ಕೆ ಆಕ್ಸಿಜನ್ ಸಪ್ಲೈಯನ್ನಾಗಲೀ ನೀಡೀ ಕೇರ್ ತೆಗೆದುಕೊಳ್ಳಬಹುದಿತ್ತು.

● 12ನೇ ಪುಟಕ್ಕೆ...





# ಉಪ ಸಮರದಲ್ಲಿ ತೈಲಬೆಲೆ ಏರಿಕೆಗೆ ನೀಡಿದ ಉತ್ತರ





● ಎಂ.ಡಿ.ದಿನೇಶ್ ರಾವ್

ಇತ್ತೀಚಿನ ದಿನಗಳಲ್ಲಿ ನಡೆದ ಉಪ ಚುನಾವಣೆಗಳನ್ನು ಗಮನಿಸುತ್ತಾ ಹೋದರೆ ಪ್ರಾದೇಶಿಕ ಪಕ್ಷಗಳಿರುವ ರಾಜ್ಯಗಳಲ್ಲಿ ಬಿಜೆಪಿಯನ್ನು ಮೆಟ್ಟಿ ನಿಲ್ಲುತ್ತಿವೆ; ಇದಕ್ಕೆ ಉದಾಹರಣೆ ಮೊನ್ನೆ ನಡೆದ ಉಪ ಚುನಾವಣೆಗಳಲ್ಲಿ ಬಿಜೆಪಿ ಗಳಿಸಿರುವ ಗೆಲುವು ಗಮನಿಸಿದರೆ ದೇಶದಲ್ಲಿ ನಿಧಾನಕ್ಕೆ ಬಿಜೆಪಿಯ ವರ್ಚಸ್ಸು ಕಡಿಮೆಯಾಗುತ್ತಾ ಹೋಗುತ್ತಿದೆ ಎನಿಸುತ್ತದೆ.

ಪ್ರಧಾನಿ ಮೋದಿ ವರ್ಚಸ್ಸು ಕಡಿಮೆಯಾಯಿತು ಎನ್ನುವಾಗಲೆ ಅವರು ತಗೆದುಕೊಂಡ ಕೆಲವ ನಿರ್ಧಾರಗಳು ಮತ್ತೇ ಅವರ ವರ್ಚಸ್ಸನ್ನು ಕಾಪಾಡಿಕೊಳ್ಳುತ್ತಾ ಹೋದರಾದರೂ ಶೇಕಡ20 ರಷ್ಟು ಜನ ಈಗ ಮೋದಿಯ ಕೆಲ ನಿರ್ಧಾರಗಳು ಅವರ ವರ್ತನೆಗಳ ಬಗ್ಗೆ ಖಂಡಿಸುತ್ತಿದ್ದಾರೆ. ಇಂತ ಹೊತ್ತಿನಲ್ಲಿಯೇ ತೈಲ ಬೆಲೆ ಏರಿಕೆಯ ಜೊತೆ ಜೊತೆ ದಿನನಿತ್ಯದ ವಸ್ತುಗಳ ಬೆಲೆಯೂ ಗಗನಕ್ಕೇರುತ್ತಿದೆ ಇದು ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ ಕೂಡ ಜನ ಇದನ್ನು ವಿರೋಧಿಸುತ್ತಾರೆ ಈಗಲೂ ಅದೇ ಆಗಿದೆ ಎನ್ನುವುದು ಈಗ ನಡೆದಿರುವ ಉಪ ಚುನಾವಣೆಗಳ ಫಲಿತಾಂಶ ವ್ಯಕ್ತಪಡಿಸಿವೆ.



ಹಾಗೆ ನೋಡಿದರೆ ಮೋದಿಯ ನಿರ್ಧಾರಗಳು ಮತ್ತು ಅವರ ಯೋಜನೆಗಳು ಇವೆಯಲ್ಲ ಅವು ಕೂಡ ಈಗ ದೇಶದ ಜನರನ್ನು ಮನವೊಲಿಸಲಾಗುತ್ತಿಲ್ಲ ಶೇಕಡ ಅರ್ಧದಷ್ಟು ಜನ ಈಗ ಅವುಗಳನ್ನು ವಿರೋಧಿಸುತ್ತಲೇ ಬರುತ್ತಿದ್ದಾರೆ ಹೀಗಿರುವಾಗ ಗೃಹಸಚಿವ ಅಮಿತ್ ಶಾ ಅವರು ಕೇಂದ್ರ ಸರ್ಕಾರದ ವರ್ಚಸ್ಸಿಗೆ ಹಲವು ಪ್ರಯತ್ನಗಳನ್ನು ನಡೆಸುತ್ತಿದ್ದಾರೆ ಜೊತೆಗೆ ಹಲವು ರಾಜ್ಯಗಳಲ್ಲಿ ನಡೆದ ಉಪ ಚುನಾವಣೆಗಳನ್ನು ಗೆಲ್ಲಲೇ ಬೇಕು ಎನ್ನುವ ಅಚಲ ನಿರ್ಧಾರ ಕೈಗೊಂಡಿದ್ದರು ಆದರೂ ಈಗಿನ ಉಪ ಚುನಾವಣೆಯ ಫಲಿತಾಂಶಗಳನ್ನು ಗಮನಿಸಿದರೆ ನಿಧಾನವಾಗಿ ಬಿಜೆಪಿಯ ಗೆಲುವು ಕಡಿಮೆಯಾಗುತ್ತಿದೆ ಇದು ಮುಂದಿನ ವರ್ಷಗಳಲ್ಲಿ ನಡೆಯುವ ಚುನಾವಣೆಗಳ ಮೇಲೆ ಪರಿಣಾಮ ಬೀರುತ್ತವೆ ಎನ್ನುವುದರಲ್ಲಿ ಯಾವುದೇ ಸಂಶಯವೂ ಇಲ್ಲ.ಬರುವ ವಿಧಾನಸಭೆಗಳು ಮತ್ತೆ ಲೋಕಸಭೆಯ ಮೇಲೂ ಪರಿಣಾಮ ಬೀರುತ್ತವೆ ಆದರೆ ಬಿಜೆಪಿ ಹೊರತಾಗಿ ಯಾವ ಪಕ್ಷವೂ ಇನ್ನೂ ಒಂದು ನಿರ್ಧಾರಕ್ಕೆ ಬಂದಿಲ್ಲ ಬಿಜೆಪಿಯೇತರ ಪಕ್ಷಗಳು ಒಂದಗೂಡಿ ಹೋದರೆ ಬಹುತೇಕ ಗೆಲುವು ಸಾಧಿಸಬಹುದು ಬಿಜೆಪಿಯನ್ನು ಹಿಮ್ಮೆಟ್ಟಬಹುದು ಎನ್ನುವ ಲಕ್ಷಣಗಳು ಈ ಚುನಾವಣೆಯಲ್ಲಿದ್ದರೂ ಇನ್ನೂ ಬಿಜೆಪಿಯೇತರ ಪಕ್ಷಗಳು ಕಚ್ಚಾಟದಲ್ಲೇ ಇವೆ ಯಾವುದೇ ನಿರ್ಧಾರಗಳನ್ನು ತಗೆದುಕೊಂಡಿಲ್ಲ .

ಇರಲಿ ಈಗ ಭಾರತದ 13 ರಾಜ್ಯಗಳಲ್ಲಿ ಮೂರು ಲೋಕಸಭೆ ಹಾಗೂ 29 ವಿಧಾನಸಭೆಗಳಿಗೆ ನಡೆದ ಉಪ ಚುನಾವಣೆ ಫಲಿತಾಂಶವು ಹೊರ ಬಿದ್ದಿದೆ. ಅಸ್ಸಾಂನ ಎಲ್ಲಾ ಐದು ವಿಧಾನಸಭೆ ಕ್ಷೇತ್ರಗಳಲ್ಲಿ ಎನ್ ಡಿಎ ಮೈತ್ರಿಕೂಟಕ್ಕೆ ಗೆಲುವು ಸಿಕ್ಕರೆ, ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷಕ್ಕೆ ಮತದಾರರು ವಿಜಯಮಾಲೆ ಹಾಕಿದ್ದಾರೆ.


ಕಳೆದ ಅಕ್ಟೋಬರ್ 30ರಂದು ದಾದ್ರ ಮತ್ತು ನಗರ್ ಹವೇಲಿ, ಹಿಮಾಚಲ ಪ್ರದೇಶದ ಮಂಡಿ ಲೋಕಸಭೆ ಕ್ಷೇತ್ರಗಳಲ್ಲಿ ಬಿಜೆಪಿ ಮುಖಭಂಗ ಅನುಭವಿಸಿದ್ದು, ಮಧ್ಯಪ್ರದೇಶದ ಖಂಡ್ವಾ ಕ್ಷೇತ್ರದಲ್ಲಿ ಮಾತ್ರ ಗೆಲುವು ಸಾಧಿಸಿದೆ. ಆ ಮೂಲಕ 3 ಕ್ಷೇತ್ರಗಳ ಪೈಕಿ ಎರಡರಲ್ಲಿ ಸೋಲು ಕಂಡಿದೆ. ಅದೇ ರೀತಿ 13 ರಾಜ್ಯಗಳ 29 ವಿಧಾನಸಭೆ ಕ್ಷೇತ್ರಗಳಲ್ಲೂ ಭಾರತೀಯ ಜನತಾ ಪಕ್ಷಕ್ಕೆ ತೀವ್ರ ಮುಖಭಂಗವಾಗಿದೆ.

ಲೋಕಸಭೆ ಕ್ಷೇತ್ರಗಳಷ್ಟೇ ಅಲ್ಲದೇ 29 ವಿಧಾನಸಭೆ ಚುನಾವಣೆಗಳಲ್ಲೂ ಬಿಜೆಪಿ ಹಿನ್ನಡೆ ಅನುಭವಿಸಿರುವುದು ಗೋಚರಿಸುತ್ತಿದೆ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಸೇರಿದಂತೆ ಅಗತ್ಯ ವಸ್ತುಗಳ ಬೆಲೆಯನ್ನು ಆಕಾಶದೆತ್ತರಕ್ಕೆ ಏರಿಸಿರುವ ಕೇಂದ್ರ ಸರ್ಕಾರಕ್ಕೆ ಮತದಾರರು ನೀಡಿದ ಉತ್ತರ ಸ್ಪಷ್ಟವಾಗಿದೆ. ದೇಶದ 29 ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 8 ಕ್ಷೇತ್ರಗಳಲ್ಲಿ ಮಾತ್ರ ಗೆಲುವು ಕಂಡುಕೊಂಡಿದ್ದರೆ, ಕಾಂಗ್ರೆಸ್ 10 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ. ಟಿಎಂಸಿ ರಾಜ್ಯದ ನಾಲ್ಕೂ ಕ್ಷೇತ್ರಗಳನ್ನು ತನ್ನ ತೆಕ್ಕೆಗೆ ಹಾಕಿಕೊಂಡಿದೆ. ಇದರ ಹೊರತಾಗಿ ಯುವಜನ ಶ್ರಮಿಕ ರೈತ ಕಾಂಗ್ರೆಸ್ ಪಕ್ಷ 1, ಯುಡಿಪಿ 1, ಮಿಜೋ ನ್ಯಾಷನಲ್ ಫ್ರೆಂಟ್ 1, ಎನ್ ಡಿಪಿಪಿ 1, ಭಾರತದ ರಾಷ್ಟ್ರೀಯ ಲೋಕದಳ ಪಕ್ಷ 1, ಜನತಾ ದಳ 2 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ.

## ಎಲ್ಲೆಲ್ಲಿ ಯಾವ ಪಕ್ಷ ಗಲುವು

ಅಸ್ಸಾಂ ಐದು, ಪಶ್ಚಿಮ ಬಂಗಾಳದ ನಾಲ್ಕು, ಮಧ್ಯಪ್ರದೇಶ, ಹಿಮಾಚಲ ಪ್ರದೇಶ ಹಾಗೂ ಮೇಘಾಲಯದ ಮೂರು ಮತ್ತು ಬಿಹಾರ, ಕರ್ನಾಟಕ ಹಾಗೂ ರಾಜಸ್ಥಾನದ ಎರಡು, ಆಂಧ್ರ ಪ್ರದೇಶ, ಹರಿಯಾಣ, ಮಹಾರಾಷ್ಟ್ರ, ಮಿಜೋರಾಂ ಹಾಗೂ ತೆಲಂಗಾಣದ ಒಂದೊಂದು ವಿಧಾನಸಭೆ ಕ್ಷೇತ್ರ ಸೇರಿದಂತೆ ಒಟ್ಟು 29 ಕ್ಷೇತ್ರಗಳ ಉಪ ಚುನಾವಣೆ ಫಲಿತಾಂಶ ಹೊರ ಬಿದ್ದಿದೆ.

ಅಸ್ಸಾಂನ ಐದು ಕ್ಷೇತ್ರಗಳಲ್ಲಿ 3 ಬಿಜೆಪಿ, 2 ಕ್ಷೇತ್ರಗಳಲ್ಲಿ ಯುಪಿಪಿಎಲ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ನಡೆದ ನಾಲ್ಕು ವಿಧಾನಸಭೆ ಕ್ಷೇತ್ರಗಳಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವಿನ ನಗೆ ಬೀರಿದ್ದಾರೆ. ಆಂಧ್ರ ಪ್ರದೇಶದ ಒಂದು ವಿಧಾನಸಭೆ ಕ್ಷೇತ್ರದಲ್ಲಿ ಯುವಜನ ಶ್ರಮಿಕ ರೈತ ಕಾಂಗ್ರೆಸ್ ಪಕ್ಷ ಗೆಲುವು ಸಾಧಿಸಿದೆ. ಬಿಹಾರದ 2 ಕ್ಷೇತ್ರಗಳಲ್ಲಿ ಜನತಾ ದಳ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಹರಿಯಾಣದಲ್ಲಿ ಭಾರತದ ರಾಷ್ಟ್ರೀಯ ಲೋಕದಳ ಪಕ್ಷದ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ. ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಮೂರೂ ಕ್ಷೇತ್ರಗಳಲ್ಲಿ ಗೆಲುವಿನ ನಗೆ ಬೀರಿದೆ. ಕರ್ನಾಟಕದಲ್ಲಿ ಒಂದು ಕಾಂಗ್ರೆಸ್, ಮತ್ತೊಂದರಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಮಧ್ಯಪ್ರದೇಶದಲ್ಲಿ ಬಿಜೆಪಿಯ ಎರಡು ಹಾಗೂ ಕಾಂಗ್ರೆಸ್ಸಿನ ಒಬ್ಬ ಅಭ್ಯರ್ಥಿ ದಿಗ್ವಿಜಯ ಸಾಧಿಸಿದ್ದಾರೆ. ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲುವು ಕಂಡಿದ್ದಾರೆ. ಮೇಘಾಲಯದ ಮೂರು ಕ್ಷೇತ್ರಗಳ ಪೈಕಿ ಕಾಂಗ್ರೆಸ್ ಎರಡು ಹಾಗೂ ಯುನೈಟೆಡ್ ಡೆಮಾಕ್ರೆಟಿಕ್ ಪಕ್ಷದ ಒಬ್ಬ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ. ಮಿಜೋರಾಂನ ಒಂದು ವಿಧಾನಸಭೆ ಕ್ಷೇತ್ರದಲ್ಲಿ ಮಿಜೋ ನ್ಯಾಷನಲ್ ಫ್ರೆಂಟ್ ಗೆಲುವು ಸಾಧಿಸಿದೆ. ನಾಗಾಲ್ಯಾಂಡ್ ನಲ್ಲಿ ನಡೆದ ಒಂದು ಕ್ಷೇತ್ರದ ವಿಧಾನಸಭೆ ಚುನಾವಣೆಯಲ್ಲಿ ಎನ್ ಡಿಪಿಪಿ ಅಭ್ಯರ್ಥಿ ಗೆಲುವು ಪಡೆದುಕೊಂಡಿದ್ದಾರೆ. ರಾಜಸ್ಥಾನದಲ್ಲಿ ನಡೆದ ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಎರಡೂ ಕ್ಷೇತ್ರಗಳನ್ನು ತನ್ನದಾಗಿಸಿಕೊಂಡಿದೆ.







## ಕರ್ನಾಟಕದಲ್ಲಿ ಬಿಜೆಪಿ–ಕಾಂಗ್ರೆಸ್ ಪಕ್ಷಕ್ಕೆ ಮಿಶ್ರಫಲ:

ಕರ್ನಾಟಕದ ಹಾನಗಲ್ ಮತ್ತು ಸಿಂದಗಿ ವಿಧಾನಸಭೆ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಒಂದು ಮತ್ತು ಕಾಂಗ್ರೆಸ್ ಒಂದು ಸ್ಥಾನವನ್ನು ಗೆದ್ದುಕೊಂಡಿದೆ. ಸಿಎಂ ಬಸವರಾಜ ಬೊಮ್ಮಾಯಿತ ತವರ ಜಿಲ್ಲೆ ಹಾನಗಲ್ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಶ್ರೀನಿವಾಸ್ ಮಾನೆ ಗೆಲುವು ಸಾಧಿಸಿದ್ದಾರೆ. ಇನ್ನೊಂದು ಕಡೆ ಸಿಂದಗಿ ಕ್ಷೇತ್ರದಲ್ಲಿ ಕಾಂಗ್ರೆಸ್ ಎದುರು ಬಿಜೆಪಿ ಅಭ್ಯರ್ಥಿ ರಮೇಶ್ ಭೂಸನೂರ್ ಗೆಲುವಿನ ನಗೆ ಬೀರಿದ್ದಾರೆ.

## ಅಸ್ಸಾಂ ಬಿಜೆಪಿ ದಿಗ್ವಿಜಯ:

ಅಸ್ಸಾಂನಲ್ಲಿ ಐದು ವಿಧಾನಸಭೆ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಗೆಲವು ಸಾಧಿಸಿದೆ. ಕೊಕ್ರಜಾರ್ ಜಿಲ್ಲೆಯ ಗೊಸ್ಸೈಗಾಂವ್, ಬಕ್ಸಾ ಜಿಲ್ಲೆಯ ತಮುಲ್ಪುರ್, ಜೋರ್ಹತ್ ಜಿಲ್ಲೆಯ ಮರಿಯಾನಿ ಮತ್ತು ಥೌರಾ ಹಾಗೂ ಬಾರ್ಪೇಟಾ ಜಿಲ್ಲೆಯ ಭವಾನಿಪುರ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವಿನ ನಗೆ ಬೀರಿದ್ದಾರೆ.

ಅಸ್ಸಾಂನ 5 ಸ್ಥಾನಗಳ ಪೈಕಿ ಬಿಜೆಪಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ ಮೂರರಲ್ಲಿಯೂ ಗೆಲುವು ಸಾಧಿಸಿದೆ. ಮೈತ್ರಿಕೂಟದ ಪಾಲುದಾರ ಯುಪಿಪಿಎಲ್ ತನಗೆ ಹಂಚಿಕೆಯಾದ ಎರಡು ಸ್ಥಾನಗಳಲ್ಲಿ ಗೆದ್ದು ಬೀಗಿದೆ.

## ಪಶ್ಚಿಮ ಬಂಗಾಳದಲ್ಲಿ

ಪಶ್ಚಿಮ ಬಂಗಾಳದಲ್ಲಿ ನಡೆದ ನಾಲ್ಕು ವಿಧಾನಸಭೆ ಕ್ಷೇತ್ರಗಳಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. 1,64,089 ಮತಗಳ ಅಂತರದಿಂದ ದಿನ್ಹತಾ ಕ್ಷೇತ್ರದಲ್ಲಿ ಟಿಎಂಸಿ ಗೆಲುವು ಸಾಧಿಸಿದೆ. ಶಾಂತಿಪುರವನ್ನು 64,675 ಮತಗಳ ಅಂತರದಿಂದ ಗೆದ್ದಿದ್ದು, ಬಿಜೆಪಿ 2ನೇ ಸ್ಥಾನದಲ್ಲಿದೆ. ಖರ್ದಾಹಾದಲ್ಲಿ 93,832 ಮತಗಳ ಅಂತರದಿಂದ ಟಿಎಂಸಿ ಗೆಲುವು ಸಾಧಿಸಿದರೆ, ಬಿಜೆಪಿ 2ನೇ ಸ್ಥಾನದಲ್ಲಿ ಗುರುತಿಸಿಕೊಂಡಿದೆ. ಅದೇ ರೀತಿ ಗೋಸಾಬದಲ್ಲಿ 1,43,051 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದು, ಇಲ್ಲಿಯೂ ಬಿಜೆಪಿ 2ನೇ ಸ್ಥಾನದಲ್ಲಿದೆ.

ಪಶ್ಚಿಮ ಬಂಗಾಳ ನಾಡಿಯಾ ಜಿಲ್ಲೆಯ ಸಂತಿಪುರ್ ವಿಧಾನಸಭೆ, ದಕ್ಷಿಣದ 24 ಪರಗಣ ಜಿಲ್ಲೆಯ ಖರ್ದಹಾ ಮತ್ತು ಗೋಸಬಾ ಕ್ಷೇತ್ರಗಳಿಗೆ ಚುನಾವಣೆ ನಡೆಸಲಾಗುತ್ತಿದೆ. ಇತ್ತೀಚಿನ ಏಪ್ರಿಲ್–ಮೇ ತಿಂಗಳಿನಲ್ಲಿ ನಡೆದ ಚುನಾವಣೆಯಲ್ಲಿ ಖರ್ದಹಾ ಮತ್ತು ಗೋಸಬಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದ ಬಿಜೆಪಿಗೆ ಈ ಉಪ ಚುನಾವಣೆಯುಪ್ರತಿಷ್ಠೆಯ ಕಣವಾಗಿತ್ತು.



# ಪ್ರಾಚೀನ ಸಂಸ್ಕೃತಿಯ ಬಹುದೊಡ್ಡ ಎಡೆ ಜಟಂಗಿರಾಮೇಶ್ವರ ಬೆಟ್ಟ

ಪರಿಶೋಧನೆ



ಡಾ.ಎಸ್.ವೈ.ಸೋಮಶೇಖರ್
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಟಂಗಿ ಅಥವಾ ಜಟಂಗಿರಾಮೇಶ್ವರ ಬೆಟ್ಟವು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಅತಿ ಎತ್ತರದ ಶಿಖರ. ಇಲ್ಲಿನ ಬೆಟ್ಟಗಳನ್ನು ಚಿಕ್ಕ ಮತ್ತು ದೊಡ್ಡ ಜಟಂಗಿ ಬೆಟ್ಟಗಳೆಂದು ಕರೆಯುತ್ತಾರೆ. ಚಿಕ್ಕ ಬೆಟ್ಟದ ಮೇಲೆ ಚಾರಿತ್ರಿಕ ಕುರುಹುಗಳಾದ ಅಶೋಕನ ಬಂಡೆಗಲ್ಲು ಶಾಸನ, ಶಿಲಾಶಾಸನ, ವೀರಗಲ್ಲು, ರಾಮೇಶ್ವರ ಮತ್ತಿತರ ಅನೇಕ ಪ್ರಾಚೀನ ದೇವಾಲಯಗಳಿದ್ದರೆ, ದೊಡ್ಡ ಬೆಟ್ಟದ ಮೇಲೆ ಕಾಶೀಪುರಾಧೀಶ್ವರ ದೇಗುಲ, ಜಟಾಯುವಿನ ಸಮಾಧಿ, ವರ್ಣಚಿತ್ರ ಮತ್ತು ಶಾಸನಗಳಿವೆ. ಜಟಂಗಿ ಬೆಟ್ಟಕ್ಕೆ ಅಲ್ಲಿನ ದೇವಾಲಯದ ಹಿನ್ನೆಲೆಯಲ್ಲಿ ಜಟಂಗಿ ರಾಮೇಶ್ವರ ಬೆಟ್ಟವೆಂದೇ ಚಿರಪರಿಚಿತ. ಈ ದೊಡ್ಡಬೆಟ್ಟವನ್ನು ಏರಿ ಈ ಪರಿಸರದ ಸೊಬಗನ್ನು ನೋಡುವುದೇ ಚಂದ, ಆನಂದ. ಈ ಬೆಟ್ಟದ ತುತ್ತ ತುದಿಯಿಂದ ಕೆಳಭಾಗದಲ್ಲಿ ಹರಿಯುವ ಜನಗಿಹಳ್ಳ ಅಥವಾ ಚಿನ್ನಹಗರಿ ನದಿ ಮತ್ತು ಅದು ಅಲ್ಲಿನ ಬೆಟ್ಟಗುಡ್ಡ ಕಣಿವೆಗಳನ್ನು ಬಳಸಿ ಹಾವಿನೋಪಾದಿಯಲ್ಲಿ ನಿರ್ಮಿಸಿಕೊಂಡಿರುವ ಹರಿವಿನ ಚಿತ್ರಣವನ್ನು ಕಣ್ತುಂಬಿಕೊಳ್ಳುವುದೇ ಒಂದು ಸೊಗಸು.

ಜಟಂಗಿ ಬೆಟ್ಟದ ಮೇಲಿರುವ ಅಶೋಕನ ಶಿಲಾಶಾಸನವನ್ನು ಬಿ.ಎಲ್. ರೈಸ್ ಅವರು 1892ರಲ್ಲಿ ಪತ್ತೆಹಚ್ಚಿ ಪ್ರಕಟಿಸಿ ಈ ಭಾಗದಲ್ಲಿ ಮೌರ್ಯರ ಆಳ್ವಿಕೆಯನ್ನು ಮೊಟ್ಟಮೊದಲು ದೃಢೀಕರಿಸಿ, ಇಲ್ಲಿನ ಬ್ರಹ್ಮಗಿರಿ ಪರಿಸರವು ಪ್ರಾಚೀನ ಪಟ್ಟಣವಾಗಿತ್ತೆಂಬ ಖ್ಯಾತಿಯನ್ನೂ ದಾಖಲಿಸಿದ್ದರು. ಈ ಶಾಸನಗಳಲ್ಲಿ ಉಲ್ಲೇಖವಾಗುವ ಇಸಿಲಾ ಎಂಬುದು ಇಲ್ಲಿನ ಪಟ್ಟಣದ ಪ್ರಾಚೀನ ಹೆಸರೆಂದು ಅನೇಕ ವಿದ್ವಾಂಸರು ಚರ್ಚಿಸಿ, ಇದೊಂದು ಪ್ರಾಚೀನ ದ್ರಾವಿಡ ಪದವೆಂದೂ ತೀರ್ಮಾನಿಸಿದ್ದರು. ಆದರೆ ಇತ್ತೀಚೆಗೆ ಎಸ್. ಶೆಟ್ಟರ್ ಅವರು ಇಸಿಲಾ ಎಂಬ ಪದದ ಉಲ್ಲೇಖ ಮತ್ತು ಅದರ ಬಳಕೆ ಅಶೋಕನ ಉತ್ತರ ಭಾರತದ ಅನೇಕ ಶಾಸನಗಳಲ್ಲಿರುವುದನ್ನು ಸ್ಪಷ್ಟಪಡಿಸಿ, ಇಸಿಲ ಎಂಬುದು ಈ ಸ್ಥಳದ ಹೆಸರಲ್ಲವೆಂಬ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲದೆ ಕುಪಣ(ಕೊಪ್ಪಳ) ಮತ್ತು ವನವಾಸಿಕ(ಬನವಾಸಿ) ಎಂಬವು ಕನ್ನಡದ ಪ್ರಾಚೀನ ಪದಗಳೆಂದು ಶಾಸನಗಳ ಸಮಗ್ರ ಅಧ್ಯಯನದ ಹಿನ್ನೆಲೆಯಲ್ಲಿ ಗುರುತಿಸಿದ್ದಾರೆ. ಇದು ಚರ್ಚೆಗೆ ಗ್ರಾಸವಾದ ಮತ್ತು ಅಧ್ಯಯನಾರ್ಹ ವಿಷಯ.

ಇರಲಿ, ಜಟಂಗಿ ಬೆಟ್ಟದ ಪ್ರಮುಖವಾದ ಮತ್ತು ಇಂದಿಗೂ ಅತ್ಯಂತ ಆಕರ್ಷಣೆಯ ಕೇಂದ್ರವೆಂದರೆ ರಾಮೇಶ್ವರ ದೇವಾಲಯ. ಇದನ್ನು ಜಟಂಗಿ ರಾಮೇಶ್ವರ ಎಂದೇ ಕರೆಯಲಾಗುತ್ತದೆ. ಇಲ್ಲಿನ ಶಾಸನಗಳು ಬಲ್ಗೊಡಿತೀರ್ಥದ ಶ್ರೀರಾಮೇಶ್ವರ, ಬಲ್ಗೊಡಿ ತೀರ್ಥಸ್ಥಾನದ ರಾಮೇಶ್ವರ, ಜಟಾಂಗಿ ರಾಮಯದೇವ, ಜಟಂಗೆ ರಾಮಯದೇವ, ಜೆಟೋಗಿ ರಾಮಯದೇವ ಎಂದು ಮುಂತಾಗಿ ಕರೆದಿವೆ. ಜಟಂಗಿ ಬೆಟ್ಟಕ್ಕೆ ಇರುವ ಪೌರಾಣಿಕತೆ ರಾಮೇಶ್ವರ ದೇವಾಲಯಕ್ಕೂ ಅನ್ವಯಿಸುತ್ತದೆ. ಈ ದೇಗುಲವನ್ನು ರಾಮಾಯಣದ ಸೀತಾಪಹರಣ ಪ್ರಸಂಗದ ಘಟನೆಯನ್ನು ಈ ಬೆಟ್ಟಕ್ಕೂ ಅನ್ವಯಿಸಿ ದೃಷ್ಟಾಂತಸಹಿತ ವಿವರಿಸುತ್ತಾರೆ. ರಾಮೇಶ್ವರ ದೇವಾಲಯದ ಹಿಂಬದಿಯ ಕ್ರಿ.ಶ. 962ರ ಶಾಸನವು, "ಸೀತೆಯಂ ರಾವಣನುಯೆ ಜಟಾಯು ಕಾದಿ ಸತ್ತಲ್ಲಿ ರಾಮ ಪ್ರತಿಷ್ಟೆಗೆಯ್ದಲ್ಲಿ ಉಣಂದೇಗುಲಮಂ ಮಾಡಿದಂದೆ ಯಿಟ್ಟಗೆಯ ದೇಗುಲಮ ಕಳೆದು ಕಳಶ ನಿರ್ಮಾಣಂ ಲಿಂಗಸಿವಜೀಯಬ್ಭಿಕ್ಷಾವೃತ್ತಿ ಯಿನ್ದಂ ಕಲ್ಲದೇಗುಲವುಂ ದೇಗುಲಂಗಳುಮಂ ಸಮಯಿಸಿ ಕೊಣ್ಡಗಳುಮಂ ಕಟ್ಟಿಸಿದರ್" ಎಂದು ಹೇಳುತ್ತದೆ. ಈ ಮುಂಚೆ ಇಟ್ಟಿಗೆಯ ರಾಮೇಶ್ವರ ದೇವಾಲಯ ಇಲ್ಲಿದ್ದು, ಅದು ಶಿಥಿಲಗೊಂಡ ಕಾರಣ ಅದನ್ನು ಕೆಡವಿ ಕಲ್ಲ ದೇಗುಲವಾಗಿ



ನಿರ್ಮಿಸಲಾಯಿತೆಂಬುದು ಶಾಸನ ಸಂಗತಿ. ಇದೇ ಅವಧಿಯಲ್ಲಿ ಇತರ ದೇಗುಲಗಳು ನಿರ್ಮಾಣಗೊಂಡವೆಂಬುದು ಇದೇ ಶಾಸನದಿಂದ ತಿಳಿದುಬರುತ್ತದೆ. ಈ ಎಲ್ಲ ದೇವಾಲಯಗಳನ್ನು ಕಟ್ಟಿಸಿದ ವ್ಯಕ್ತಿ ಲಿಂಗಸಿವಜೀಯ ಎಂಬ ಭಿಕ್ಷಾವೃತ್ತಿ ಯತಿಯೆಂಬುದು ಗಮನಾರ್ಹ.

ರಾಮೇಶ್ವರ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗಗಳಿಂದ ಕೂಡಿದ ಹಾಗೂ ದೇಗುಲದ ಆವರಣದಲ್ಲಿ ವಿವಿಧ ಉಪದೇಗುಲಗಳು, ದೀಪಸ್ತಂಭ, ಮತ್ತು ಮಹಾದ್ವಾರಗಳನ್ನು ಒಳಗೊಂಡ ವಿಸ್ತಾರ ದೇಗುಲವಾಗಿದೆ.

ಶಾಸನ–ಸಾಹಿತ್ಯಗಳಲ್ಲಿ ದೇವಾಲಯ ಮತ್ತು ಪರಿಸರ ಜಟಂಗಿ ರಾಮೇಶ್ವರ ದೇವಾಲಯ ಪ್ರಾಚೀನ ಕಾಲದಿಂದಲೂ ಈ ಪರಿಸರದ ಆರಾಧ್ಯ ದೈವ. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಅನೇಕ ಶಾಸನ–ತಾಮ್ರಪಟಗಳಿವೆ. ಅವುಗಳಲ್ಲಿ ವಿವಿಧ ಅರಸ–ಸಾಮಂತರು ದಾನದತ್ತಿ ನೀಡಿದ ಹಾಗೂ ಜೀರ್ಣೋದ್ಧಾರಗೊಳಿಸಿದ ವಿವರಗಳಿವೆ. ಕ್ರಿ.ಶ.1041ರಲ್ಲಿ ಮಲ್ಲರಸನೆಂಬುವವನು ಈ ದೇವಾಲಯಕ್ಕೆ ದತ್ತಿಬಿಟ್ಟ, ಕ್ರಿ.ಶ.1064ರಲ್ಲಿ ಕಲ್ಯಾಣ ಚಾಲುಕ್ಯ ಅರಸ ವಿಜಯಾದಿತ್ಯನು ಬಲ್ಗೊಡಿತೀರ್ಥದ ಶ್ರೀರಾಮೇಶ್ವರದೇವರ ನೈವೇದ್ಯ, ಕಂಟಸ್ಪಟಿಕ ಕಂಪೆರಕ, ರಂಗಭೋಗದ ಸೂಳೆಯರಿಗೆ, ತಪೋಧನರಿಗೆ ವಿದ್ಯಾದಾನಕ್ಕೆಂದು ದೇವೇಂದ್ರ ಪಂಡಿತರಿಗೆ ಧಾರಾಪೂರ್ವಕವಾಗಿ ಕಣೆಯಕಲ್ಲು–300ರ ಬದಂಡಾಕಿವಡುಳಿಕೆ–20ರ ಕಿರಿಯಡಾಕಿ ಎಂಬಲ್ಲಿ ಮೂವತ್ತು ಮತ್ತರು ಭೂಮಿಯನ್ನು ದಾನ ನೀಡಿದ್ದನು. ಶಾಸನದಲ್ಲಿನ ಈ ವಿವರದಿಂದ ರಾಮೇಶ್ವರ ದೇವಾಲಯದಲ್ಲಿ 10–11ನೆಯ ಶತಮಾನಗಳಲ್ಲಿ ಆಚರಣೆಯಲ್ಲಿದ್ದ ಪೂಜೆ–ಉತ್ಸವಗಳು, ಅಂದು ಅಸ್ತಿತ್ವದಲ್ಲಿದ್ದ ರಂಗಭೋಗ ಮತ್ತು ಅದಕ್ಕೆಂದೇ ಸೂಳೆ(ದೇವದಾಸಿ)ಯರಿದ್ದುದನ್ನು ಅರಿಯಬಹುದು. ಅಲ್ಲದೆ ಜಟಂಗಿ ರಾಮೇಶ್ವರ ದೇವಾಲಯವು ಕೇವಲ ಧಾರ್ಮಿಕ ಎಡೆಯಾಗಿರದೆ ಪ್ರಾಚೀನ ವಿದ್ಯಾಕೇಂದ್ರವಾಗಿತ್ತೆಂಬುದು ಶಾಸನಸ್ಥ ಸಂಗತಿ. ಇದರಿಂದ ಜಟಂಗಿ ರಾಮೇಶ್ವರ ದೇವಾಲಯವು 10–11ನೆಯ ಶತಮಾನದಲ್ಲಿ ಈ ಪರಿಸರದ ಪ್ರಸಿದ್ಧ ಜ್ಞಾನ ದೇಗುಲವೂ ಆಗಿದ್ದುದು ಗಮನಾರ್ಹ. ಇದೇ ರೀತಿ ಕ್ರಿ.ಶ.1071ರಲ್ಲಿ ನೊಳಂಬ ಪಲ್ಲವ ಪೆರ್ಮಾಡಿ ಜಯಸಿಂಗದೇವನು ಬಲ್ಗೊಡಿ ತೀರ್ಥಸ್ಥಾನದ ರಾಮೇಶ್ವರ ದೇವರಿಗೆ ಕಣೆಯಕಲ್ಲು–300ರ ಬಳಿಯಿದ್ದ ಬಾಡಬಣ್ಣೆಕಲ್ಲನ್ನು ದೇವಾಲಯದ ಅಮೃತರಾಸಿ ಜೀಯರಿಗೆ ಧಾರೆಯೆರೆದು ಬಿಟ್ಟುಕೊಟ್ಟಿದ್ದನು. ಹೊಯ್ಸಳ ಅಧಿಕಾರಿ ಹುಲಿವಾನದ ಸಾವಂತ ಸಿವೋದಯನಾಯಕನ ತಾಯಿಯಾದ ಹೊನ್ನವ್ವೆ ನಾಯಕಿತಿಯ ಆರಾಧ್ಯ ದೈವವಾಗಿದ್ದಿತು. ಈಕೆ ಜಟಂಗಿ ಬೆಟ್ಟವನ್ನೇರಿ ಸೀತಾದೊಣೆಯಲ್ಲಿ ಪುಣ್ಯಸ್ನಾನ ಮಾಡಿ ರಾಮೇಶ್ವರನನ್ನು ಪೂಜಿಸಿ ದಾನ–ಧರ್ಮಗಳನ್ನು ಮಾಡಿ ಶಿವೈಕ್ಯಳಾದಳೆಂದೂ ಹೇಳಲಾಗುತ್ತದೆ. ಇವಳೊಂದಿಗೆ ಹೊನ್ನಿ ಎಂಬ ಈಕೆಯ ಸೇವಕಿ ಆತ್ಮಾಹುತಿ ಮಾಡಿಕೊಂಡದ್ದು ಬ್ರಹ್ಮಗಿರಿಯ ಸಿಡಿತಲೆಕಲ್ಲಿನಿಂದ ತಿಳಿಯುತ್ತದೆ. ಈ ರಾಮೇಶ್ವರ ದೈವವು ಕುಮ್ಮಟದುರ್ಗದ ನಾಯಕ ಕಂಪಿಲರಾಯನ ಮನೆದೇವರಾಗಿದ್ದು, ಕುಮಾರರಾಮನನ್ನು ಕೆಲಕಾಲ ಇಲ್ಲಿನ ನೆಲಮಾಳಿಗೆಯಲ್ಲಿ ಇಟ್ಟಿದ್ದ ವಿಷಯ ಕೈಫಿಯತ್ತುಗಳಿಂದ ತಿಳಿದುಬರುತ್ತದೆ. ಅವುಗಳಲ್ಲಿ ಕುಮಾರರಾಮನು ಜಟಂಗಿ ರಾಮೇಶ್ವರನ ವರಪ್ರಸಾದದಿಂದ ಹುಟ್ಟಿದನೆಂದೂ, ಈ ಕಾರಣದಿಂದ ಅವನಿಗೆ ಕುಮಾರರಾಮನೆಂಬ ಹೆಸರಿನಿಂದ ಕರೆಯಲಾಯಿತೆಂದೂ ಹೇಳಿವೆ. ಸ್ವತಃ ಕುಮಾರರಾಮನು ನಾನು ಜಟಂಗಿ ರಾಮೇಶ್ವರನ ವರಪ್ರಸಾದದಿಂದ ಹುಟ್ಟಿದನೆಂದು ಹೇಳಿಕೊಂಡಿದ್ದಾನೆ. ಅಲ್ಲದೆ ಕುಮಾರರಾಮನು ಮುಸ್ಲಿಮರ ಸೈನ್ಯದ ವಿರುದ್ಧ ಹೋರಾಡಿ ಮಡಿದಾಗ, "ಜಟಂಗಿ ರಾಮೇಶ್ವರ ದೇವರು ಪ್ರಸನ್ನರಾಗಿ, ದಿವ್ಯವಿಮಾನ ವನ್ನು ತಂದು, ಕೊಮಾರರಾಮನು ವೈಕುಂಟಕ್ಕೇರಿದನು" ಎಂದು ವರ್ಣಿಸಲಾಗಿದೆ. ಕ್ರಿ.ಶ. 1430ರಲ್ಲಿ ಎರಡನೆಯ ದೇವರಾಯ(ಪ್ರೌಢದೇವರಾಯ)ನು ಇಲ್ಲಿಯ ಮಾಚನಹಳ್ಳಿ ಸೀಮೆಗೆ ಬೇಟೆಗೆಂದು ಬಂದಾಗ ರಾಮದೇವರ ದರ್ಶನ ಪಡೆದು ಆ ದೇವರಿಗೆ ರಾಯದುರ್ಗ ಚಾವಡಿಯಿಂದ ಸಲುವ ಅಮೃತಪಡಿಯ ಕಟ್ಟಲೆಯಾದ 20 ವರಾಹ ಹುಟ್ಟುವಳಿಯ ಒಂದು ಗ್ರಾಮ ಮತ್ತು ಹಾನೆಯನಾಡಿನ ಸಂಗೇಬೋವನ ಕಾಲುವೆಯ ಕೋರು ಸುವರ್ಣಾದಾಯ, ಆ ಕಾಲುವೆಯ ಚತುಸೀಮೆಗೆ ಸಲುವ ನಿಧಿನಿಕ್ಷೇಪ ಮೊದಲಾದ ಸರ್ವೋತ್ಪತ್ತಿಗಳನ್ನು ಬಿಡಲು ತನ್ನ ಅಧಿಕಾರಿಗಳಿಗೆ ತಿಳಿಸಿದ್ದನು. ಹೀಗೆ ಪ್ರಾಚೀನ ಕಾಲದಿಂದಲೂ ಪ್ರಸಿದ್ಧವಾದ ಶೈವಕ್ಷೇತ್ರವಾಗಿ ಮುಂದುವರಿದು ಬಂದಿದೆ. ಜಟಂಗಿ ರಾಮೇಶ್ವರ ಬೆಟ್ಟದ ಮೇಲೆ ಅನೇಕ ಸಣ್ಣಪುಟ್ಟ ದೇವಾಲಯಗಳಿವೆ. ಅವುಗಳಲ್ಲಿ ಕೇದಾರೇಶ್ವರ, ಸೋಮೇಶ್ವರ, ಗಣೇಶ, ಮಹಿಷಮರ್ದಿನಿ, ಸೂರ್ಯ, ವೀರಭದ್ರ, ಜನಾರ್ದನ, ಚಾಮುಂಡೇಶ್ವರಿ(ಮಹಿಷಮರ್ದಿನಿ), ಮಹಾಬಲೇಶ್ವರ, ಚಂದ್ರಮೌಳೀಶ್ವರ, ಅರ್ಕೇಶ್ವರ, ಚಂಡಿಕೇಶ್ವರ, ಜಂಬುಕೇಶ್ವರ, ವಿರೂಪಾಕ್ಷೇಶ್ವರ, ಕಾಲಭೈರವ ಮೊದಲಾದ ದೇವಾಲಯಗಳು, ಸೀತಾಕೊಂಡ ಮತ್ತು ಏಕಾಂತ ತೀರ್ಥವೆಂಬ ನೀರಿನ ಕೊಳಗಳು ಹಾಗೂ ಶಿಲ್ಪಾವಶೇಷಗಳನ್ನು ಜಟಂಗಿ ಬೆಟ್ಟದ ಮೇಲೆ ಕಾಣಬಹುದಾಗಿದೆ. ಇದರಿಂದ ಜಟಂಗಿ ಬೆಟ್ಟ ಪರಿಸರದಲ್ಲಿ ಪ್ರಾಚೀನಕಾಲದಲ್ಲಿ ಅಸ್ತಿತ್ವದಲ್ಲಿದ್ದ ಧಾರ್ಮಿಕ ಪರಂಪರೆಯ ಔನ್ನತ್ಯವನ್ನು ಗುರುತಿಸಬಹುದಾಗಿದೆ.

## ಮೂರು ಲೋಕಸಭೆ ಕ್ಷೇತ್ರಗಳ ಚಿತ್ರಣ:

ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದಲ್ಲಿ ದಿವಂಗತ ಮುಖ್ಯಮಂತ್ರಿ ವೀರಭದ್ರ ಸಿಂಗ್ ಅವರ ಪತ್ನಿ ಪ್ರತಿಭಾ ಸಿಂಗ್ ಅವರು ಬಿಜೆಪಿಯ ಕಾರ್ಗಿಲ್ ಯುದ್ಧ ವೀರ ಬ್ರಿಗೇಡಿಯರ್ (ನಿವೃತ್ತ) ಖುಶಾಲ್ ಠಾಕೂರ್ ಅವರನ್ನು ಸೋಲಿಸಿದರು. ಮಧ್ಯಪ್ರದೇಶದ ಖಾಂಡ್ವಾ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಜ್ಞಾನೇಶ್ವರ್ ಪಾಟೀಲ್ ಗೆಲುವು ಸಾಧಿಸಿದ್ದಾರೆ. ದಾದ್ರಾ ಮತ್ತು ನಗರ್ ಹವೇಲಿ ಕ್ಷೇತ್ರವನ್ನು ಶಿವಸೇನೆ ಗೆದ್ದುಕೊಂಡಿದೆ.

## ಹಿಮಾಚಲ ಪ್ರದೇಶದ ಫಲಿತಾಂಶ:

ಹಿಮಾಚಲ ಪ್ರದೇಶದ ಫತೇಪುರ್, ಜುಬ್ಬಲ್–ಕೋಟ್‌ಖೈ ಮತ್ತು ಅರ್ಕಿಯ ಮೂರು ವಿಧಾನಸಭಾ ಸ್ಥಾನಗಳನ್ನೂ ಕಾಂಗ್ರೆಸ್ ಗೆದ್ದುಕೊಂಡಿದೆ. ಖಓಐಆ ನ ಅಭಯ್ ಚೌತಾಲ ಅವರು ತಮ್ಮ ಸಾಂಪ್ರದಾಯಿಕ ಭದ್ರಕೋಟೆಯಾದ ಎಲೆನಾಬಾದ್ ಅನ್ನು ಗೆದ್ದರು.



## ಮೇಘಾಲಯ;

ಮೇಘಾಲಯದಲ್ಲಿ ಯುನೈಟೆಡ್ ಡೆಮಾಕ್ರಟಿಕ್ ಪಕ್ಷದಿಂದ ಸ್ಪರ್ಧಿಸಿದ್ದ ಮಾಜಿ ಫುಟ್‌ಬಾಲ್ ಆಟಗಾರ ಯುಜೆನೆಸನ್ ಲಿಂಗ್ದೋ ಗೆದ್ದಿದ್ದಾರೆ. ಬಿಜೆಪಿ ಮಿತ್ರ ಪಕ್ಷವಾದ ಎನ್‌ಪಿಪಿ (ನ್ಯಾಷನಲ್ ಪೀಪಲ್ಸ್ ಪಾರ್ಟಿ) ರಾಜಬಾಲಾ ಕ್ಷೇತ್ರವನ್ನು ಗೆದ್ದುಕೊಂಡಿದೆ. ಮಿಜೋರಾಂನಲ್ಲಿ ಎಂಎನ್‌ಎಫ್ ಟುಯಿರಿಯಲ್ ಸ್ಥಾನವನ್ನು ಗೆದ್ದಿದೆ.

## ಬಿಹಾರ ಮತ್ತು ರಾಜಸ್ಥಾನ;

ಬಿಹಾರದಲ್ಲಿ ನಿತೀಶ್ ಕುಮಾರ್ ಅವರ ಜನತಾ ದಳ ಯುನೈಟೆಡ್ ಎರಡೂ ಸ್ಥಾನಗಳನ್ನು ಗೆದ್ದಿದೆ. ಮಿತ್ರಪಕ್ಷ ಬಿಜೆಪಿ ಜೊಬಾಟ್ ಬುಡಕಟ್ಟು ಸ್ಥಾನವನ್ನು ಕಾಂಗ್ರೆಸ್‌ನಿಂದ ಕಸಿದುಕೊಂಡಿದ್ದು, ಇನ್ನೆರಡು ಕ್ಷೇತ್ರಗಳಲ್ಲಿ ಮುಂದಿದೆ. ರಾಜಸ್ಥಾನದಲ್ಲಿ ಕಾಂಗ್ರೆಸ್ ವಲ್ಲಭನಗರ ಮತ್ತು ಧರಿಯಾವಾಡ ಎಂಬ 2 ಸ್ಥಾನಗಳನ್ನು ಗೆದ್ದಿದೆ. ಈ ಚುನಾವಣೆಯು ಅಶೋಕ್ ಗೆಹ್ಲೋಟ್ ಸರ್ಕಾರದ ಕಾರ್ಯಕ್ಷಮತೆಯ ಮೇಲೆ ಜನಾಭಿಪ್ರಾಯವನ್ನು ತೋರಿಸುವಂತಿದೆ.

ತೆಲಂಗಾಣದ ಹುಜೂರಾಬಾದ್ ವಿಧಾನಸಭಾ ಕ್ಷೇತ್ರದಲ್ಲಿ ಆಡಳಿತಾರೂಢ ತೆಲಂಗಾಣ ರಾಷ್ಟ್ರ ಸಮಿತಿ ತೊರೆದು ಬಿಜೆಪಿ ಸೇರಿದ ಎಟಾಲ ರಾಜೇಂದರ್ ಮುಂದಿದ್ದಾರೆ. ಕ್ಷೇತ್ರದ ಹಾಲಿ ಶಾಸಕರಾದ ಶ್ರೀ ರಾಜೇಂದರ್ ಅವರು ಭೂಕಬಳಿಕೆ ಆರೋಪದ ನಂತರ ರಾಜೀನಾಮೆ ನೀಡಿದ್ದರು, ಅದನ್ನು ಅವರು ನಿರಾಕರಿಸಿದ್ದಾರೆ.

ಈ ಎಲ್ಲಾ ಫಲಿತಾಂಶವನ್ನು ಗಮನಿಸಿದರೆ ಕೇಂದ್ರ ಸರ್ಕಾರದ ವಿರುದ್ಧ ಜನ ಮತ ನೀಡಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ ಅಲ್ಲದೆ, ತೈಲಬೆಲೆ ಏರಿಕೆ ದಿನನಿತ್ಯದ ಬಳಕೆ ವಸ್ತುಗಳ ಏರಿಕೆಯಿಂದ ಜನ ರೊಚ್ಚಿಗೆದ್ದಿದ್ದಾರೆ ಎನ್ನುವುದು ಸ್ಪಷ್ಟವಾಗಿದೆ.



# ಕ್ರೀಡಾ ಸುದ್ದಿಗಳ ದೃಷ್ಟಿಕೋನ ಬದಲಾಗಬೇಕಿದೆ

● ಕೆ.ವಿ.ಪರಮೇಶ್

ಪತ್ರಿಕೋದ್ಯಮದಲ್ಲಿ ಪ್ರಸ್ತುತ ಕ್ರೀಡೆ ಅವಿಭಾಜ್ಯ ಅಂಗ ಎನಿಸಿದೆ. ಅದು ಕೇವಲ ಸುದ್ದಿ ವಿಷಯವಾಗಿ ಉಳಿದಿಲ್ಲ. ಬದಲಾಗಿ ಕ್ರೀಡಾಪಟುಗಳ ಏಳುಬೀಳುಗಳಿಗೂ ಮಾಧ್ಯಮವನ್ನು ಅವಲಂಭಿಸುವಂತಹ ಜೊತೆಗೆ ಇದೇ ಹೊತ್ತಿನಲ್ಲಿ ಮಾಧ್ಯಮಗಳೂ ಕೂಡಾ ಕ್ರೀಡಾವರದಿ ಇಲ್ಲದೆ ಅಪೂರ್ಣ ಎನ್ನುವ ಹಂತಕ್ಕೆ ಬಂದಿರುವುದು ಇವೆರಡರ ನಡುವಿನ ಅವಿನಾಭಾವ ಸಂಬಂಧಕ್ಕೆ ನಿದರ್ಶನ. ಹಾಗಾಗಿ ಮುದ್ರಣ ಮತ್ತು ವಿದ್ಯುನ್ಮಾನ ಎರಡೂ ವಲಯಗಳಲ್ಲಿ ಕ್ರೀಡೆ ತನ್ನದೇ ಛಾಪು ಮೂಡಿಸಿದೆ.

## ದೃಷ್ಟಿಕೋನ ಬದಲಾಗಬೇಕಿದೆ

ಹೌದು. ಅಷ್ಟಕ್ಕೂ ಕ್ರೀಡೆಗಳ ಬಗ್ಗೆ ಹೇಳಹೊರಟರೆ ಅದು ಮುಗಿಯದ ಕಥೆ. ಅದರಲ್ಲಿಯೂ ಟಿವಿ ಮಾಧ್ಯಮ ತನ್ನ ಪ್ರಾಬಲ್ಯ ಮೆರೆಯುತ್ತಿರುವ ಇಂದಿನ ದಿನಮಾನಗಳಲ್ಲಿ ಕ್ರೀಡೆಗಳೆಂದರೆ ವಾಣಿಜ್ಯ ದೃಷ್ಟಿಯಿಂದ ನೋಡುವ ಪರಿಪಾಠ ಬೆಳೆದುಬಿಟ್ಟಿದೆ. ಇದು ಒಂದು ರೀತಿಯಲ್ಲಿ ಈ ಕ್ಷೇತ್ರಕ್ಕೆ ಪೂರಕ ಎನಿಸಿದರೆ, ಮತ್ತೊಂದೆಡೆ ಪಾರಂಪರಿಕ ಕ್ರೀಡೆಗಳಿಗೆ ಮಾರಕವಾಗಲಿದೆ ಎಂದರೆ ಅತಿಶಯೋಕ್ತಿಯಲ್ಲ. ಪ್ರಸ್ತುತ ಕ್ರೀಡಾ ಪತ್ರಿಕೋದ್ಯಮ ಎಂಬುದು ಎಷ್ಟರಮಟ್ಟಿಗೆ ಪ್ರಭಾವ ಬೀರಬಲ್ಲದು ಎನ್ನುವುದಕ್ಕೆ ನಮ್ಮ ಸಾಂಪ್ರದಾಯಿಕ ಅಥವಾ ಗ್ರಾಮೀಣ ಕ್ರೀಡೆಗಳು ವಿಶ್ವಮಟ್ಟದ ಪ್ರತಿಷ್ಠಿತ ಟೂರ್ನಿಗಳಾಗಿ ಮಾರ್ಪಡಾಗುತ್ತಿರುವುದೇ ಸಾಕ್ಷಿ.

## ಕ್ರೀಡಾಪತ್ರಿಕೋಧ್ಯಮದ ಇತಿಹಾಸ

ಕ್ರೀಡಾಪತ್ರಿಕೋದ್ಯಮಕ್ಕೆ ಶತಮಾನದ ಇತಿಹಾಸವಿದೆ. ಇದರತ್ತ ಸ್ವಲ್ಪ ದೃಷ್ಟಿಹರಿಸಿದರೆ ಮೊದಲಿಗೆ ನಮಗೆ ಗೋಚರಿಸುವುದು ವಿಶ್ವದ ದೊಡ್ಡಣ್ಣ ಎನ್ನುವ ಅಮೆರಿಕಾ. 1887ರಲ್ಲಿ ಇಲ್ಲಿ ನಡೆದ ಸ್ಪೋರ್ಟ್ಸ್‌ಕ್ಲಬ್ ನಡುವಿನ ಫುಟ್ಬಾಲ್ ಪಂದ್ಯವೊಂದು ಅಧಿಕೃತವಾಗಿ ಪತ್ರಿಕಾಮಾಧ್ಯಗಳಲ್ಲಿ ಪ್ರಚಾರ ಪಡೆದಿದ್ದು ಇತಿಹಾಸ. ಅಮೆರಿಕಾ ದಿ ರೈಡರ್ಸ್ ಕ್ಲಬ್‌ನ ಅಧ್ಯಕ್ಷ ರಿಚರ್ಡ್ ರೆಂಕೋ ಎಂಬಾತ ಮೊದಲಿಗೆ ತನ್ನ ಸಂಪಾದಕತ್ವದ ಪತ್ರಿಕೆಯಲ್ಲಿ ಅಧಿಕೃತವಾಗಿ ಕ್ರೀಡಾವರದಿಗಳಿಗೆ ಚಾಲನೆ ಕೊಟ್ಟಿದ್ದರು ಎನ್ನುವುದು ಇದೀಗ ಇತಿಹಾಸ. ಬಳಿಕ ಜಗತ್ತಿನ ಅನೇಕ ರಾಷ್ಟ್ರಗಳ ಪತ್ರಿಕೆಗಳು ಕ್ರೀಡೆಗೆ ಆದ್ಯತೆ ಕೊಡಲಾರಂಭಿಸಿದವು.

## ಮಾಧ್ಯಮದಲ್ಲಿ ಆದ್ಯತಾವಿಷಯ

ಭಾರತದಲ್ಲಿ ಸಾಂಪ್ರದಾಯಿಕ ಕ್ರೀಡೆ ಎನಿಸಿದ ಚದುರಂಗಕ್ಕೆ ರಾಜರ ಆಳ್ವಿಕೆ ಕಾಲದಲ್ಲಿಯೇ ಅಧಿಕೃತ ಮಾನ್ಯತೆ ಸಿಕ್ಕಿತ್ತು. ಪ್ರಸ್ತುತ ಚೆಸ್ ಮೂಲ ನಮ್ಮದೇ ಆಗಿದ್ದರೂ ಜಗತ್ತಿನ ಅನೇಕ ದೇಶಗಳಲ್ಲಿ ಪ್ರಮುಖ ಕ್ರೀಡೆ ಎನಿಸಿದೆ. ಹಾಗೆಯೇ ಫುಟ್ಬಾಲ್, ಕಬಡ್ಡಿ, ಹಾಕಿ ಒಂದು ಕಾಲದಲ್ಲಿ ಪ್ರಭುತ್ವ ಮೆರೆದಿದ್ದ ಕ್ರೀಡೆಗಳು. ಪ್ರಸ್ತುತ ಕ್ರಿಕೆಟ್‌ನ ಅಬ್ಬರಕ್ಕೆ ಬಹುತೇಕ ಕ್ರೀಡೆಗಳು ನಗಣ್ಯ ಎನಿಸಿದರೂ ನಿರ್ದಿಷ್ಟ ಅಭಿಮಾನಿಗಳ ಮೂಲಕ ಕೆಲವು ಕ್ರೀಡೆಗಳು ಪ್ರಾಬಲ್ಯ ಸಾಧಿಸಿವೆ. ಇದೆಲ್ಲದಕ್ಕೂ ಮೂಲ ಕಾರಣ ಮಾಧ್ಯಮವೇ ಎನ್ನುವುದು ಉಲ್ಲೇಖಾರ್ಹ.

## ಅನಿವಾರ್ಯತೆ ಸೃಷ್ಟಿಯಾಗಬೇಕಿದೆ

ಕ್ರಿಕೆಟ್ ಫುಟ್ಬಾಲ್‌ಗಳಂತಹ ಪ್ರಭಾವಿ ಕ್ರೀಡೆಗಳು ಮಾಧ್ಯಮಗಳ ಮುಖೇನವೇ ವಿಶ್ವದಾದ್ಯಂತ ಪ್ರಬಲ ಕ್ರೀಡೆಗಳೆನಿಸಿವೆ. ಇದೇ ಸಂದರ್ಭ ಗ್ರಾಮೀಣ ಕ್ರೀಡೆಗಳು ನಿರ್ಲಕ್ಷಿಸಲ್ಪಡುತ್ತಿರುವುದು ವಿಷಾದನೀಯ. ಇದಕ್ಕೂ ಮಾಧ್ಯಮಗಳೇ ಕಾರಣ ಎಂದರೆ ತಪ್ಪಾಗಲಾರದು. ವಾಣಿಜ್ಯ ದೃಷ್ಟಿಕೋನದಿಂದ ಪ್ರಬಲ ಕ್ರೀಡೆಗಳು ತನ್ನ ಪ್ರಾಬಲ್ಯವನ್ನೂ ವೃದ್ಧಿಸಿಕೊಳ್ಳುತ್ತಿವೆ. ಮತ್ತೊಂದೆಡೆ ಪಾರಂಪರಿಕ ಅಥವಾ ಸಾಂಪ್ರದಾಯಿಕ ಹಿನ್ನೆಲೆಯ ಕ್ರೀಡೆಗಳು ವಿನಾಶದತ್ತ ದಾಪುಗಾಲಿಡುತ್ತಿದೆ. ಬಹುರಾಷ್ಟ್ರೀಯ ಕಂಪೆನಿಗಳು ತಮ್ಮ ಹಣದಥೈಲಿ ತುಂಬಿಸಿಕೊಳ್ಳುವ ಏಕೈಕ ಕಾರಣಕ್ಕೆ ಪ್ರಭಾವಿ ಕ್ರೀಡೆಬಿಟ್ಟರೆ ಜಗತ್ತಿನಲ್ಲಿ ಬೇರೆ ಕ್ರೀಡೆಗಳಿಲ್ಲ ಎನ್ನುವಂತಹ ಅನಿವಾರ್ಯ ಸೃಷ್ಟಿಸುವತ್ತ ದಾಪುಗಾಲಿಟ್ಟಿವೆ.

## ಸ್ವಾಗತಾರ್ಹ ಪ್ರಯತ್ನವಿದು

ಪ್ರಸಕ್ತ ಮಾಧ್ಯಮಗಳಲ್ಲಿ ಕ್ರೀಡೆ ಹಲವು ಸಂದರ್ಭಗಳಲ್ಲಿ ಮುಖಪುಟ ಪ್ರಮುಖ ಸುದ್ದಿಯಾಗುತ್ತಿರುವುದು ಹೊರಬರುತ್ತಿರುವುದು ಅತ್ಯಂತ ಸ್ತುತ್ಯಾರ್ಹ. ಅದರಲ್ಲಿಯೂ ಕೇಲವ ದೈನಿಕಗಳಲ್ಲದೆ, ಸಾಪ್ತಾಹಿಕ, ತ್ರೈಮಾಸಿಕ, ಮಾಸಿಕ ಪತ್ರಿಕೆಗಳು ಕ್ರೀಡಾ ಸುದ್ದಿಗಳಿಗೆ ವಿಶೇಷ ಗಮನ ಕೊಡುತ್ತಿರುವುದು ಅಶಾದಾಯಕ ಬೆಳವಣಿಗೆ. ಅದರಲ್ಲಿಯೂ ಭವಿಷ್ಯದಲ್ಲಿ ಕೇವಲ ಚಿತ್ರಪಟಗಳಲ್ಲಿ ನೋಡಬಹುದೇನೋ ಎನ್ನುವ ಆತಂಕದಲ್ಲಿರುವ ನಮ್ಮ ಗ್ರಾಮೀಣ ಮತ್ತು ಜಾನಪದ ಕ್ರೀಡೆಗಳತ್ತಲೂ ಪತ್ರಿಕೆಗಳು ಹಾಗೂ ದೃಶ್ಯಮಾಧ್ಯಮಗಳು ಆದ್ಯಗಮನ ಹರಿಸಿದರೆ ಭವಿಷ್ಯದಲ್ಲಿ ಇಂತಹ ಕ್ರೀಡೆಗಳು ಪುನಶ್ಚೇತನ ಕಂಡುಕೊಳ್ಳುವುದರೊಂದಿಗೆ ವಿಶ್ವಮನ್ನಣೆಗೂ ಪಾತ್ರವಾಗಬಲ್ಲವು. ಇದಕ್ಕೆ ಮಾಧ್ಯಮಗಳ ಇಚ್ಛಾಶಕ್ತಿಯೂ ಅತ್ಯಗತ್ಯ.

## ಗ್ರಾಮೀಣ ಕ್ರೀಡೆಗಳು ನಗಣ್ಯವಲ್ಲ

ಕ್ರೀಡಾ ಕ್ಷೇತ್ರದಲ್ಲಿನ ಹಲವು ತೆರೆಮರೆಯ ಪ್ರತಿಭೆಗಳು ಮಾಧ್ಯಮಗಳ ಸಹಕಾರದಿಂದಲೇ ಪ್ರಜ್ವಲಿಸಿವೆ. ಅದರಲ್ಲಿಯೂ ಸೌಲಭ್ಯವಂಚಿತ ಅಥವಾ ನಿರ್ಲಕ್ಷಿತ ಪ್ರತಿಭೆಗಳನ್ನು ಪತ್ರಿಕೆಗಳು ಕ್ರೀಡಾಜಗತ್ತಿಗೆ ಪರಿಚಯಿಸಿವೆ. ಇದು ಸಹಜವಾಗಿಯೇ ಸರ್ಕಾರ ಅಥವಾ ಸಂಘಸಂಸ್ಥೆಗಳು ಅಂತಹ ಪ್ರತಿಭೆಗಳನ್ನು ಪ್ರೋತ್ಸಾಹಿಸಿರುವ ನಿದರ್ಶನವೂ ನಮ್ಮ ಮುಂದಿದೆ. ಹಾಗಾಗಿ ಮಾಧ್ಯಮಗಳು ಮನಸ್ಸು ಮಾಡಿದರೆ ಇನ್ನೂ ಅಜ್ಞಾತವಾಗಿರುವ ನೂರಾರು ಗ್ರಾಮೀಣ ಕ್ರೀಡಾಪಟುಗಳನ್ನು ಕ್ಷೇತ್ರದ ಮುಂಚೂಣಿ ಸಾಲಿಗೆ ತರಬಹುದು. ಇಂತಹ ಪ್ರಾಮಾಣಿಕ ಪ್ರಯತ್ನ ಆಗಬೇಕಿದೆ.

## ಸಾಧಕರ ಸಾಧನೆ ಪರಿಗಣನೆ

ಇಲ್ಲಿ ಉಲ್ಲೇಖಿಸಬೇಕಾದ ಮತ್ತೊಂದು ಪ್ರಮುಖ ಅಂಶವೆಂದರೆ ಕ್ರೀಡಾಕ್ಷೇತ್ರದಲ್ಲಿ ಉತ್ತಮ ಸಾಧನೆ ತೋರಿದ ಕ್ರೀಡಾಪಟುಗಳಿಗೆ ಸರ್ಕಾರ ಆರ್ಥಿಕ ನೆರವು ನೀಡಿ ಪ್ರೋತ್ಸಾಹಿಸಿದಂತೆ ಕ್ರೀಡಾಪತ್ರಿಕೋದ್ಯಮದಲ್ಲಿ ಉತ್ತಮ ಸಾಧನೆ ಮಾಡಿದವರನ್ನು ಗುರುತಿಸಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ದಿ ಮೈಸೂರು ಪ್ರಿಂಟರ್ಸ್ ಸ್ಥಾಪಿಸಿರುವ 'ನೆಟ್ಟಕಲ್ಲಪ್ಪ' ಸ್ಮಾರಕ ವಾರ್ಷಿಕ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು. ಇದು ರಾಜ್ಯಮಟ್ಟದಲ್ಲಿ ಮಾತ್ರವಲ್ಲದೆ ಕ್ರೀಡಾವಿಭಾಗದಲ್ಲಿ ಉತ್ತಮ ಬರಹ ಅಥವಾ ಸಾಧನೆಗೆ ರಾಷ್ಟ್ರಮಟ್ಟದ ಗೌರವವೂ ಅನೇಕ ಸಂಸ್ಥೆಗಳ ಮೂಲಕ ಅರ್ಹರಿಗೆ ಲಭಿಸುತ್ತಿರುವುದು ವಿಶೇಷ. ಹಾಗಾಗಿ ಮಾಧ್ಯಮಗಳು ಕ್ರೀಡಾವಿಷಯವನ್ನು ಪ್ರಧಾನ ಅಂಶವೆಂದೇ ಪರಿಗಣಿಸುವ ಅನಿವಾರ್ಯತೆ ಇದೆ. ಸರ್ಕಾರವೂ ಕ್ರೀಡಾಪತ್ರಿಕೋದ್ಯಮಕ್ಕೆ ಉತ್ತೇಜನ ನೀಡಬೇಕಿದೆ.

### ಕ್ರೀಡಾಪತ್ರಿಕೆಗಳು ಹೆಚ್ಚಾಗಲಿ

ಕ್ರೀಡಾಕ್ಷೇತ್ರವನ್ನೇ ಗುರಿಯಾಗಿಸಿಕೊಂಡು ಅನೇಕ ಪತ್ರಿಕೆಗಳು ಮಾರುಕಟ್ಟೆ ಪ್ರವೇಶಿಸಿವೆ. ದಿನಪತ್ರಿಕೆಗಳಲ್ಲಿ ನಿತ್ಯ ಕೊನೆಯ ಪುಟ ಕ್ರೀಡೆಗೆ ಮೀಸಲು ಎನ್ನುವಂತಾಗಿದೆ. ಮತ್ತೊಂದೆಡೆ ಕ್ರೀಡಾಸುದ್ದಿಗಳನ್ನೇ ಪೂರ್ಣಪ್ರಮಾಣದಲ್ಲಿ ಓದುಗರಿಗೆ ಉಣಬಡಿಸುತ್ತಿರುವ ಅನೇಕ ಪತ್ರಿಕೆಗಳಿವೆ. ಇವುಗಳ ಸಂಖ್ಯೆ ವೃದ್ದಿಯಾಗುವ ಅಗತ್ಯವಿದೆ. ಇನ್ನೊಂದೆಡೆ ದೃಶ್ಯಮಾಧ್ಯಮಗಳೂ ಕೂಡಾ ನಿತ್ಯ ಅರ್ಧತಾಸು ಕ್ರೀಡಾಸುದ್ದಿಯನ್ನು ಬಿತ್ತರಿಸುತ್ತಿವೆ. ಆದರೆ ಜಂಟಲ್‌ಮನ್ ಗೇಮ್ ಎಂದು ಒಂದು ಕಾಲದಲ್ಲಿ ಕರೆಸಿಕೊಳ್ಳುತ್ತಿದ್ದ ಕ್ರಿಕೆಟ್‌ಗೆ ಕೊಡುತ್ತಿರುವ ಮಹತ್ವವನ್ನು ನಮ್ಮ ರಾಷ್ಟ್ರೀಯ ಕ್ರೀಡೆಯಾಗಿರುವ ಹಾಕಿ ಅಥವಾ ಸಾಂಪ್ರದಾಯಿಕ ಕ್ರೀಡೆ ಕಬಡ್ಡಿಗೆ ಕೊಡುತ್ತಿಲ್ಲ ಎನ್ನುವುದು ವಿಷಾದನೀಯ. ಭವಿಷ್ಯದಲ್ಲಿ ಇದು ಬದಲಾದರೆ ರಾಜ್ಯ, ದೇಶದ ಕ್ರೀಡಾಕ್ಷೇತ್ರ ವಿಶ್ವಮಟ್ಟದಲ್ಲಿ ಪ್ರಜ್ವಲಿಸುವಂತಾಗಬೇಕಿದೆ.





# ರಾಜಕುಮಾರ್ ತಂಡ ನಿರ್ಮಿಸಿದ ರಣಧೀರ ಕಂಠೀರವ

ತೆರೆಮರೆ

ಕನ್ನಡ ಚಿತ್ರ ಇತಿಹಾಸ

ಭಾಗ-50



ಅ.ನಾ.ಪ್ರಹ್ಲಾದರಾವ್
ವಾರ್ತಾ ಇಲಾಖೆ, ನಿವೃತ್ತ ಅಧಿಕಾರಿ

ತೆರೆ ಕಂಡ ನೂರನೆಯ ಕನ್ನಡಚಿತ್ರವಷ್ಟೇ ಅಲ್ಲದೆ, ರಾಜಕುಮಾರ್ ಮೊದಲ ಬಾರಿಗೆ ಐತಿಹಾಸಿಕ ಚಿತ್ರದಲ್ಲಿ ಪಾತ್ರ ಮಾಡಿದ ರಣಧೀರ ಕಂಠೀರವ, ರಾಜಕುಮಾರ್, ಜಿ.ವಿ.ಅಯ್ಯರ್, ಬಾಲಕೃಷ್ಣ ಹಾಗೂ ನರಸಿಂಹರಾಜು ನಿರ್ಮಾಣದ ಚಿತ್ರವೂ ಹೌದು. ಜಿ.ವಿ.ಅಯ್ಯರ್ ಮೊದಲ ಬಾರಿಗೆ ಈ ಚಿತ್ರಕ್ಕಾಗಿ ಗೀತೆಗಳನ್ನು ಬರೆದರು.

ಈ ಕಪ್ಪು-ಬಿಳುಪು ಐತಿಹಾಸಿಕ ಚಿತ್ರ. ಕನ್ನಡ ಚಲನಚಿತ್ರ ಕಲಾವಿದರ ಸಂಘ ಲಾಂಛನದಲ್ಲಿ 1960ರಲ್ಲಿ ತೆರೆ ಕಂಡಿತು. ಚಿತ್ರವನ್ನು ಎನ್.ಸಿ.ರಾಜನ್ ನಿರ್ದೇಶಿಸಿದರು. ಜಿ.ವಿ.ಅಯ್ಯರ್ ಕಥೆ, ಚಿತ್ರಕಥೆ, ಸಂಭಾಷಣೆ, ಗೀತೆಗಳನ್ನು ರಚಿಸಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು. ರಾಜಕುಮಾರ್, ಬಾಲಕೃಷ್ಣ, ನರಸಿಂಹರಾಜು, ಸಂಧ್ಯಾ, ಲೀಲಾವತಿ, ಕೆ.ಎಸ್.ಅಶ್ವತ್, ಜಿ.ವಿ.ಅಯ್ಯರ್, ವೀರಭದ್ರಪ್ಪ, ಈಶ್ವರಪ್ಪ, ರಮಾದೇವಿ, ರಾಮಚಂದ್ರಶಾಸ್ತ್ರಿ, ಕೃಷ್ಣಶಾಸ್ತ್ರಿ, ಎಂ.ಎಸ್.ಸುಬ್ಬಣ್ಣ, ಸೋರಟ್ ಅಶ್ವತ್, ಉದಯಕುಮಾರ್, ಹನುಮಂತರಾವ್,




ಕಾಂತಾರಾವ್, ಅನಿಲ್ ಕುಮಾರ್, ಶ್ಯಾಮ್ ಸುಂದರ್, ಚಿ.ಉದಯ ಶಂಕರ್, ಶಾಂತಮ್ಮ, ನಾಗರತ್ನಮ್ಮ ಅಭಿನಯಿಸಿದರು. ಆರ್.ನಾಗೇಂದ್ರರಾವ್ ಗೌರವ ನಟರಾಗಿ ಅಭಿನಯ ನೀಡಿದರು. ಜಿ.ಕೆ.ವೆಂಕಟೇಶ್ ಸಂಗೀತ ನೀಡಿದ ಚಿತ್ರದಲ್ಲಿ 9 ಹಾಡುಗಳನ್ನು ಅಳವಡಿಸಲಾಗಿತ್ತು. ಪಿ.ಬಿ.ಶ್ರೀನಿವಾಸ್, ಮೋತಿ, ರಾಧಾ ಜಯಲಕ್ಷ್ಮಿ, ಎ.ಪಿ.ಕೋಮಲ, ಸೂಲಮಂಗಲಂ ರಾಜಲಕ್ಷ್ಮಿ, ಪದ್ಮ, ಜಾನಕಿ (ಎ.ವಿ.ಎಂ.), ಜಿ.ಗೋಪಾಲರಾವ್ ಹಿನ್ನೆಲೆ ಗಾಯನ ನೀಡಿದರು. ಮದರಾಸಿನ ವಿಕ್ರಂ ಸ್ಟುಡಿಯೊದಲ್ಲಿ ಚಿತ್ರ ಚಿತ್ರೀಕರಣಗೊಂಡಿತು.

ಚಲನಚಿತ್ರಗಳಲ್ಲಿ ಅವಕಾಶಗಳು ಕಡಿಮೆ ಎಂಬ ಕಾರಣಕ್ಕೆ ಜಿ.ವಿ.ಅಯ್ಯರ್, ರಾಜಕುಮಾರ್, ಬಾಲಕೃಷ್ಣ ಹಾಗೂ ನರಸಿಂಹರಾಜು ಕನ್ನಡ ಚಲನಚಿತ್ರ ಕಲಾವಿದರ ಸಂಸ್ಥೆ ರೂಪಿಸಿಕೊಂಡು ನಾಟಕ ಪ್ರದರ್ಶನ ಮಾಡುತ್ತಿದ್ದರು. ಬಳ್ಳಾರಿ ಶರಬಣ್ಣ ಎಂಬುವರು ಹುಬ್ಬಳ್ಳಿಯಲ್ಲಿ ನಾಟಕ ಪ್ರದರ್ಶಿಸಲು 10,000 ರೂ. ಮುಂಗಡ ನೀಡಿದ್ದರು. ನಾಟಕಗಳ ಪ್ರದರ್ಶನದಿಂದ ಬಂದ ಹಣವನ್ನು ಸೇರಿಸಿ, ರಣಧೀರ ಕಂಠೀರವ ಚಲನಚಿತ್ರ ಮಾಡಲು ನಿರ್ಧರಿಸಿದರು. ವಿಕ್ರಂ ಸಂಸ್ಥೆಯ ಬಿ.ಎಸ್.ರಂಗಾ ತಮ್ಮ ಸ್ಟುಡಿಯೋದ ಸೌಲಭ್ಯಗಳನ್ನು ಒದಗಿಸಲು ಮುಂದೆ ಬಂದರು. 19 ರೀಲುಗಳ ಚಿತ್ರ 5231 ಮೀಟರ್ ಉದ್ದವಿತ್ತು. ಚಿತ್ರ 141 ನಿಮಿಷಗಳ ಅವಧಿಯದಾಗಿತ್ತು.


ಚಿತ್ರ ತಯಾರಾದ ನಂತರ ಚಿತ್ರದ ಬಿಡುಗಡೆಗೆ ಸಮಸ್ಯೆ ಎದುರಿಸಬೇಕಾಯಿತು. ಬಹಳ ಪ್ರಯತ್ನಗಳ ನಂತರ ಚಿತ್ರ ಹಿಮಾಲಯ ಚಿತ್ರಮಂದಿರದಲ್ಲಿ ಬಿಡುಗಡೆಗೊಂಡಿತು. ಆ ಸಮಯದಲ್ಲಿ ಕನ್ನಡ ಹೋರಾಟಗಾರ ವಾಟಾಳ್ ನಾಗರಾಜ್ ಕನ್ನಡಿಗರೊಂದಿಗೆ ಚಿತ್ರದ ಪರವಾಗಿ ಹೋರಾಟ ಮಾಡಿದರು. ಚಿತ್ರ 1992ರಲ್ಲಿ ನಡೆದ ಇಂಟರ್‌ನ್ಯಾಷನಲ್ ಫಿಲ್ಮ್ ಫೆಸ್ಟಿವಲ್ ಆಫ್ ಇಂಡಿಯಾದಲ್ಲಿ ಪ್ರದರ್ಶನಗೊಳ್ಳುವ ಮೂಲಕ ಕನ್ನಡ ಚಿತ್ರಂಗಕ್ಕೆ ಹೆಮ್ಮೆಯನ್ನು ತಂದುಕೊಟ್ಟಿತು.



ರಣಧೀರ ಕಂಠೀರವನಾಗಿ ರಾಜಕುಮಾರ್ ಅಮೋಘ ಅಭಿನಯ ನೀಡಿದ್ದರು. ದೃಶ್ಯವೊಂದರಲ್ಲಿ ರಾಜಕುಮಾರ್ ಅವರನ್ನು ಆನೆ ಸೊಂಡಿಲಿನಿಂದ ಎತ್ತಿ ಎಸೆದದ್ದು ನೋಡುಗರನ್ನು ರೋಮಾಂಚನಗೊಳಿಸಿತ್ತು. ಮತ್ತೊಂದು ದೃಶ್ಯದಲ್ಲಿ ಭಾರೀ ತೂಕದ ಪೈಲ್ವಾನ್ ಬಜ್ಜಯ್ಯನನ್ನು ರಾಜಕುಮಾರ್ ಎತ್ತಿ ನಾಲ್ಕೈದು ಸುತ್ತು ಗಿರಗಿರನೆ ತಿರುಗಿಸಿದ್ದರು.

ಅರಮನೆ ಸಂಪ್ರದಾಯದ ರಾಜಪೋಷಾಕು ಹಾಗೂ ವೇಷಭೂಷಣಗಳನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿ ಪ್ರಸಾಧನ ಕಾರ್ಯ ನಿರ್ವಹಿಸಲಾಗಿತ್ತು. ಸಂಭಾಷಣೆಯಲ್ಲೂ ರಾಜಮನೆತನದ ರೀತಿ, ನೀತಿ, ರಿವಾಜುಗಳನ್ನು ಸಮರ್ಥವಾಗಿ ಬಿಂಬಿಸಲಾಯಿತು. ಮೈಸೂರು ಗೆಜೆಟಿಯರ್, ಎಲ್. ರೈಸ್ ಬರೆದಿರುವ ಮೈಸೂರು ಮತ್ತು ಕೊಡಗು ಗ್ರಂಥಗಳು, ಎಂ.ಶಾಮರಾಯರು ಬರೆದ ಹಳೆಯ ಮೈಸೂರು ಚರಿತ್ರೆ, ಗೋವಿಂದವೈದ್ಯ ಬರೆದ ಕಂಠೀರವ ನರಸರಾಜ ವಿಜಯ, ವಂಶರತ್ನಾಕರ, ಸಂಸ ಅವರು ಬರೆದ ಮಂತ್ರಶಕ್ತಿ, ವಿಗಡವಿಕ್ರಮರಾಯ ಮತ್ತು ಬೆಟ್ಟದ ಅರಸು ಕೃತಿಗಳು ಈ ಚಿತ್ರಕ್ಕೆ ಪ್ರೇರೇಪಣೆ ನಿಡಿದೆ ಎಂದು ಚಿತ್ರದಲ್ಲಿ ಉಲ್ಲೇಖಿಸಲಾಗಿದೆ.



ದಳವಾಯಿ ವಿಕ್ರಮರಾಯ ಶಕ್ತಿಶಾಲಿ. ಇವನ ಕುತಂತ್ರದಿಂದ ಇಮ್ಮಡಿ ರಾಜ ಒಡೆಯ ಕೊಲೆಯಾದ. ನಂತರ ರಣಧೀರ ಕಂಠೀರವ ನರಸರಾಜ ಒಡೆಯರು ಪಟ್ಟಕ್ಕೆ ಬರುತ್ತಾರೆ. ತುಂಬಾ ಶಕ್ತಿಶಾಲಿಯಾದ ರಣಧೀರ ಕಂಠೀರವ ಬಿಜಾಪುರದ ರಣಮಲ್ಲ ಖಾನನೊಡನೆ ಹೋರಾಡಿ ಗೆಲ್ಲುತ್ತಾರೆ. ಮೈಸೂರು ರಾಜ್ಯವನ್ನು ವಿಸ್ತರಿಸಿ, ಸಂಪತ್ತು-ಶಕ್ತಿಯನ್ನು ವರ್ಧಿಸುತ್ತಾರಲ್ಲದೆ, ತಿರುಚನಾಪಲ್ಲಿಯಲ್ಲಿ ಅಜೇಯ ಕುಸ್ತಿಪಟುವನ್ನು ಸೋಲಿಸುತ್ತಾರೆ. ನೃತ್ಯಗಾತಿ ದೊಡ್ಡಿಯನ್ನು ಅರಮನೆಗೆ ಕರೆತರುತ್ತಾರೆ. ರಾಜ ಹಾಗು ದೊಡ್ಡಿಯನ್ನು ಕೊಲೆಮಾಡಲು ದಳವಾಯಿ ಸಂಚು ಹೂಡುತ್ತಾನೆ. ಕಂಠೀರವ ಸಂಚಿನಿಂದ ಪಾರಾದರೂ ದೊಡ್ಡಿ ಹತ್ಯೆಗೀಡಾಗುತ್ತಾಳೆ. ಇದು ಚಿತ್ರದ ಕಥೆ.

## ಪತ್ರಿಕೆ ಗುಣಾತ್ಮಕವಾಗಿದೆ

ನಮಸ್ಕಾರ!...

'ಕೆಂಧೂಳಿ' ತನ್ನ 50 ನೇ ಹುಟ್ಟು ಹಬ್ಬವನ್ನು ಆಚರಿಸಿಕೊಂಡಿರುವ ಈ ಸಂದರ್ಭದಲ್ಲಿ ಅದಕ್ಕೆ ಕಾರಣರಾದ ನಿಮಗೆ ಅಭಿನಂದನೆಗಳು.

ಕನ್ನಡದಲ್ಲಿ ಸದ್ಯ ಕಿಣಚಿಟುಣಧಿ ಟ್ಯಾಬ್ಲಾಯ್ಡ್ ಪತ್ರಿಕೆಗಳ ಬರವನ್ನು ಎದುರಿಸುತ್ತಿದ್ದ್ದೇವೆ.ಇಂತಹ ಸನ್ನಿವೇಶದಲ್ಲಿ 'ಕೆಂಧೂಳಿ' ಬಂದು ಧೂಳೆಬ್ಬಿಸಿದೆ.

ಸುದ್ದಿ ಹಾಗೂ ಮುದ್ರಣದಲ್ಲಿ ತನ್ನ ಗುಣಾತ್ಮಕ ಅಂಶಗಳಿಂದ ಪತ್ರಿಕೆ ರಾಜ್ಯದ ಓದುಗರ ಗಮನ ಸೆಳೆದಿದೆ.ಇದಕ್ಕೆ ಪ್ರತಿವಾರ ಓದುಗರು ಬರೆಯುತ್ತಿರುವ ಪತ್ರಗಳೇ ಸಾಕ್ಷಿ! ಇಂದು ಸುದ್ದಿ ವಿಭಾಗದಲ್ಲಿ ಮುದ್ರಣ ಮಾಧ್ಯಮ ದಿನೇ ದಿನೇ ತನ್ನ ಅಸ್ತಿತ್ವ ಕ್ಷೀಣಿಸಿಕೊಳ್ಳುತ್ತಿದೆ ನಿಜ! ಆದರೆ.., ಮುದ್ರಣ ಮಾಧ್ಯಮಕ್ಕೆ ಗಣನೀಯ ಪ್ರಮಾಣದಲ್ಲಿ ತನ್ನದೇ ಆದ ಪ್ರಜ್ಞಾವಂತರ ಓದುಗರ ದಂಡೇ ಇದೆ.ಓದುಗರು ಮತ್ತು ಬರಹಗಾರರಿಗೆ ಸಾವಿಲ್ಲ! ಎಲ್ಲಿಯವರೆಗೂ ಬರಹಗಾರರು ಇರುತ್ತಾರೊ, ಅಲ್ಲಿಯವರೆಗೂ ಓದುಗರು ಇದ್ದೆ ಇರುತ್ತಾರೆ. ಅದು ಮುದ್ರಣ ಮಾಧ್ಯಮಕ್ಕೂ ಅನ್ವಯಿಸುತ್ತದೆ. ಇನ್ನು ನೀವು ಬರೆಯುವ ಆಪ್ತ ವಿಷಯಗಳ

'ಮನ ಮಿಡಿತ' ಅಂಕಣ ಮನಸ್ಸನ್ನು ತಟ್ಟುತ್ತದೆ.ನಿಮ್ಮ ಸಂಪಾದಕೀಯ ಆಳುವ ಸರ್ಕಾರ ಜನಪ್ರತಿನಿಧಿಗಳಿಗೆ ಎಚ್ಚರ, ಪ್ರಜ್ಞೆ ನೀಡುವುದರ ಜೊತೆ ಚಿಂತನೆಗೂ ಹಚ್ಚುತ್ತದೆ.ಹಿಟ್& ರನ್ ಅಂಕಣ ಕನ್ನಡ ದೃಶ್ಯ ಮಾಧ್ಯಮಗಳ ಎಡವಟ್ಟು,ಅಜ್ಞಾನ, ಅನೀತಿಯ ಬಗ್ಗೆ ಬೆಳಕು ಚೆಲ್ಲುತ್ತದೆ.ಇನ್ನು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಪ್ರಧಾನ ನಿಮ್ಮ ವರದಿಗಳು ರಾಜ್ಯದಲ್ಲಿ ಸಂಚಲನ ಮೂಡಿಸುತ್ತಿವೆ.ಕನ್ನಡದ ಖ್ಯಾತ, ಹಿರಿಯ ಪತ್ರಕರ್ತ ಡಿ.ಉಮಾಪತಿ ಅವರ'ದೆಹಲಿ ದೃಷ್ಟಿ' ಅಂಕಣ ಇತಿಹಾಸದ ಕಹಿ ಸತ್ಯಗಳನ್ನೊಳಗೊಂಡ ವಿಶೇಷ,ಆಸಕ್ತ ಲೇಖನಗಳನ್ನು ನಮಗೆ ಉಣಬಡಿಸುತ್ತಿರುವುದು ಖುಷಿ, ಹೆಮ್ಮೆಯ ವಿಷಯ. ಈ ಅಂಕಣ ಪತ್ರಿಕೆಗೆ ಒಂದು ತೂಕ ತರುತ್ತದೆ.ಹಿರಿಯ ಪತ್ರಕರ್ತ ಎಂ.ಕೆ.ಭಾಸ್ಕರ್ ರಾವ್ ಅವರ 'ರಾಜಸೂತ್ರ' ಅಂಕಣ ಪತ್ರಿಕೆಗೆ ವಿಶೇಷತೆಯನ್ನು ತಂದುಕೊಡುತ್ತದೆ.ಪ್ರಾಧ್ಯಾಪಕ ಡಾ.ಶಿವಕುಮಾರ ಕಂಪ್ಲಿ ಅವರ 'ಸ್ಥಿತಬಿಂಬ' ಅಂಕಣಓದುಗರಿಗೆ ಸಾಹಿತ್ಯದ ಒಳ-ಹೊರ ನೋಟುಗಳನ್ನು ಪರಿಚಯಿಸಿ ಸಾಹಿತ್ಯಿಕವಾಗಿ ಓದುಗರನ್ನು ಸ್ಥಿತಿವಂತರನ್ನಾಗಿಸುತ್ತದೆ. ಡಾ.ಎಸ್.ವೈ.ಸೋಮಶೇಖರ್ ಅವರ 'ಪರಿಶೋಧನೆ' ಅಂಕಣ ನಾಡಿನ ಸುಪ್ರಸಿದ್ಧ ಸ್ಥಳಗಳ ಗಮ್ಯ ಇತಿಹಾಸದ ವೈಭವ, ಮಹತ್ವವನ್ನು ಕಟ್ಟಿಕೊಡುತ್ತದೆ.ಹಾಗೆಯೇ ಅ.ನಾ.ಪ್ರಹ್ಲಾದ್ ರಾವ್ ಅವರ ಕನ್ಸಡ ಸಿನಿಮಾ ಇತಿಹಾಸ ಕುರಿತ 'ತೆರೆಮರೆ' ತಲಸ್ಪರ್ಶಿ ಯಾಗಿರುತ್ತದೆ. ಇನ್ನು 'ಕೆಂಧೂಳಿ'ಯ ಪ್ರಮುಖ ವರದಿಗಾರರಾದ ಪರಶಿವ ಧನಗೂರು ಅವರ ಸ್ಫೋಟಕ ವರದಿಗಳು ಪತ್ರಿಕೆಗೆ ಮೆರುಗು ನೀಡುತ್ತವೆ.ಹಾಗೂ ಕೊನೆಯ ಪುಟದ ಸಿನಿ ಕಹಾನಿಗಳು ಕೂಡ ಪ್ರಸ್ತುತ ತಾಜಾ ಸಿನಿಮಾ ಸುದ್ದಿ,ಚಿತ್ರಗಳ ಮೂಲಕ ಮನಸಿಗೆ ಮುದ ನೀಡುತ್ತವೆ.ಒಟ್ಟಾರೆ ಪತ್ರಿಕೆ ತನ್ನ ತಾಜಾ ಸುದ್ದಿ ಸ್ಫೋಟಕ ವರದಿ,ಗುಣಾತ್ಮಕ ಲೇಖನ,ಅಂಕಣ, ವಿಶ್ಲೇಷಣೆ ಮೂಲಕ ಓದುಗರ ಗಮನ ಸೆಳೆಯುತ್ತಿದೆ.ಇದು ಹೀಗೆ ಮುಂದುವರಿಯಲಿ.ಆದಷ್ಟು ಬೇಗ ಪತ್ರಿಕೆ ತನ್ನ ನೂರನೇ ಸಂಚಿಕೆಯನ್ನು ತಲುಪಲಿ.

ಶುಭವಾಗಲಿ!...

● ಶ್ರೀಧರ್ ಡಿ.ರಾಮಚಂದ್ರಪ್ಪ ತುರುವನೂರು

## ನಿಮ್ಮ ಮಾತು




### ಪತ್ರಿಕೆ ಪ್ರಗತಿಯತ್ತ ಸಾಗಲಿ

ಕೆಂಧೂಳಿ ಎಂಬ ವಾರಪತ್ರಿಕೆ ಅಡಗಿರುವ ವಿಷಯಗಳ ಧೂಳನ್ನು ಎಬ್ಬಿಸುತ್ತಿದೆ. ರಾಜಕೀಯ,ಸಾಹಿತ್ಯ ಸೇರಿದಂತೆ ಸಮಗ್ರ ವಿಷಯಗಳ ಅಂಕಣ ಇದಾಗಿದೆ. ಇನ್ನೂ ಕಲೆ,ಸಾಮಾನ್ಯ ಜ್ಞಾನ ಇನ್ನೂ ಹೆಚ್ಚಿನ ವಿಷಯ ಅಂಕಣಗಳನ್ನು ಒಳಗೊಂಡ ಬರಹಗಳು ಬರಲಿ. ಹೊಸ ಹೊಸ ವಿಷಯಗ ಬರಹ ವಿಶ್ಲೇಷಣೆಗ ಮೂಡಿ ಬರಲಿ ಹಾಗೆಯೇ ಪತ್ರಿಕೆ 100-ಸಾವಿರ ಸಂಚಿಕೆಯ ಗಡಿ ದಾಟಿ ಯಶಸ್ಸನ್ನು ಸಾಗಲಿ ನಿಮ್ಮ ಕನಸು ನನಸಾಗಲಿ ಎಂದು ಹಾರೈಸುವ

● ಪಿ.ಜಿ.ಜಲಜಾಕ್ಷಿ
ಆಲೂರು ಕೂಡ್ಲಿಗಿ(ತಾ)
ಬಳ್ಳಾರಿ ಜಿಲ್ಲೆ.


# ಜೇಮ್ಸ್‌ನಲ್ಲಿ ಪುನೀತ್ ಅವರದ್ದೇ ಧ್ವನಿ



ಜೇಮ್ಸ್ ಪುನೀತ್ ರಾಜಕುಮಾರ್ ಅಭಿನಯದ ಕೊನೆಯ ಸಿನಿಮಾ. ಈ ಚಿತ್ರ ರಿಲೀಸ್ ಮಾಡಲು ಚಿತ್ರತಂಡ ಮುಂದಾಗಿದೆ. ಜೇಮ್ಸ್ ತೆರೆಗೆ ಬರಬೇಕು ಅನ್ನುವುದು ಪ್ರತಿಯೊಬ್ಬ ಕನ್ನಡಿಗನ ಆಸೆ. ಅದನ್ನು ಚಿತ್ರತಂಡ ಈಡೇರಿಸುತ್ತಿದೆ. ಅದರೆ, ಚಿತ್ರದ ಡಬ್ಬಿಂಗ್ ವಿಚಾರಕ್ಕೆ ಬಂದರೆ, ಪುನೀತ್ ಪಾತ್ರದ ಡಬ್ಬಿಂಗ್ ಮುಗಿದಿಲ್ಲ. ಡಬ್ಬಿಂಗ್ ಬಾಕಿ ಇರುವ ಕಾರಣಕ್ಕೆ ಅಪ್ಪುಗೆ ಯಾರು ಧ್ವನಿ ನೀಡುತ್ತಾರೆ ಎನ್ನುವಂತಹ ಪ್ರಶ್ನೆ ಎದುರಾಗಿತ್ತು. ಈಗ ಆ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಅಪ್ಪುಗೆ ಬೇರೆ ಯಾರೂ ಧ್ವನಿ ನೀಡ ಬೇಕಿಲ್ಲ. ಅದರ ಅವಶ್ಯಕತೆ ಇಲ್ಲ ಅಂತಿದೆ ಚಿತ್ರತಂಡ. ಪುನೀತ್ ಅವರ ನೈಜ ಧ್ವನಿಯನ್ನೇ ಸಿನಿಮಾಗೆ ಬಳಸಿ ಕೊಳ್ಳಲು ಚಿತ್ರತಂಡ ಮುಂದಾಗಿದೆ. ಶೂಟಿಂಗ್ ಸಂದರ್ಭದಲ್ಲಿ ಅಪ್ಪು ನಡೆಸಿರುವ ಸಂಭಾಷಣೆಯನ್ನು ಹಾಗೆ ಉಳಿಸಿಕೊಳ್ಳಲಿದೆ ಚಿತ್ರತಂಡ. ಚಿತ್ರೀಕರಣ ವೇಳೆ ರೆಕಾರ್ಡ್ ಆಗಿರುವ ಅದೇ ಸಂಭಾಷಣೆಯನ್ನು ಬಳಸಿಕೊಳ್ಳಲು ಚಿತ್ರತಂಡ ಮುಂದಾಗಿದೆ. ಈ ಕುರಿತಾಗಿ ಸಿನಿಮಾ ತಂಡ ಬಾಂಬೆ ಮೂಲದ ಕಂಪನಿಗಳ ಜೊತೆಗೆ ಚರ್ಚೆ ನಡೆಸುತ್ತಿದೆ. ಅದೇ ಧ್ವನಿಯನ್ನು ಎನ್‌ಹ್ಯಾನ್ಸ್ ಮಾಡುವ ಮೂಲಕ ಬಳಸಿಕೊಳ್ಳಲು ಮುಂದಾಗಿದೆ. ಶತಾಯ ಗತಾಯ ಪ್ರಯತ್ನ ಮಾಡಿ, ತಂತ್ರಜ್ಞಾನ ಬಳಸಿ ಅಪ್ಪು ಧ್ವನಿಯನ್ನು ಹಾಗೆಯೇ ಉಳಿಸಿಕೊಳ್ಳಬೇಕು ಎನ್ನುವ ಪ್ರಯತ್ನಕ್ಕೆ ಜೇಮ್ಸ ಚಿತ್ರತಂಡ ಮುಂದಾಗಿದೆ. ಅಪ್ಪು ಅಭಿನಯದ ಕಟ್ಟ ಕಡೆಯ ಚಿತ್ರದಲ್ಲಿ ಅವರ ಧ್ವನಿ ಇಲ್ಲ ಎಂದಾದರೆ ಅದನ್ನು ನೋಡಿ ಅರಗಿಸಿಕೊಳ್ಳಲು ಕಷ್ಟಕರವಾಗಬಹುದು.

# ವೆಬ್ ಸರಣಿಯತ್ತ ಮುಖಮಾಡಿದ ಟಿ.ಎನ್.ಸೀತಾರಾಮ್

ಜನ ಹೊಸತನವನ್ನು ಇಷ್ಟಪಡುತ್ತಿದ್ದಾರೆ ವೆಬ್‌ಸರಣಿಗಳು ಹೆಚ್ಚು ಜನಪ್ರಿಯಗೊಳ್ಳುತ್ತಿವೆ ಹೀಗಾಗಿ ಟಿ.ಎನ್.ಸೀತಾರಾಮ್ ಅವರು ಧಾರಾವಾಹಿ ಬದಲಿಗೆ ವೆಬ್‌ಸರಣಿ ನಿರ್ದೇಶನದತ್ತ ಮುಖಮಾಡಿದ್ದಾರೆ ಈಗ ಟಿವಿ ಧಾರಾವಾಹಿಗಳಿಗಿಂತಲೂ ವೆಬ್ ಸರಣಿಗಳು ಹೆಚ್ಚು ಜನಪ್ರಿಯತೆ ಗಳಿಸುತ್ತಿವೆ ಹಾಗಾಗಿ ಟಿ.ಎನ್.ಸೀತಾರಾಮ್ ಸಹ ಇದೇ ಮೊದಲ ಬಾರಿಗೆ ಈ ಪ್ರಯೋಗಕ್ಕೆ ಮುಂದಾಗಿದ್ದಾರೆ. ವೆಬ್ ಸರಣಿ ನಿರ್ಮಾಣಕ್ಕೆ ಮರ್ಡರ್ ಮಿಸ್ಟರಿ ಕತೆಯೊಂದನ್ನು ಟಿಎನ್‌ಎಸ್ ಆಯ್ಕೆ ಮಾಡಿಕೊಂಡಿದ್ದಾರೆ ಈ ಲಾಕ್‌ಡೌನ್ ಅವಧಿಯಲ್ಲಿ ಸಾಮಾಜಿಕ ಜಾಲತಾಣಗಳ ಶಕ್ತಿಯನ್ನು ಅರಿತುಕೊಂಡಿರುವ, ಆ ಬಗ್ಗೆ ಸಂಶೋಧನೆ ನಡೆಸಿರುವ ಟಿ.ಎನ್.ಸೀತಾರಾಮ್ ವೆಬ್ ಸರಣಿಯನ್ನು ಟಿವಿಯ ಬದಲಿಗೆ ಸಾಮಾಜಿಕ ಜಾಲತಾಣಕ್ಕಾಗಿ ನಿರ್ಮಾಣ ಮಾಡಲಿರುವುದು ವಿಶೇಷ. ಯೂಟ್ಯೂಬ್‌ನಲ್ಲಿ ಪ್ರಸಾರವಾಗಲಿದೆ ವೆಬ್ ಸರಣಿ 'ಮಾಯಾ ಮರ್ಡರ್ ಕೇಸ್' ಹೆಸರಿನ ವೆಬ್ ಸರಣಿಯನ್ನು ಟಿ.ಎನ್.ಸೀತಾರಾಮ್ ನಿರ್ದೇಶನ ಮಾಡಲಿದ್ದಾರೆ. ಈ ವೆಬ್ ಸರಣಿಗೆ ಕತೆ, ಚಿತ್ರಕತೆ, ಸಂಭಾಷಣೆ ಮತ್ತು ನಿರ್ದೇಶನ ಟಿ.ಎನ್.ಎಸ್ ಅವರದ್ದೇ ಆಗಿರಲಿದೆ. ಈ ವೆಬ್ ಸರಣಿಯು ಯುಟ್ಯೂಬ್‌ನಲ್ಲಿ ಮಾತ್ರವೇ ಪ್ರಸಾರವಾಗುವುದು ವಿಶೇಷ. ಲಾಕ್‌ಡೌನ್ ಅವಧಿಯಲ್ಲಿ ತಮ್ಮ ಮಾಯಾಮೃಗ ಧಾರಾವಾಹಿಯನ್ನು ಯೂಟ್ಯೂಬ್‌ನಲ್ಲಿ ಪ್ರಸಾರ ಮಾಡಿದ್ದರು ಟಿ.ಎನ್.ಸೀತಾರಾಮ್ ಅದಕ್ಕೆ ದೊರೆತ ಬೆಂಬಲದಿಂದ ಪ್ರೇರಿತರಾಗಿ ಈಗ ಯೂಟ್ಯೂಬ್‌ಗಾಗಿಯೇ ಎಕ್ಸ್‌ಕ್ಲೂಸಿವ್ ವೆಬ್ ಸರಣಿ ನಿರ್ದೇಶನ ಮಾಡುತ್ತಿದ್ದಾರೆ. 'ಮಾಯಾ ಮರ್ಡರ್ ಕೇಸ್' ಟಿ.ಎನ್.ಸೀತಾರಾಮ್ ಅವರ ಭೂಮಿಕಾ ಟಾಕೀಸ್ ಹೆಸರಿನ ಯೂಟ್ಯೂಬ್ ಚಾನೆಲ್‌ನಲ್ಲಿ 'ಮಾಯಾ ಮರ್ಡರ್ ಕೇಸ್' ಪ್ರಸಾರವಾಗಲಿದೆ. ಬೆಂಗಳೂರಿನ ರುದ್ರಾಕ್ಷಿಪುರದ ಗಲ್ಲಿಯೊಂದರ ಮನೆಯೊಂದರಲ್ಲಿ ಒಂದು ಮಧ್ಯರಾತ್ರಿ ಹಾರುವ ಗುಂಡು ಒಬ್ಬರನ್ನು ಕೊಲ್ಲುತ್ತದೆ. ಈ ಕೊಲೆಯ ಕತೆಯೇ ಈ 'ಮಾಯಾ ಮರ್ಡರ್ ಕೇಸ್'. ಇದೊಂದು ಕೋರ್ಟ್ ರೂಮ್ ಡ್ರಾಮಾ ಆಗಿರಲಿದೆ ಎಂದು ಟಿ.ಎನ್.ಸೀತಾರಾಮ್ ಹೇಳಿದ್ದಾರೆ. ಕೋರ್ಟ್ ರೂಮ್ ದೃಶ್ಯಗಳು ಟಿ.ಎನ್.ಸೀತಾರಾಮ್ ಅವರ ಟ್ರೇಡ್ ಮಾರ್ಕ್ ಎಂದೇ ಪರಿಗಣಿತವಾಗಿವೆ. ಯೂಟ್ಯೂಬ್ ಚಾನೆಲ್‌ನಲ್ಲಿ ವೆಬ್ ಸರಣಿಯನ್ನು ಉಚಿತವಾಗಿ ನೀಡುತ್ತಾರೆಯೇ ಅಥವಾ ಅದಕ್ಕೆ ಶುಲ್ಕ ಪಾವತಿಸಬೇಕಾಗುತ್ತದೆಯೋ ಕಾದು ನೋಡಬೇಕಿದೆ. ಈಗಾಗಲೇ ಭಾರತದಲ್ಲಿ ಹಲವರು ಯೂಟ್ಯೂಬ್‌ಗಾಗಿಯೇ ಧಾರಾವಾಹಿ, ವೆಬ್ ಸರಣಿಗಳನ್ನು ನಿರ್ಮಿಸಿ ಯಶಸ್ವಿಯೂ ಆಗಿದ್ದಾರೆ. ಕನ್ನಡದ 'ಲೂಸ್ ಕನೆಕ್ಷನ್' ಹಾಗೂ ಇನ್ನೂ ಕೆಲವು ಧಾರಾವಾಹಿಗಳು ಯೂಟ್ಯೂಬ್‌ಗಾಗಿಯೇ ನಿರ್ಮಿಸಿ, ಪ್ರಸಾರ ಮಾಡಲಾಗಿತ್ತು.







# ಪುಷ್ಪ ಚಿತ್ರ್ರದ ಮೂಲಕ ರಶ್ಮಿಕಾ ಮಂದಣ್ಣ ಮತ್ತೊಂದು ದಾಖಲೆ

ರಶ್ಮಿಕಾ ಮಂದಣ್ಣ ಮತ್ತು ಅಲ್ಲು ಅರ್ಜುನ್ ಅಭಿನಯದ ಪುಷ್ಪ ಸಿನಿಮಾ ಸಿಹಿ ಸುದ್ದಿಯನ್ನ ಕೊಟ್ಟಿದೆ. ದೀಪಾವಳಿಯ ಪ್ರಯುಕ್ತ ಇದೇ ನವೆಂಬರ್ 4ಕ್ಕೆ ಪುಷ್ಪ ಸಿನಿಮಾದ ಹೊಸ ಟೀಸರ್ ರಿಲೀಸ್ ಆಗ್ತಿದೆ. ಈಗಾಗಲೇ ಪುಷ್ಪ ಟ್ರೇಲರ್ ಮತ್ತು ಹಾಡುಗಳಿಂದ ಎಲ್ಲರ ಮನಗೆದ್ದಿದೆ. ಅಲ್ಲು ಅರ್ಜುನ್ ಮತ್ತು ಸುಕುಮಾರ್ ಕಾಂಬಿನೇಷನ್ ಅನ್ನುವ ಕಾರಣಕ್ಕೇನೆ ಪುಷ್ಪ ಸಾಕಷ್ಟು ನಿರೀಕ್ಷೆ ಹುಟ್ಟು ಹಾಕಿತ್ತು. ಅದರಲ್ಲೂ ಚಿತ್ರದ ಒಂದಷ್ಟು ತುಣುಕುಗಳು ರಿಲೀಸ್ ಆದ ಬಳಿಕ ಸಿನಿಮಾದ ಮೇಲೆ ಎಲ್ಲಿಲ್ಲದ ನಿರೀಕ್ಷೆ ಹುಟ್ಟಿಸಿದೆ. ಇನ್ನೂ ಇತ್ತೀಚೆಗೆ ರಿಲೀಸ್ ಆದ ಸಾಮಿ ಹಾಡು ಕೂಡ ಸಿಕ್ಕಾಪಟ್ಟೆ ಸದ್ದು ಮಾಡಿದೆ. ರಶ್ಮಿಕಾ ಹಳ್ಳಿ ಹುಡುಗಿಯಾಗಿ ರಾ ಲುಕ್ ನಲ್ಲಿ ಭರ್ಜರಿ ಸ್ಟೆಪ್ಸ್ ಹಾಕಿದ್ದಾರೆ, ರಶ್ಮಿಕ ಡಾನ್ಸ್‌ಗೆ ಅಭಿಮಾನಿಗಳು ಫಿದಾ ಆಗಿದ್ದಾರೆ. ಈ ಮೂಲಕ ರಶ್ಮಿಕಾ ಸಿನಿಮಾ ರಂಗದಲ್ಲಿ ಮತ್ತೊಂದು ದಾಖಲೆ ಮಾಡಲಿದ್ದಾರೆ. ಪುಷ್ಪ ರಶ್ಮಿಕಾ ಸಿನಿಮಾ ಜೀವನದಲ್ಲಿ ಒಂದು ಮೈಲಿಗಲ್ಲಾಗಿ ಉಳಿಯಲಿದೆ. ರಶ್ಮಿಕಾ ಮೊದಲ ಬಾಲಿವುಡ್ ಚಿತ್ರದ ರಿಲೀಸ್ ಡೇಟ್ ಅನೌನ್ಸ್ ಪುನೀತ್ ಸ್ಮರಣಾರ್ಥ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿದ ನಟಿ ನಟಿ ರಶ್ಮಿಕಾ ಮಂದಣ್ಣ ಸ್ಯಾಂಡಲ್‌ವುಡ್ ಬಳಿಕ ತಮಿಳು, ತೆಲುಗಿನಲ್ಲಿ ಮಾತ್ರವಲ್ಲದೇ ಬಾಲಿವುಡ್‌ಗೂ ಎಂಟ್ರಿ ಕೊಟ್ಟಿದ್ದಾರೆ. ಬಾಲಿವುಡ್‌ನ ಮಿಷನ್ ಮಜ್ನು ಸಿನಿಮಾದ ಮೂಲಕ ತಮ್ಮ ಬಿಟೌನ್ ಜರ್ನಿಯನ್ನು ರಶ್ಮಿಕಾ ಶುರು ಮಾಡಿದ್ದಾರೆ. ಈ ಚಿತ್ರದಲ್ಲಿ ರಶ್ಮಿಕಾ ನಟ ಸಿದ್ಧಾರ್ಥ್ ಮಲ್ಹೋತ್ರ ಜೊತೆಗೆ ತೆರೆ ಹಂಚಿಕೊಳ್ಳುತ್ತಿದ್ದಾರೆ. ಸದ್ಯ ಮಿಷನ್ ಮಜ್ನು ತೆರೆಗೆ ಬರೋಕೆ ಸಜ್ಜಾಗಿದೆ. 2022 ಮೇ 13 ರಂದು ಮಿಷನ್ ಮಜ್ನು ತೆರೆಗೆ ಬರಲಿದೆ. ಈ ವಿಚಾರವನ್ನು ಚಿತ್ರತಂಡ ಅಧಿಕೃತವಾಗಿ ಪ್ರಕಟ ಮಾಡಿದೆ. ಈ ಚಿತ್ರದೊಂದಿಗೆ ರಶ್ಮಿಕಾ ಮಂದಣ್ಣ ಅಮಿತಾಬ್ ಬಚ್ಚನ್ ಜೊತೆಗೆ ಗುಡ್ ಬೈ ಚಿತ್ರದಲ್ಲೂ ಕಾಣಿಸಿಕೊಳ್ಳುತ್ತಾ ಇದ್ದಾರೆ. ಸದ್ಯ ರಶ್ಮಿಕಾಳ ಮೊದಲ ಬಾಲಿವುಡ್ ಸಿನಿಮಾ ಆಕೆಯ ಕೈ ಹಿಡಿಯುತ್ತಾ..? ಚಿತ್ರ ರಿಲೀಸ್ ಬಳಿಕ ಬಾಲಿವುಡ್‌ನಲ್ಲಿ ರಶ್ಮಿಕಾಗೆ ಆಫರ್‌ಗಳು ಹೆಚ್ಚಾಗುತ್ತವೆಯಾ ಎನ್ನುವ ಬಗ್ಗೆ ಕುತೂಹಲ ಮೂಡಿದೆ. ಆದ್ರೆ ಸದ್ಯ ರಶ್ಮಿಕಾ ತಮ್ಮ ಮೊದಲ ಬಾಲಿವುಡ್ ಚಿತ್ರದ ರಿಲೀಸ್‌ಗಾಗಿ ಕಾಯುತ್ತಿದ್ದಾರೆ.

KENDHOOLI, Kannada Weekly Printed by, Published by, Owned by & Edited by: T MANJUNATHA, DS MAX SAVVY APARTMENT, PLOT NO 202,2ND FLOOR, JP NAGARA 9TH PHASE, AMRUTHNAGARA MAIN ROAD, ANJANAPURA BANGALORE 560108
Printed at : Brundavan printers, 88/1 1st cross, sameerpura road, Kg nagara Bengaluru-560019
Mob: +91 99161 91222. email: kendhooli18@gmail.com
The Editor is Responsible for selection of news under the PRB Act